Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ


JANASHAKTHI KANNADA PATRIKE

ಸಂಪುಟ–18 | ಸಂಚಿಕೆ–5 | ಜನವರಿ 29–ಫೆಬ್ರವರಿ 4, 2024 | ಪುಟ 16 | ರೂ. 10/–
Volume-18 | Issue-5 | January 29-February 4, 2024 | Pages:16 | Price: 10/-



ಅಭಿವ್ಯಕ್ತಿ ಸ್ವಾತಂತ್ರ್ಯದ ಕತ್ತು ಹಿಸುಕುವ ಪ್ರಸಾರ ಸೇವಾ ಮಸೂದೆ

ಕೆರಗೋಡು: ಕೋಮುವಾದಿಗಳ ಆಟಕ್ಕೆ ಜನತೆ ಬಲಿಯಾಗಬಾರದು



ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಮಂದಿರ ಇರಲಿಲ್ಲವೇ?

ಆಂಧ್ರ: ಅಂಗನವಾಡಿ ನೌಕರರ 42 ದಿನಗಳ ಹೋರಾಟಕ್ಕೆ ಜಯ

‘ಅಗ್ನಿಪಥ್’ ಯೋಜನೆ ಒಳ-ಹೊರಗು

ಆಂಧ್ರಪ್ರದೇಶ: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಐತಿಹಾಸಿಕ

42 ದಿನಗಳ ಯಶಸ್ವಿ ಮುಷ್ಕರ

13 ಬೇಡಿಕೆಗಳ ಪೈಕಿ 11 ಬೇಡಿಕೆಗಳನ್ನು ಒಪ್ಪಿಕೊಂಡ ರಾಜ್ಯ ಸರ್ಕಾರ



ಆಂಧ್ರಪ್ರದೇಶದಲ್ಲಿ ನಡೆದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ 42 ದಿನಗಳ ಹೋರಾಟ ಯಶಸ್ವಿಯಾಗಿದೆ. ಆಂಧ್ರಪ್ರದೇಶದ ಸಿಐಟಿಯು, ಎಐಟಿಯುಸಿ, ಐಎಫ್‌ಟಿಯು ನೇತೃತ್ವದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಂಘಟನೆಗಳು ಒಟ್ಟಾಗಿ, ರಾಜ್ಯದ ಒಂದು ಲಕ್ಷದ ಐದು ಸಾವಿರ ಅಂಗನವಾಡಿಗಳ ನೌಕರರು ಆರಂಭಿಸಿದ ಮುಷ್ಕರವು ಡಿಸೆಂಬರ್ 12 ರಂದು ಪ್ರಾರಂಭವಾಗಿ, ಸರ್ಕಾರದ ಹಲವು ರೀತಿಯ ಬೆದರಿಕೆಗಳು, ಬಂಧನ, ಎಸ್ಮಾ ಕಾಯಿದೆ ಜಾರಿ ಸೇರಿದಂತೆ ಮುಷ್ಕರವನ್ನು ಹತ್ತಿಕ್ಕುವ ಪ್ರಯತ್ನಗಳನ್ನು ದಿಟ್ಟವಾಗಿ ಮತ್ತು ಒಗ್ಗಟ್ಟಿನಿಂದ ಎದುರಿಸಿ ಜನವರಿ 22 ರವರೆಗೆ ನಡೆಯಿತು. ಮುಷ್ಕರ ನಿರತರು ಎತ್ತಿದ 13 ಬೇಡಿಕೆಗಳ ಪೈಕಿ 11 ಬೇಡಿಕೆಗಳನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ.

ಅಧಿಕಾರಿಗಳು, ಪೊಲೀಸರು, ಸ್ಥಳೀಯ ಪಂಚಾಯ್ತಿ ಅಧಿಕಾರಿಗಳ ಬಳಕೆಯ ಮೂಲಕ, ಎಸ್ಮಾ ಕಾಯ್ದೆಯನ್ನು ಪ್ರಯೋಗಿಸುವ ಮೂಲಕ ಹೋರಾಟವನ್ನು ಹತ್ತಿಕ್ಕುವ ಹಲವು ರೀತಿಯ ಪ್ರಯತ್ನಗಳ ನಡುವೆಯೂ, ಕಠಿಣ ಹಾದಿಯಲ್ಲಿ ನಡೆದ ಆಂಧ್ರಪ್ರದೇಶದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹೋರಾಟಕ್ಕೆ ಕಡೆಗೂ ಯಶಸ್ಸು ಕಂಡಿದೆ. 2023ರ ಡಿಸೆಂಬರ್ 12 ರಿಂದ 2024ರ ಜನವರಿ 22 ರವರೆಗೆ 42 ದಿನಗಳ ಕಾಲ ನಿರಂತರವಾಗಿ ನಡೆದ ಹೋರಾಟ ಗೆಲುವಿನೊಂದಿಗೆ ಅಂತ್ಯಗೊಂಡಿದೆ.

ನವೆಂಬರ್ 16, 2023 ರಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಇತರ ರಾಜ್ಯ ಅಧಿಕಾರಿಗಳಿಗೆ ಮುಷ್ಕರದ ನೋಟೀಸ್ ನೀಡಲಾಯಿತು. ಅದರ ಪ್ರತಿಗಳನ್ನು ತಮ್ಮ ವ್ಯಾಪ್ತಿಯಲ್ಲಿರುವ ಐಸಿಡಿಎಸ್ ನ ಯೋಜನಾ ನಿರ್ದೇಶಕರು ಮತ್ತು ಯೋಜನಾಧಿಕಾರಿಗಳಿಗೂ ಕೊಡಲಾಯಿತು. ಸರ್ಕಾರ ಡಿಸೆಂಬರ್ ಮೊದಲ ವಾರದವರೆಗೆ ಈ ನೋಟೀಸ್ ಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಅದೇ ಸಮಯದಲ್ಲಿ ರಾಜ್ಯದಲ್ಲಿ ಮೈಕೆಲ್ ಚಂಡಮಾರುತ ಅಬ್ಬರಿಸಿತು. ಈ ಕಾರಣದಿಂದಾಗಿ, ಮೊದಲ ವಾರದಲ್ಲಿ ಫಲಾನುಭವಿಗಳಿಗೆ ಪಡಿತರ ಸರಬರಾಜು ಮಾಡಬೇಕಾದ ಕಾರಣದಿಂದಾಗಿ ಮುಷ್ಕರವನ್ನು ಮುಂದೂಡುವಂತೆ ಅಂಗನವಾಡಿ ಸಂಘಟನೆಗಳನ್ನು ಸರ್ಕಾರ ಒತ್ತಾಯಿಸಿತು. ಸರ್ಕಾರದ ಮನವಿಗೆ ಸ್ಪಂದಿಸಿದ ಮೂರೂ ಸಂಘಟನೆಗಳು ಮುಷ್ಕರವನ್ನು ನಾಲ್ಕು ದಿನಗಳ ಕಾಲ ಮುಂದೂಡಲು ಒಪ್ಪಿಗೆ ಸೂಚಿಸಿದವು. ನಂತರ ಡಿಸೆಂಬರ್ 8 ರಿಂದ ನಡೆಯಬೇಕಿದ್ದ ಮುಷ್ಕರವನ್ನು ಡಿಸೆಂಬರ್ 12 ಕ್ಕೆ ಆರಂಭಿಸಲು ನಿರ್ಧರಿಸಲಾಯ್ತು.

ಮುಷ್ಕರ ಪ್ರಾರಂಭ

ನಂತರವೂ ಸರ್ಕಾರವು ಮೂರು ಅಂಗನವಾಡಿ ಸಂಘಟನೆಗಳೊಂದಿಗೆ ನಡೆಸಿದ ಚರ್ಚೆಯಲ್ಲಿ ಅವರ ಬೇಡಿಕೆಗಳನ್ನು ಒಪ್ಪಿಕೊಳ್ಳಲಿಲ್ಲ. ಇದರಿಂದಾಗಿ ಅವರು ಡಿಸೆಂಬರ್ 12, 2023 ರಂದು ಮುಷ್ಕರವನ್ನು ಪ್ರಾರಂಭಿಸಿದರು. ಎಲ್ಲಾ 55,000 ಅಂಗನವಾಡಿ ಕೇಂದ್ರಗಳನ್ನು ಮುಚ್ಚಿದ ನೌಕರರು ಮುಷ್ಕರದಲ್ಲಿ ಪಾಲ್ಗೊಂಡರು. ರಾಜ್ಯಾದ್ಯಂತ ಪ್ರತಿದಿನ 283 ಕೇಂದ್ರಗಳಲ್ಲಿ ಸೇರುವ ಮೂಲಕ ವಿವಿಧ ರೀತಿಗಳಲ್ಲಿ ಪ್ರತಿಭಟನೆಗಳನ್ನು ನಡೆಸಿದರು. ಈ ನಡುವೆ ಐಸಿಡಿಎಸ್ ಅಧಿಕಾರಿಗಳೊಂದಿಗೆ ನಡೆಸಿದ ಚರ್ಚೆ ಯಾವುದೇ ಸಕಾರಾತ್ಮಕ ಫಲಿತಾಂಶವನ್ನು ನೀಡಲಿಲ್ಲ. ಸಂಘಟನೆಗಳ ಮೂಲಕ, ಧರಣಿಗಳು ಮತ್ತು ಇತರ ವಿಧಾನಗಳ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರುತ್ತಲೇ ಇದ್ದವು.

ಗ್ರಾಮ ವಾರ್ಡ್ ಗಳ ಆಡಳಿತ ಸಿಬ್ಬಂದಿಗಳ ಮೂಲಕ

ಈ ನಡುವೆ ಗ್ರಾಮ ವಾರ್ಡ್ ಗಳ ಆಡಳಿತಾಧಿಕಾರಿಗಳು ಮತ್ತು ಸಿಬ್ಬಂದಿಗಳ ಮೂಲಕ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಮುಂದಾಯಿತು. ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳಿಂದ ಹೊಸದಾಗಿ ಸಿಬ್ಬಂದಿಗಳನ್ನು ನೇಮಕಮಾಡಲಾಯಿತು. ಇದಕ್ಕೆ ಪ್ರತಿಯಾಗಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಫಲಾನುಭವಿಗಳು ಹಾಗೂ ಇತರೆ ಜನ ಸಮುದಾಯದವರನ್ನು ಸಜ್ಜುಗೊಳಿಸಿ, ಅಧಿಕಾರಿಗಳು ಕೇಂದ್ರಗಳನ್ನು ತೆರೆಯದಂತೆ ತಡೆಯಲು ದೃಢವಾಗಿ ನಿಂತರು. ಕೇಂದ್ರಗಳನ್ನು ಬಲವಂತವಾಗಿ ತೆರೆದ ಪ್ರಕರಣಗಳಲ್ಲಿಯೂ ಫಲಾನುಭವಿಗಳು ತಮ್ಮ ಮಕ್ಕಳನ್ನು ಇಂತಹ ಸಿಬ್ಬಂದಿಗಳಿರುವ ಅಂಗನವಾಡಿಗೆ ಕಳುಹಿಸಲು ನಿರಾಕರಿಸಿದರು.

ಮುಷ್ಕರ ನಿರತ ಅಂಗನವಾಡಿ ಕಾರ್ಯಕರ್ತೆಯರು ಕ್ರಿಸ್ಮಸ್, ಹೊಸ ವರ್ಷದ ದಿನ, ಸಂಕ್ರಾಂತಿಯನ್ನು ಮುಷ್ಕರದ ಟೆಂಟ್ ಗಳಲ್ಲಿಯೇ ಆಚರಿಸಬೇಕಾಯಿತು.

ಸಚಿವರ ನಿವಾಸದ ಮುಂದೆ ಧರಣಿ

ಇತ್ಯರ್ಥಕ್ಕೆ ಆಗ್ರಹಿಸಿ ಮುಷ್ಕರ ನಿರತ ಅಂಗನವಾಡಿ ಕಾರ್ಯಕರ್ತೆಯರು ಶಾಸಕರು, ಸಚಿವರು ಸೇರಿದಂತೆ ವಿವಿಧ ಜನಪ್ರತಿನಿಧಿಗಳನ್ನು ಸಂಪರ್ಕಿಸಿ ಮನವಿ ಪತ್ರ ಸಲ್ಲಿಸಿದರು. ನೂರಾರು ಅಂಗನವಾಡಿ ಕಾರ್ಯಕರ್ತೆಯರು ಕೆಲವು ಸಚಿವರ ನಿವಾಸದ ಮುಂದೆ ಗಂಟೆಗಟ್ಟಲೆ ಧರಣಿ ನಡೆಸಿದರೂ ಸರ್ಕಾರ ಸ್ಪಂದಿಸಲಿಲ್ಲ. ಇವರ ನ್ಯಾಯಸಮ್ಮತ ಬೇಡಿಕೆಗಳನ್ನು ಪರಿಹರಿಸುವ ಬದಲು, ಸರ್ಕಾರವು ಕಾನೂನುಬಾಹಿರವಾಗಿ ಮುಷ್ಕರವನ್ನು ನಿಷೇಧಿಸಲು ಅಗತ್ಯ ಸೇವೆಗಳ ನಿರ್ವಹಣಾ ಕಾಯಿದೆ (ಎಸ್ಮಾ) ಅನ್ನು ಪ್ರಯೋಗಿಸಿತು.

ಜನವರಿ 11, 2024 ರಂದು, ಕ್ಯಾಬಿನೆಟ್ ಉಪಸಮಿತಿಯು ಮುಷ್ಕರದ ಸಂಘಟನೆಗಳನ್ನು ಮಾತುಕತೆಗೆ ಆಹ್ವಾನಿಸಿತು, ಆದರೆ ಚರ್ಚೆಗಳು ಸಕಾರಾತ್ಮಕ ಫಲಿತಾಂಶವನ್ನು ನೀಡಲಿಲ್ಲ. ತರುವಾಯ, ಸರ್ಕಾರವು ಅಂಗನವಾಡಿ ನೌಕರರಿಗೆ ಬೆದರಿಕೆ ಹಾಕಲು ಮುಂದಾಯಿತು, ಮುಷ್ಕರವನ್ನು ಕೊನೆಗೊಳಿಸಿ ತಮ್ಮ ಕರ್ತವ್ಯವನ್ನು ಪುನರಾರಂಭಿಸ ಬೇಕೆಂದು ಒತ್ತಡ ಹೇರಿತು.

ದೂರವಾಣಿ ಕರೆ ಮಾಡಿ ಬೆದರಿಸಿದರು

ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಮೇಲೆ ಸಿಡಿಎಸ್ ಯೋಜನಾಧಿಕಾರಿಗಳು ಮತ್ತು ಮೇಲ್ವಿಚಾರಕರ ಮೂಲಕ ಒತ್ತಡ ಹೇರಿತು. ಅವರು ನಿರಂತರವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ದೂರವಾಣಿ ಕರೆ ಮಾಡಿ ಬೆದರಿಸಿ ಕೆಲಸದಿಂದ ವಜಾಗೊಳಿಸುವ ಹಾಗೂ ಹೊಸ ಸಿಬ್ಬಂದಿ ನೇಮಕದ ಎಚ್ಚರಿಕೆ ನೀಡಿದರು. ಯೋಜನಾ ಅಧಿಕಾರಿಗಳು ಮತ್ತು ಮೇಲ್ವಿಚಾರಕರು ಸಹಾಯಕರನ್ನು ತಮ್ಮ ಕರ್ತವ್ಯಕ್ಕೆ ಮರಳಲು ಸಕ್ರಿಯವಾಗಿ ಪ್ರೋತ್ಸಾಹಿಸಿದರು. ಅದೇ ಕೇಂದ್ರದಲ್ಲಿ ಕಾರ್ಮಿಕರ ಹುದ್ದೆಗಳಿಗೆ ತಕ್ಷಣವೇ ಬಡ್ತಿ ನೀಡುವುದಾಗಿ ಭರವಸೆ ನೀಡಿದರು. ಈ ಪ್ರಯತ್ನಗಳು ಮತ್ತು ನಿರಂತರ ಕಿರುಕುಳದ ಹೊರತಾಗಿಯೂ, ಬಹುತೇಕ ಯಾರೂ ತಮ್ಮ ಕರ್ತವ್ಯಗಳನ್ನು ಪುನರಾರಂಭಿಸಲು ಮುಂದಾಗಲಿಲ್ಲ.

"ಜಗನ್ ಅನ್ನ ಕು ಚೇಬುಡಂ"

ತಮ್ಮ ಆಂದೋಲನವನ್ನು ತೀವ್ರಗೊಳಿಸಲು ಅಂಗನವಾಡಿ ಸಂಘಟನೆಗಳು ಫಲಾನುಭವಿಗಳು ಮತ್ತು ರಾಜ್ಯದ ಜನರಿಂದ ಒಂದು ಕೋಟಿ ಸಹಿ ಸಂಗ್ರಹಿಸಲು ಕರೆ ನೀಡಿದ್ದವು. "ಜಗನ್ ಅನ್ನ ಕು ಚೇಬುಡಂ" (ಜಗನ್ ಅಣ್ಣನಿಗೆ ಹೇಳೋಣ) ಎಂದು ಕರೆಯಲ್ಪಡುವ ಘೋಷಣೆಯೊಂದಿಗೆ ಮುಖ್ಯಮಂತ್ರಿಗೆ ಸಹಿಗಳನ್ನು ಸಲ್ಲಿಸುವ ಗುರಿಯನ್ನು ಹೊಂದಿತ್ತು. ಸಂಘಟನೆಗಳು ಜನವರಿ 20 ರೊಳಗೆ ತಮ್ಮ ಗುರಿಯನ್ನು ಯಶಸ್ವಿಯಾಗಿ ತಲುಪಿದವು. ಇದಕ್ಕೆ ಜನರಿಂದ ವ್ಯಾಪಕ ಬೆಂಬಲ ದೊರಕಿತು.

ಉಪವಾಸ ಸತ್ಯಾಗ್ರಹ

ಮತ್ತಷ್ಟು ಬಲವಂತ ಮಾಡುವ ಪ್ರಯತ್ನವಾಗಿ, ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು (ಐಸಿಡಿಪಿಒ) ಶೋಕಾಸ್ ನೋಟೀಸ್ ಮತ್ತು ಪತ್ರಗಳನ್ನು ನೀಡಿದರು. ನಿರ್ದಿಷ್ಟ ಅವಧಿಯ ನಂತರ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಆ ನೋಟೀಸ್ ನಲ್ಲಿ ಎಚ್ಚರಿಸಲಾಗಿತ್ತು.

ಪ್ರಗತಿ ಕಾಣದ ಹಿನ್ನೆಲೆಯಲ್ಲಿ ಅಂಗನವಾಡಿ ಸಂಘಟನೆಗಳು ಜನವರಿ 17ರಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಆರಂಭಿಸಲು ನಿರ್ಧರಿಸಿದವು. ಈ ನಿರ್ಧಾರವು ಕಾರ್ಮಿಕ ವರ್ಗ ಮತ್ತು ಸಮಾಜದ ವಿವಿಧ ಪ್ರಜಾಸತ್ತಾತ್ಮಕ ವರ್ಗಗಳಿಂದ ಗಮನಾರ್ಹ ಒಗ್ಗಟ್ಟು ಮತ್ತು ಬೆಂಬಲವನ್ನು ಹುಟ್ಟುಹಾಕಿತು. ಮಂಡಲ, ಪಟ್ಟಣ ಮತ್ತು ಜಿಲ್ಲಾ ಮಟ್ಟದಲ್ಲಿ ಧರಣಿ, ಮೆರವಣಿಗೆ ಮತ್ತು ರಸ್ತೆ ತಡೆಗಳಂತಹ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಒಗ್ಗಟ್ಟನ್ನು ವ್ಯಕ್ತಪಡಿಸುವಲ್ಲಿ ಕಾರ್ಮಿಕ ಸಂಘಟನೆಗಳು ನಿರ್ಣಾಯಕ ಪಾತ್ರವನ್ನು ವಹಿಸಿದವು. ಕಿಸಾನ್, ಕೃಷಿ ಕಾರ್ಮಿಕರು, ಕೆವಿಪಿಎಸ್ ಹಾಗೂ ಇತರೆ ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳು ಈ ಹೋರಾಟಕ್ಕೆ ಒಗ್ಗಟ್ಟಿನಿಂದ ಬೆಂಬಲ ಸೂಚಿಸಿದವು. ಉಪವಾಸ ಸತ್ಯಾಗ್ರಹ ಮತ್ತು ಸಾಮೂಹಿಕ ಚಟುವಟಿಕೆಗಳನ್ನು ವಿಫಲಗೊಳಿಸಲು ಸರ್ಕಾರವು ಸಾವಿರಾರು ಪೊಲೀಸರನ್ನು ನಿಯೋಜಿಸಿತು.

ನಾಲ್ಕನೇ ದಿನಕ್ಕೆ ಇಬ್ಬರು ಪ್ರಮುಖ ನಾಯಕರ ಆರೋಗ್ಯ ಹದಗೆಟ್ಟಿತು. ಅವರನ್ನು ಪೊಲೀಸರು ಬಲವಂತವಾಗಿ ಆಸ್ಪತ್ರೆಗೆ ಸ್ಥಳಾಂತರಿಸಿದರು. ಪ್ರತಿಭಟನೆಯನ್ನು ಹತ್ತಿಕ್ಕುವ ಅಂತಿಮ ಪ್ರಯತ್ನದಲ್ಲಿ, ಜನವರಿ 21 ರ ಮಧ್ಯರಾತ್ರಿ ಉಪವಾಸ ಶಿಬಿರವನ್ನು ಹಾಳುಮಾಡಲು ಸರ್ಕಾರವು ಸಾವಿರಾರು ಪೊಲೀಸರನ್ನು ನಿಯೋಜಿಸಿತು. ಡಿಸಿಪಿ ನೇತೃತ್ವದಲ್ಲಿ ಪುರುಷ ಪೊಲೀಸರು ಮನಬಂದಂತೆ ಟೆಂಟ್ ಅನ್ನು ಹಾಳು ಮಾಡಿದರು. ಅವರು ಬೀದಿ ದೀಪಗಳನ್ನು ಆರಿಸಿದರು ಮತ್ತು ಜನವರಿ 22 ರ ಮುಂಜಾನೆ 3 ಗಂಟೆಯ ಸುಮಾರಿಗೆ ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಂಡರು.

ಪೊಲೀಸರಿಂದ ಹಲವರ ಬಂಧನ

ಸರ್ಕಾರ ಶೋಕಾಸ್ ನೋಟೀಸ್ ಜಾರಿ ಮಾಡಿ ಅಂಗನವಾಡಿ ಕಾರ್ಯಕರ್ತೆಯರನ್ನು ಕೆಲಸದಿಂದ ವಜಾಗೊಳಿಸಲು ಯತ್ನಿಸುತ್ತಿದ್ದಂತೆ ಸಂಘಟನೆಗಳು ಮುಷ್ಕರ ನಿರತ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ರಾಜ್ಯ ರಾಜಧಾನಿಯಲ್ಲಿ ಸಮಾವೇಶಗೊಂಡು ಜನವರಿ 22ರಂದು ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರಿಗೆ ಒಂದು ಕೋಟಿ ಸಹಿಯೊಂದಿಗೆ ಜ್ಞಾಪಕ ಪತ್ರ ಸಲ್ಲಿಸುವಂತೆ ಕರೆ ನೀಡಲಾಯಿತು. ಪ್ರತಿಭಟನಾಕಾರರನ್ನು ವಿಜಯವಾಡಕ್ಕೆ ತಲುಪದಂತೆ ತಡೆಯಲು ಸರ್ಕಾರ ತೀವ್ರವಾಗಿ ಪ್ರಯತ್ನಿಸಿತು. ಈ ಎಲ್ಲಾ ಅಡೆತಡೆಗಳನ್ನು ಧಿಕ್ಕರಿಸಿ ಸಾವಿರಾರು ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಿಎಂಗೆ ಮನವಿ ಪತ್ರದೊಂದಿಗೆ ವಿಜಯವಾಡ ತಲುಪುವಲ್ಲಿ ಯಶಸ್ವಿಯಾದರು. ಆದರೆ, ವಿಜಯವಾಡದ ಬಿಆರ್‌ಟಿಎಸ್ ರಸ್ತೆ ಜಂಕ್ಷನ್‌ನಲ್ಲಿ ಜಮಾಯಿಸಿದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಚದುರಿಸಿ ಬಂಧಿಸಿದ ಪೊಲೀಸರು ಅಮಾನವೀಯವಾಗಿ ವರ್ತಿಸಿದರು.

ಎಡಪಕ್ಷಗಳ ಬೆಂಬಲ

ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಅಂಗನವಾಡಿಗಳ ನಿಜವಾದ ಬೇಡಿಕೆಗಳನ್ನು ಸರ್ಕಾರವು ಪರಿಹರಿಸಬೇಕೆಂದು ಒತ್ತಾಯಿಸಿ ಮುಷ್ಕರಕ್ಕೆ ಬೆಂಬಲವನ್ನು ನೀಡಿದವು. ವೈಎಸ್‌ಆರ್‌ಸಿಪಿ ಮತ್ತು ಬಿಜೆಪಿ ಹೊರತುಪಡಿಸಿ ಎಲ್ಲಾ ಪಕ್ಷಗಳು ಭಾಗವಹಿಸಿದ್ದ ದುಂಡು ಮೇಜಿನ ಸಭೆಯಲ್ಲಿ ನಡೆಯುತ್ತಿದ್ದ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ಪುಟ 4 ಕ್ಕೆ

ಸಂಪಾದಕೀಯ

ಮಂಡ್ಯದ ಜನ ಸಾಮರಸ್ಯದ ಬದುಕು ಬಯಸುತ್ತಾರೆ

ಹಿಂದುತ್ವವಾದಿಗಳು ಮಂಡ್ಯ ಜಿಲ್ಲೆಯಲ್ಲಿ ಕೋಮುದ್ವೇಷ ಹರಡುವ ಇದುವರೆಗಿನ ಹಲವು ರೀತಿಯ ಪ್ರಯತ್ನಗಳು ವಿಫಲವಾಗುತ್ತಲೇ ಬಂದಿವೆ. ಈ ಪ್ರಯತ್ನದ ಭಾಗವಾಗಿ ಶ್ರೀರಂಗಪಟ್ಟಣದ ಮಸೀದಿ ವಿವಾದ, ಟಿಪ್ಪು ಇತಿಹಾಸದ ಕುರಿತು ಸುಳ್ಳು ವದಂತಿ ಹರಡುವಿಕೆ, ಮೇಲುಕೋಟೆ ಸಲಾಂ ದೀವಟಿಗೆ, ಉರಿಗೌಡ–ನಂಜೇಗೌಡರ ಸೃಷ್ಟಿ, ಬೆಂಗಳೂರು–ಮೈಸೂರು ಹೆದ್ದಾರಿ ಉದ್ಘಾಟನೆ ನೆಪದಲ್ಲಿ ಬಿಜೆಪಿ ರಾಷ್ಟ್ರೀಯ ನಾಯಕರನ್ನು ಮಂಡ್ಯಕ್ಕೆ ಕರೆಸಿ ದೊಡ್ಡ ಮಟ್ಟದ ಪ್ರಚಾರ ಹೀಗೆ ಇನ್ನೂ ಹಲವಾರು ರೀತಿಯಲ್ಲಿ ಮಂಡ್ಯದ ಜನರ ನಡುವೆ ಕೋಮುದ್ವೇಷ ಬಿತ್ತುವ ಮೂಲಕ ಸಂಘಪರಿವಾರವನ್ನು ಬೆಳೆಸಲು, ಆ ಮೂಲಕ ಬಿಜೆಪಿಗೆ ರಾಜಕೀಯ ಲಾಭ ತಂದುಕೊಡುವ ಪ್ರಯತ್ನಗಳು ನಡೆದಿವೆ. ಸದಾ ಕಾಲವೂ ಕೋಮು ಸಾಮರಸ್ಯದಿಂದ ಬಾಳುತ್ತಿರುವ, ಜಾತ್ಯಾತೀತ ಮನೋಭಾವ ಹೊಂದಿರುವ, ಸರ್ವಜಾತಿ ಮತದ ಜನರು ಸೌಹಾರ್ದತೆಯಿಂದ ಬದುಕುತ್ತಿರುವ ಮಂಡ್ಯದ ಪ್ರಜ್ಞಾವಂತ ಜನತೆ ಹಿಂದುತ್ವವಾದಿಗಳ ವೈದಿಕ ರಾಜಕಾರಣವನ್ನು ತಿರಸ್ಕರಿಸುತ್ತಲೇ ಬಂದಿದ್ದಾರೆ.

ಜೊತೆಗೆ, ಮಂಡ್ಯದ ರೈತ ಚಳುವಳಿ, ಕಾರ್ಮಿಕ ಚಳುವಳಿ ಕೋಮುವಾದಿಗಳ ಬೆಳವಣಿಗೆ ತಡೆಯಲು ಕಾರಣವಾಗಿದೆ. ಈ ರೀತಿ ಕೋಮುವಾದಿಗಳು ಬೇರೂರದಂತೆ ತಡೆಯುವಲ್ಲಿ ಇಂದು ಸಂಘಪರಿವಾರದ ಜೊತೆ ಕೈಜೋಡಿಸಿರುವ ಜನತಾದಳ (ಜಾತ್ಯತೀತ) ಪಕ್ಷದ ಕಾಣಿಕೆಯೂ ಇದೆ. ಈ ಕಾರಣದಿಂದಾಗಿಯೇ ಸಂಘಪರಿವಾರ ಜೆಡಿಎಸ್ ಪಕ್ಷವನ್ನು ತನ್ನ ಬುಟ್ಟಿಗೆ ಹಾಕಿಕೊಂಡು, ತನ್ನ ಕೋಮುವಾದಿ ಚಟುವಟಿಕೆಗಳಿಗೆ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರ ಬೆಂಬಲ ಪಡೆಯಲು, ಆ ಮೂಲಕ ಜಿಲ್ಲೆಯಲ್ಲಿ ಕೋಮುದ್ವೇಷ ಹರಡಿ, ಅಲ್ಲಿ ಬಲವಾಗಿ ಬೇರೂರಲು ಮುಂದಾಗಿದೆ. ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಜಿಲ್ಲೆಯ ಕೆರಗೋಡಿನಲ್ಲಿ ಅದರ ಆಟ ಶುರುಮಾಡಿದೆ. ಈ ಕೋಮುವಾದಿಗಳು ಜಿಲ್ಲೆಯಲ್ಲಿ ನೆಲೆಯೂರಲು ಮತ್ತು ಮಂಡ್ಯದ ಜನರ ಸಾಮರಸ್ಯದ ಬದುಕನ್ನು ಹಾಳುಮಾಡುವ ಹಿಂದುತ್ವವಾದಿಗಳಿಗೆ ಅವಕಾಶ ಆಗದಂತೆ ಜಿಲ್ಲೆಯ ಪ್ರಜ್ಞಾವಂತ, ಶಾಂತಿಪ್ರಿಯ ಜನರು ತುಂಬಾ ಜಾಗರೂಕತೆಯಿಂದ ಇರುತ್ತಾರೆ ಎಂಬುದನ್ನು ಮಂಡ್ಯದ ಇತಿಹಾಸ ಹೇಳುತ್ತದೆ. ಮಂಡ್ಯದ ಜನತೆಯ ಸಮಸ್ಯೆ ಧ್ವಜವಲ್ಲ, ಬಿತ್ತನೆ ಬೀಜ, ರಸಗೊಬ್ಬರ ಸೇರಿದಂತೆ ಕೃಷಿಗೆ ಬಳಕೆ ಮಾಡುವ ಪರಿಕರಗಳ ಬೆಲೆಗಳು ವಿಪರೀತ ಹೆಚ್ಚಾಗಿರುವುದು, ರೈತರು ಬೆಳೆದ ಬೆಳೆಗಳಿಗೆ ಲಾಭದಾಯಕ ಬೆಂಬಲ ಬೆಲೆ ಇಲ್ಲದೆ ಇರುವುದು, ಸಾಲದ ಹೊರೆ, ಅಗತ್ಯ ವಸ್ತುಗಳ ಬೆಲೆಏರಿಕೆ, ನಿರುದ್ಯೋಗ ಇವುಗಳು ಜಿಲ್ಲೆಯ ಜನರ ಸಮಸ್ಯೆಗಳಾಗಿವೆ. ಹಾಗಾಗಿ, ಮಂಡ್ಯದ ಜನತೆ ಸಂಘಪರಿವಾರದ ದ್ವೇಷ ಹರಡುವ ಕೆಲಸಕ್ಕೆ ಕೈಜೋಡಿಸುವುದಿಲ್ಲ. ಸಕ್ಕರೆಯ ನಾಡು ಮಂಡ್ಯದ ಮಣ್ಣಿನ ಗುಣವೇ ಸಾಮರಸ್ಯದಿಂದ ಬಾಳುವುದು.

ಮಂಡ್ಯ ತಾಲ್ಲೂಕು ಕೆರಗೋಡು ಗ್ರಾಮದ ಗೌರಿಶಂಕರ ಸೇವಾ ಟ್ರಸ್ಟ್ ನವರು ಕೆರಗೋಡು ರಂಗಮಂದಿರದ ಆವರಣದಲ್ಲಿ ಧ್ವಜಸ್ತಂಭ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಬೇಕೆಂದು ಗ್ರಾಮ ಪಂಚಾಯತಿಗೆ ಮನವಿ ಮಾಡಿದ್ದರು. ಆ ಧ್ವಜಸ್ತಂಭವನ್ನು ಕರ್ನಾಟಕದ ಧ್ವಜ ಮತ್ತು ತ್ರಿವರ್ಣ ಧ್ವಜ ಹಾರಿಸುವ ಉದ್ದೇಶಕ್ಕೆ ಮಾತ್ರ ಬಳಕೆ ಮಾಡುತ್ತೇವೆ, ಜೊತೆಗೆ ಗ್ರಾಮ ಪಂಚಾಯತಿಯ ಷರತ್ತುಗಳಿಗೆ ಬದ್ಧರಾಗಿರುವುದಾಗಿ ಮುಚ್ಚಳಿಕೆ ಪತ್ರವನ್ನು ಟ್ರಸ್ಟ್ ನವರು ನೀಡಿದ್ದರು.

ಅವರ ಮನವಿಯ ಮೇರೆಗೆ ಗ್ರಾಮ ಪಂಚಾಯತಿಯವರು ಧ್ವಜಸ್ತಂಭ ನಿರ್ಮಾಣಕ್ಕೆ ಅವಕಾಶ ನೀಡಿತು. ಆ ನಂತರ ಅಲ್ಲಿ ಹಾರಿಸಲಾಗಿದ್ದ ರಾಷ್ಟ್ರಧ್ವಜವನ್ನು ಕೆಳಗಿಳಿಸಿ ಆ ಜಾಗದಲ್ಲಿ ಹನುಮಧ್ವಜವನ್ನು ಹಾರಿಸಿದ್ದಾರೆ ಎಂದು ಅಲ್ಲಿನ ಆಡಳಿತ ಆರೋಪಿಸಿದೆ. ನಿಯಮ ಉಲ್ಲಂಘನೆ ಮಾಡಿರುವ ಹಿನ್ನೆಲೆಯಲ್ಲಿ ಧ್ವಜ ಇಳಿಸುವಂತೆ ಜಿಲ್ಲಾಡಳಿತವು ಜನರಿಗೆ ತಿಳಿ ಹೇಳಿದೆ. ಆದರೆ ಸ್ಥಳೀಯರನ್ನು ಸೇರಿಸಿಕೊಂಡ ಸಂಘಪರಿವಾರ ಪೊಲೀಸರ ಹಾಗೂ ಜಿಲ್ಲಾಡಳಿತದ ಮನವಿಯನ್ನು ತಿರಸ್ಕರಿಸಿ, ಪ್ರತಿಭಟನೆ, ಸಂಘರ್ಷಕ್ಕೆ ಇಳಿಯುವ ಮೂಲಕ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗುವಂತೆ ಮಾಡಿದರು.

ರಾಷ್ಟ್ರಧ್ವಜ ಹಾರಬೇಕಿದ್ದ ಜಾಗದಲ್ಲಿ ಹನುಮಧ್ವಜ ಹಾರಿಸಿರುವುದು, ಉದ್ದೇಶಪೂರ್ವಕವಾಗಿ ನಿಯಮ ಉಲ್ಲಂಘಿಸಿದ್ದು, ನಂತರದ ಪ್ರತಿಭಟನೆ ಈ ಯಾವುವೂ ಆಕಸ್ಮಿಕ ಅಲ್ಲ, ಇವೆಲ್ಲವೂ ಪೂರ್ವಯೋಜಿತ ಸಂಚು ಎಂಬುದು ಬಿಜೆಪಿ ಮತ್ತು ಜೆಡಿಎಸ್ ನಾಯಕರ ಪ್ರತಿಕ್ರಿಯೆಗಳಿಂದ ಸ್ಪಷ್ಟವಾಗುತ್ತದೆ. ಲೋಕಸಭಾ ಚುನಾವಣೆಯನ್ನು ಗುರಿಯಾಗಿಸಿಕೊಂಡು ಮಂಡ್ಯದಲ್ಲಿ ಕೋಮುಗಲಭೆ ಎಬ್ಬಿಸುವ ತಂತ್ರದ ಭಾಗವಾಗಿ ಕೋಮುವಾದಿ ಶಕ್ತಿಗಳು ಕ್ರಿಯಾಶೀಲವಾಗಿವೆ.

ಇಂದು ಕೆರಗೋಡು ಗ್ರಾಮದಲ್ಲಿ ಕೇಸರಿ ಧ್ವಜದ ಹೆಸರಿನಲ್ಲಿ ಗದ್ದಲ ಸೃಷ್ಟಿಸುವ ಮೂಲಕ ಜಿಲ್ಲೆಯಲ್ಲಿ ಕೋಮುದ್ವೇಷ ಬಿತ್ತಲು ಸಂಘಪರಿವಾರ ಮುಂದಾಗಿದೆ. ಮೋದಿ ಸರ್ಕಾರದ 10 ವರ್ಷಗಳ ಆಡಳಿತದ ವೈಫಲ್ಯಗಳನ್ನು ಮರೆಮಾಚಲು ಜನರ ನಡುವೆ ಕೋಮು ಸಂಘರ್ಷ ಉಂಟುಮಾಡಿ, ಚುನಾವಣೆಯಲ್ಲಿ ಲಾಭ ಪಡೆಯುವ ತಂತ್ರ ಇದಾಗಿದೆ. ಹಿಂದುತ್ವವಾದಿಗಳ ಈ ಪ್ರಯತ್ನವನ್ನೂ ಮಂಡ್ಯದ ಜನತೆ ಸೋಲಿಸುತ್ತಾರೆ ಎಂಬ ಭರವಸೆ ಸೌಹಾರ್ಧತೆ ಬಯಸುವ ರಾಜ್ಯದ ಜನತೆಗಿದೆ. ಮಂಡ್ಯದ ಜನರ ಜೊತೆಗೆ ರಾಜ್ಯದ ಎಲ್ಲರೂ ಕೈಜೋಡಿಸಿ ಕರ್ನಾಟಕದ ಸೌಹಾರ್ಧ ಪರಂಪರೆ ರಕ್ಷಿಸಲು ಪಣತೊಡೋಣ.

ಕೆರಗೋಡು: ಶಾಂತಿ ಕಾಪಾಡಲು ಸಿಪಿಐ(ಎಂ) ಮನವಿ

ರಾಷ್ಟ್ರಧ್ವಜ ಮತ್ತು ನಾಡಧ್ವಜ ಹಾರಿಸಲು ಅನುಮತಿ ಪಡೆದುಕೊಂಡು ಈಗ ಧಾರ್ಮಿಕ ಧ್ವಜ ಹಾರಿಸುವ ಮೂಲಕ ಗಲಭೆ ಉಂಟುಮಾಡುತ್ತಿರುವ ಕಿಡಿಗೇಡಿಗ ಳಿಗೆ ಸಹಕರಿಸದೆ, ಶಾಂತಿ ಕಾಪಾಡಿಕೊಳ್ಳಬೇಕು ಎಂದು ಕೆರೆಗೋಡು ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ) ಮಂಡ್ಯ ಜಿಲ್ಲಾ ಕಾರ್ಯದರ್ಶಿ ಟಿ.ಎಲ್ ಕೃಷ್ಣೇಗೌಡ ಮನವಿ ಮಾಡಿದ್ದಾರೆ.

ರಾಷ್ಟ್ರ ಧ್ವಜ ಮತ್ತು ನಾಡ ಧ್ವಜ ಹಾರಿಸಲು ಧ್ವಜ ಸ್ಥಂಭ ನಿರ್ಮಿಸಲು ಅನುಮತಿ ಪಡೆದು, ಈಗ ಕೇಸರಿ ಬಾವುಟ ಹಾರಿಸುವ ಮೂಲಕ ಗಲಭೆ ಸೃಷ್ಟಿಸಿ, ರಾಜಕೀಯ ಲಾಭ ಮಾಡಿಕೊಳ್ಳಲು ಹೊರಟಿರುವ ಕೋಮುವಾದಿಗಳ ಸಂಚಿಗೆ ಕೆರಗೋಡು ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನತೆ ಬಲಿಯಾಗಬಾರದು. ಕೋಮುವಾದಿಗಳ ಈ ಹುನ್ನಾರವನ್ನು ಸೋಲಿಸಬೇಕು ಎಂದು ಜನರನ್ನು ವಿನಂತಿಸಿರುವ ಸಿಪಿಐ(ಎಂ), ಇಂತಹ ಶಕ್ತಿಗಳ ಆಟಾಟೋಪಗಳನ್ನು ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆ ಕಟ್ಟುನಿಟ್ಟಾಗಿ ನಿಗ್ರಹಿಸಬೇಕು ಎಂದು ಆಗ್ರಹಿಸಿದೆ.

ಸಂಘಪರಿವಾದ ಈ ಕೃತ್ಯವು ದೇಶದ್ರೋಹ ಮತ್ತು ಕನ್ನಡ ದ್ರೋಹದ ಕೆಲಸವಾಗಿದೆ. ಬರೆದುಕೊಟ್ಟ ಮುಚ್ಚಳಿಕೆ ಮತ್ತು ಗ್ರಾಮ ಪಂಚಾಯತ್ ಹಾಕಿರುವ ಷರತ್ತುಗಳನ್ನು ಉಲ್ಲಂಘಿಸಿ, ಈ ಎರಡು ಧ್ವಜಕ್ಕೆ ಹೊರತಾಗಿ ಕೇಸರಿ ಧ್ವಜ ಹಾರಿಸುವ ಮೂಲಕ ಲೋಕಸಭಾ ಚುನಾವಣೆಯನ್ನು ಗುರಿಯಾಗಿಸಿಕೊಂಡು ಕೋಮುವಾದಿ ಶಕ್ತಿಗಳು ಕ್ರಿಯಾಶೀಲವಾಗಿವೆ. ಹುಬ್ಬಳ್ಳಿ ಈದ್ಗಾ ವಿವಾದ, ಕಾಶ್ಮೀರ ಸಮಸ್ಯೆಗಳ ವಿಚಾರದಲ್ಲಿ ರಚನಾತ್ಮಕ ಮತ್ತು ಜಾತ್ಯತೀತ ಪಾತ್ರ ವಹಿಸಿದ್ದ ಜೆಡಿಎಸ್ ಇದರ ಭಾಗವಾಗಿರುವುದು ನಾಡಿನ ದುರಂತವಾಗಿದೆ ಎಂದು ಟಿ.ಎಲ್. ಕೃಷ್ಣೇಗೌಡ ವಿಷಾದಿಸಿದ್ದಾರೆ.

ಲೋಕಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಗಲಭೆ ಸೃಷ್ಟಿಸುವ, ಶಾಂತಿಗೆ ಭಂಗ ತರುವ ಪ್ರಯತ್ನವನ್ನು ಬಿಜೆಪಿ ಮಾಡಲಿದೆ. ಬಿಜೆಪಿ ನಾಯಕರ ಕೋಮುದ್ವೇಷ ಬಿತ್ತುವ ಮಾತುಗಳಿಗೆ ಮರುಳಾಗಿ, ಕಾನೂನು ಕೈಗೆತ್ತಿಕೊಳ್ಳುವ ತಪ್ಪನ್ನು ಜನತೆ ಮಾಡಬಾರದು. ಸಂವಿಧಾನ, ಕಾನೂನಿಗೆ ಗೌರವ ಕೊಡಬೇಕಿರುವುದು ನಮ್ಮೆಲ್ಲರ ಕರ್ತವ್ಯ. ಪ್ರಜ್ಞಾವಂತ ಕನ್ನಡಿಗರು ಶಾಂತಿ, ಸಂಯಮದ ಮೂಲಕ ಕೋಮುವಾದಿಗಳ ಷಡ್ಯಂತ್ರವನ್ನು ವಿಫಲಗೊಳಿಸಬೇಕು. ರಾಜಕೀಯ ಲಾಭಕ್ಕಾಗಿ ನಡೆಸುವ ಕೋಮುವಾದಿ ಕಿಡಿಗೇಡಿಗಳ ಇಂತಹ ಆಟಗಳಿಗೆ ಬಲಿಯಾಗಬಾರದು ಎಂದು ಅವರು ಜನರಲ್ಲಿ ಮನವಿ ಮಾಡಿದ್ದಾರೆ.

ಕಾರ್ಮಿಕ ವರ್ಗದ ಬೇಡಿಕೆಗಳ ಈಡೇರಿಕೆಗಾಗಿ ಸಂಸದರ ಕಚೇರಿ ಚಲೋ

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಬೇಕು, ಜನಪರ ಪರ್ಯಾಯ ನೀತಿಗಳನ್ನು ಜಾರಿಗೊಳಿಸಬೇಕು, ದುಡಿಯುವ ವರ್ಗದ ಹಕ್ಕನ್ನು ಸಂರಕ್ಷಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ವಿವಿಧ ವಿಭಾಗದ ಕಾರ್ಮಿಕರಿಂದ 25 ಜನವರಿ 2024 ರಂದು ನಗರದ ಕ್ಲಾಕ್ ಟವರ್ ಬಳಿಯಲ್ಲಿ ಸಂಸದರ ಕಚೇರಿ ಚಲೋ ಚಳುವಳಿಯ ಭಾಗವಾಗಿ ಪ್ರತಿಭಟನಾ ಧರಣಿ ನಡೆಯಿತು.

ದೇಶ ಉಳಿಸಿ, ಜನತೆಯ ಬದುಕನ್ನು ರಕ್ಷಿಸಿ ಎಂಬ ಘೋಷಣೆಯೊಂದಿಗೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಜನವರಿ 12 ರಿಂದ ಫೆಬ್ರವರಿ 16 ರವರೆಗೆ ದೇಶಾದ್ಯಂತ ಪ್ರಚಾರಾಂದೋಲನ ನಡೆದಿದ್ದು, ದೇಶದ ಎಲ್ಲಾ ಸಂಸದರ ಕಚೇರಿಯೆದುರು ಪ್ರತಿಭಟನೆ ನಡೆಯುತ್ತಿವೆ.

ಪ್ರತಿಭಟನಾ ಧರಣಿಯನ್ನು ಉದ್ಘಾಟಿಸಿದ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ವಸಂತ ಆಚಾರಿಯವರು, ಕಳೆದ 10 ವರ್ಷಗಳಿಂದ ದೇಶವನ್ನಾಳುತ್ತಿರುವ ನರೇಂದ್ರ ಮೋದಿ ಸರಕಾರ ಕಾರ್ಪೊರೇಟ್ ಸಂಸ್ಥೆಗಳ ಹಿತಾಸಕ್ತಿಯನ್ನು ಕಾಪಾಡುವ ಮೂಲಕ ದೇಶದ ಜನತೆಯ ಬದುಕನ್ನು ಸರ್ವನಾಶಗೊಳಿಸಿದೆ. ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡಿ ಮಾಲಕ ವರ್ಗಕ್ಕೆ ಲಾಭ ತರುವಲ್ಲಿ ಶ್ರಮಿಸಿದ್ದು, ಮುಂಬರುವ ದಿನಗಳಲ್ಲಿ ಕಾರ್ಮಿಕ ಕಾನೂನುಗಳೇ ಇಲ್ಲದ ಹಾಗೆ ಮಾಡುವ ಹುನ್ನಾರ ನಡೆಸುತ್ತಿದೆ.ಸ್ವಾತಂತ್ರದ ಅಮೃತ ಮಹೋತ್ಸವವನ್ನು ದಾಟಿ ಮುನ್ನಡೆಯುತ್ತಿದ್ದರೂ, ದುಡಿಯುವ ವರ್ಗಕ್ಕೆ ಕನಿಷ್ಟ ಕೂಲಿಯಿಲ್ಲದೆ ಬದುಕಲು ಅಸಾಧ್ಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ, ಯಾವುದೇ ಸರಕಾರ ಅಧಿಕಾರಕ್ಕೇರಲು ಕಾರ್ಮಿಕ ವರ್ಗದ ಪಾತ್ರವೇ ಪ್ರಧಾನ. ಆದರೆ ಅಧಿಕಾರಕ್ಕೆ ಬಂದ ಯಾವ ಸರಕಾರಗಳೂ ಕೂಡ ಕಾರ್ಮಿಕ ವರ್ಗದ ಪರವಾಗಿ ಶ್ರಮಿಸುತ್ತಿಲ್ಲ. ಬದಲಾಗಿ ಮಾಲಕರ ಹಾಗೂ ಕಾರ್ಪೊರೇಟ್ ಕಂಪೆನಿಗಳ ಪರವಾಗಿ ಧೃಢವಾಗಿ ನಿಂತು ಕಾರ್ಮಿಕರ

ಪುಟ 5 ಕ್ಕೆ



ದೇಶಾದ್ಯಂತ ಭಾರಿ ಬೆಂಬಲ ಪಡೆದ ಜನವರಿ 26ರ ಕಿಸಾನ್ ಟ್ರ್ಯಾಕ್ಟರ್ ಪರೇಡ್

75ನೇ ಗಣರಾಜ್ಯೋತ್ಸವ ದಿನವಾದ ಜನವರಿ 26 ರಂದು ಸಂಯುಕ್ತ ಕಿಸಾನ್ ಮೋರ್ಚಾ (ಎಸ್.ಕೆ.ಎಂ.) ಕರೆ ನೀಡಿದ್ದ 'ಕಿಸಾನ್ ಟ್ರ್ಯಾಕ್ಟರ್ ಪರೇಡ್' ಗಳು ದೇಶಾದ್ಯಂತ ಭಾರಿ ಬೆಂಬಲವನ್ನು ಪಡೆದಿವೆ. ಕರ್ನಾಟಕವೂ ಸೇರಿದಂತೆ ದೇಶದ 27 ರಾಜ್ಯಗಳ ಹಲವು ಕಡೆಗಳಲ್ಲಿ ಈ ಟ್ರ್ಯಾಕ್ಟರ್ ಮೆರವಣಿಗೆಗಳು ನಡೆದಿವೆ.

ಕೃಷಿ ಉಳಿಸಿ, ಕಾರ್ಪೊರೇಟ್ ಲೂಟಿಯನ್ನು ಕೊನೆಗೊಳಿಸಿ, ಜಾತ್ಯತೀತ, ಪ್ರಜಾಪ್ರಭುತ್ವ ಭಾರತವನ್ನು ಉಳಿಸಿ ಎಂಬ ಘೋಷಣೆಯೊಂದಿಗೆ ಗಣರಾಜ್ಯೋತ್ಸವ ದಿನದಂದು ಕಿಸಾನ್ ಟ್ರ್ಯಾಕ್ಟರ್ ವಾಹನಗಳ ಪರೇಡ್ ಗಳನ್ನು ನಡೆಸಲು ಎಸ್ ಕೆಎಂ ಕರೆನೀಡಿತ್ತು. ಹವಾಮಾನ ವೈಪರೀತ್ಯದ ನಡುವೆಯೂ, ಭಾರತದಾದ್ಯಂತ, ವಿಶೇಷವಾಗಿ ಉತ್ತರ ಭಾರತದಲ್ಲಿ ಲಕ್ಷಾಂತರ ರೈತರೊಂದಿಗೆ ಹತ್ತಾರು ಸಾವಿರ ಟ್ರ್ಯಾಕ್ಟರ್ ಗಳು ಮತ್ತು ಇತರ ವಾಹನಗಳು ಪರೇಡ್ ಗಳಲ್ಲಿ ಸೇರಿಕೊಂಡವು. ವರದಿಗಳ ಪ್ರಕಾರ ಕರ್ನಾಟಕವೂ ಸೇರಿದಂತೆ 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 484 ಜಿಲ್ಲೆಗಳಲ್ಲಿ ಮೆರವಣಿಗೆ ನಡೆದಿವೆ.



ಕರ್ನಾಟಕದ ಮೈಸೂರು, ರಾಯಚೂರು ನಗರ ಮತ್ತು ಜಿಲ್ಲೆಯ ಸಿಂದನೂರು, ಕುಷ್ಟಗಿ, ಚಿಕ್ಕಬಳ್ಳಾಪುರ, ಮಂಡ್ಯ, ಕಲಬುರಗಿ ಪಟ್ಟಣ ಮತ್ತು ಜಿಲ್ಲೆಯ ಹುಮ್ನಾಬಾದ್, ಕೊಪ್ಪಳ ಪಟ್ಟಣ ಮತ್ತು ಜಿಲ್ಲೆಯ ಗಂಗಾವತಿಯಲ್ಲಿ, ಕೋಲಾರ ಸೇರಿದಂತೆ ರಾಜ್ಯದ 15 ಜಿಲ್ಲೆಗಳ ಹಲವು ತಾಲೂಕುಗಳಲ್ಲಿ ಟ್ರ್ಯಾಕ್ಟರ್ ಗಳ ಜೊತೆಗೆ ಬೈಕ್ ಪರೇಡ್ ನಡೆದಿವೆ.

MSP C2+50 ಶೇಕಡಾ ವನ್ನು ಕಾನೂನುಬದ್ಧಗೊಳಿಸುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಸಲುವಾಗಿ ಇದು ರೈತರ ಹೋರಾಟದ ಎರಡನೇ ಹಂತದ ಭಾಗವಾಗಿದೆ. (C2+50% ಫಾರ್ಮುಲಾ: ಬಂಡವಾಳದ ಇನ್‌ಪುಟ್ ವೆಚ್ಚ, ಭೂಮಿಯ ಮೇಲಿನ ಬಾಡಿಗೆ 'C2' ಮತ್ತು ರೈತರಿಗೆ 50% ಆದಾಯ ಒಳಗೊಂಡಿರುತ್ತದೆ.) ಎಲ್ಲಾ ಬೆಳೆಗಳಿಗೆ ಖಾತರಿ ಖರೀದಿ, ರೈತರ ಮತ್ತು ಕೃಷಿಯ ಸಮಗ್ರ ಸಾಲ ಮನ್ನಾ ಸೇರಿದಂತೆ, ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮತ್ತು ಪ್ರಿ–ಪೇಯ್ಡ್ ಮೀಟರ್ ಅಳವಡಿಕೆ, ಇನ್ ಪುಟ್ ವೆಚ್ಚವನ್ನು ಕಡಿಮೆ ಮಾಡುವುದು, ಸರ್ಕಾರ ನಿಯಂತ್ರಿತ ಸರಳ ಮತ್ತು ಸಾರ್ವತ್ರಿಕ ಬೆಳೆ ವಿಮೆ ಖಚಿತಪಡಿಸುವುದು, ಲಖಿಂಪುರ ಖೇರಿ ರೈತರ ಹತ್ಯಾಕಾಂಡದ ಪ್ರಮುಖ ಸಂಚುಕೋರನ ವಜಾ ಮತ್ತು ಪ್ರಾಸಿಕ್ಯೂಷನ್, ಗೃಹ ವ್ಯವಹಾರಗಳ ರಾಜ್ಯ ಕೇಂದ್ರ ಸಚಿವ ಅಜಯ್ ಮಿಶ್ರಾ ಬಂಧನ ಮತ್ತು ಇತರ ಬೇಡಿಕೆಗಳು ಈ ಪಟ್ಟಿಯಲ್ಲಿವೆ.

ರೈತ ಸಂಘಗಳು ಮತ್ತು ಒಕ್ಕೂಟಗಳ ಹೊರತಾಗಿ ಕಾರ್ಮಿಕ ಸಂಘಟನೆಗಳು ಸಹ ಈ ಚಳುವಳಿಯಲ್ಲಿ ಭಾಗವಹಿಸಿದ್ದವು. ಹೀಗಾಗಿ ನೆಲಮಟ್ಟದಲ್ಲಿ ರೈತ–ಕಾರ್ಮಿಕರ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಹಾಗೂ ಇತರ ವರ್ಗದ ಜನರು ಸೇರಿಕೊಂಡರು.

ಮೋದಿ ಸರ್ಕಾರದ ಕಾರ್ಪೊರೇಟ್ ಪರ, ರೈತ ವಿರೋಧಿ ನೀತಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಿ, ಗಣರಾಜ್ಯದ ಜಾತ್ಯತೀತ ಮತ್ತು ಪ್ರಜಾಪ್ರಭುತ್ವ ಗುಣವನ್ನು ಬಲಪಡಿಸಲು, ಪರೇಡ್ ನಲ್ಲಿ ಭಾಗವಹಿಸಿದವರು ಪ್ರತಿಜ್ಞೆ ಮಾಡಿದರು.

ಫೆಬ್ರವರಿ 16 ರಂದು ಗ್ರಾಮೀಣ ಭಾರತ್ ಬಂದ್ ಗೆ ಕರೆ

ಸಂಯುಕ್ತ ಕಿಸಾನ್ ಮೋರ್ಚಾ ಈಗಾಗಲೇ 16 ಫೆಬ್ರವರಿ 2024 ರಂದು ಗ್ರಾಮೀಣ ಭಾರತ್ ಬಂದ್ ಗೆ ಕರೆ ನೀಡಿದೆ. ಆ ದಿನ ಕಾರ್ಮಿಕ ಸಂಘಟನೆಗಳು ಕೈಗಾರಿಕಾ/ವಲಯವಾರು ಮುಷ್ಕರಕ್ಕೆ ಕರೆ ನೀಡಿದ್ದು, ಗ್ರಾಮೀಣ ಭಾರತ ಸ್ಥಬ್ದವಾಗಲಿದೆ ಎಂದು SKM ಹೇಳಿದೆ. ಮುಂದಿನ ದಿನಗಳಲ್ಲಿ ಎಲ್ಲಾ ರಾಜ್ಯಗಳು, ಜಿಲ್ಲೆಗಳು ಮತ್ತು ಹಳ್ಳಿಗಳವರೆಗೆ ಹೋರಾಟ ವಿಸ್ತರಿಸಿ ಮೋದಿ ಸರ್ಕಾರದಿಂದ ಎಲ್ಲಾ ಬೇಡಿಕೆಗಳನ್ನು ಈಡೇರಿಸುವವರೆಗೂ ಮತ್ತಷ್ಟು ತೀವ್ರಗೊಳಿಸಲಾಗುವುದು.

ಅತ್ಯಂತ ರೈತ ವಿರೋಧಿ ಪ್ರಧಾನಿ

ಕೃಷಿ ಕಾರ್ಪೊರೇಟೀಕರಣ ಕೃಷಿ ಬಿಕ್ಕಟ್ಟಿಗೆ ಕಾರಣವಾಗಿದ್ದು, ಇದರಿಂದಾಗಿ ರೈತರು, ಕಾರ್ಮಿಕರು ಮತ್ತು ಯುವಜನರ ಜೀವನವನ್ನೂ ನಾಶಗೊಳಿಸಿದೆ. 2014 ರಿಂದ 2022ರ ವರೆಗಿನ ಮೋದಿ ಆಡಳಿತದ ಅವಧಿಯಲ್ಲಿ 1,00,474 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಳೆದ ಒಂಬತ್ತು ವರ್ಷಗಳಲ್ಲಿ ದೊಡ್ಡ ಉದ್ಯಮಿಗಳ 14.64 ಲಕ್ಷ ಕೋಟಿ ಸಾಲ ಮನ್ನಾ ಮಾಡಿರುವ ಸರ್ಕಾರ, ರೈತರ ಒಂದು ರೂಪಾಯಿ ಸಾಲವನ್ನೂ ಮನ್ನಾ ಮಾಡಿಲ್ಲ. ಇನ್ ಪುಟ್ ಗಳ ಮೇಲಿನ ಸರ್ಕಾರದ ಅನುದಾನ ಹಿಂಪಡೆಯುವುದು ಮತ್ತು ಅನಿಯಂತ್ರಿತ ಬೆಲೆ ಏರಿಕೆ ಇದರಿಂದಾಗಿ ಕೃಷಿಯಲ್ಲಿ ಉತ್ಪಾದನೆ ವೆಚ್ಚ ಮತ್ತು ರೈತ ಕುಟುಂಬಗಳ ಜೀವನ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗಿದೆ. ನೈಜ MSP, ಸಾಲ ಮನ್ನಾ, ವರ್ಷಕ್ಕೆ 2 ಕೋಟಿ ಉದ್ಯೋಗ ಖಾತ್ರಿಪಡಿಸುವ ಚುನಾವಣಾ ಭರವಸೆಗಳನ್ನು ಉಲ್ಲಂಘಿಸಿ, ರೈತರಿಗೆ ದ್ರೋಹ ಬಗೆದ ಭಾರತದಲ್ಲಿನ ಇದುವರೆಗಿನ ಪ್ರಧಾನಿಗಳಲ್ಲಿ ಅತ್ಯಂತ ರೈತ ವಿರೋಧಿ ಪ್ರಧಾನಿ ನರೇಂದ್ರ ಮೋದಿ ಎಂದು SKM ಪುನರುಚ್ಚರಿಸಿದೆ.

ಸಂಗಾತಿ ಗಂಗಯ್ಯ ಅಮೀನ್ ನಿಧನ



ಕಮ್ಯೂನಿಸ್ಟ್ ಚಳವಳಿಯ ಬದ್ಧತೆಯ ಕಾರ್ಯಕರ್ತರಾಗಿದ್ದ ಕಾಮ್ರೇಡ್ ಗಂಗಯ್ಯ ಅಮೀನ್ ನಮ್ಮನ್ನು ಅಗಲಿದ್ದಾರೆ. ಸುಮಾರು ಒಂದೂವರೆ ತಿಂಗಳ ಮುಂಚೆ ಅನಾರೋಗ್ಯದ ಕಾರಣದಿಂದ ಅವರು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ 27 ಏಪ್ರಿಲ್, 2024 ರಂದು ನಿಧನ ಹೊಂದಿದರು. ಅವರಿಗೆ 76 ವರ್ಷ ವಯಸ್ಸಾಗಿತ್ತು.

ಆರು ದಶಕಗಳ ಕಾಲ ವಾಮಂಜೂರು, ಗುರುಪುರ ಪ್ರದೇಶದಲ್ಲಿ ಕಮ್ಯೂನಿಸ್ಟ್ ಚಳವಳಿಯ ಬದ್ಧತೆಯ ಕಾರ್ಯಕರ್ತರಾಗಿ, ನಾಯಕರಾಗಿ ಪೂರ್ಣಾವಧಿ ದುಡಿದ ಹಿರಿಮೆ ಕಾಮ್ರೇಡ್ ಗಂಗಯ್ಯ ಅಮೀನ್ ಅವರದ್ದು. ಕೂಲಿಕಾರ ಬಡ ಬಿಲ್ಲವ ಕುಟುಂಬದಲ್ಲಿ ಹುಟ್ಟಿ, ಕುಟುಂಬದ ಹಸಿವು ನೀಗಿಸಲು ಸಣ್ಣ ಪ್ರಾಯದಲ್ಲೇ ಹೆಂಚು ಕೈಗಾರಿಕೆಯಲ್ಲಿ ಕೆಲಸಕ್ಕೆ ಸೇರಿ, ಅಲ್ಲಿ ನಡೆಯುತ್ತಿದ್ದ ಶೋಷಣೆಗೆದುರಾಗಿ ಸಂಘಟಿತ ಕಾರ್ಮಿಕರೊಂದಿಗೆ ಸೇರಿಕೊಂಡು, ತಾನೂ ಹೋರಾಟಗಳಲ್ಲಿ ಭಾಗವಹಿಸುತ್ತಲೇ, ಕಾರ್ಮಿಕ ನಾಯಕನಾಗಿ ಬೆಳೆದ ಗಂಗಯ್ಯ ನವರು ತನ್ನ ಜೀವಿತದ ಕೊನೆಯವರೆಗೂ ಕೆಂಬಾವುಟವನ್ನು ಕೆಳಗಿಳಿಸಲಿಲ್ಲ.

ಅತ್ಯಂತ ನಿಕೃಷ್ಟ ಕೂಲಿಗೆ ದುಡಿಯುತ್ತಿದ್ದ ಬೀಡಿ ಕಾರ್ಮಿಕರನ್ನು ಸಂಘಟಿಸಲು ವಾಮಂಜೂರಿಗೆ ಬಂದಿದ್ದ ಕಾರ್ಮಿಕ ಮುಂದಾಳು ಯು.ಬಿ. ಲೋಕಯ್ಯರಿಗೆ ಸಾಥ್ ನೀಡಿದ ಸಂಗಾತಿಗಳ ಪೈಕಿ ಗಂಗಯ್ಯ ಅಮೀನ್ ರವರೂ ಒಬ್ಬರು.

ಗಂಗಯ್ಯನವರು ಕಳೆದ ಆರು ದಶಕಗಳ ಅವಧಿಯಲ್ಲಿ ಹೆಂಚು ಕಾರ್ಮಿಕರು, ಗೇಣಿದಾರ ರೈತರು, ಬೀಡಿ ಕಾರ್ಮಿಕರು... ಹೀಗೆ ಜೀತದಾಳುಗಳಂತೆ ಬದುಕು ಸಾಗಿಸಲು ಹೆಣಗುತ್ತಿದ್ದ ಶ್ರಮಿಕ ಜನತೆಗೆ ಭೂಮಿ, ಸಂಬಳ, ಸವಲತ್ತು ಕೊಡಿಸಲು ನಡೆದ ಹಲವು ಯಶಸ್ವಿ ಹೋರಾಟದ ಪ್ರಧಾನ ಭಾಗವಾಗಿದ್ದರು. ಸಾಮಾಜಿಕ ಶ್ರೇಣಿಯಲ್ಲಿ ಕೆಳಗಡೆ ಇದ್ದ ಕಾರಣಕ್ಕೆ ಅನುಭವಿಸಬೇಕಿದ್ದ ತಾರತಮ್ಯ, ಅವಮಾನದ ವಿರುದ್ಧವೂ ಶ್ರಮಿಕ ಬಂಧುಗಳ ಜೊತೆ ಸೇರಿ ಹೋರಾಟ ನಡೆಸಿದರು.

ಇತ್ತೀಚಿನ ಮೂರು ದಶಕದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಬಹಳ ವೇಗವಾದ ಬದಲಾವಣೆಗಳು ಘಟಿಸುತ್ತಿವೆ. ಕೆಂಬಾವುಟದ ಚಳವಳಿಯ ಫಲಾನುಭವಿಗಳ ಮತ್ತು ಹೋರಾಟದ ಜೊತೆಗೆ ವಿಮೋಚನಾ ಧ್ವಜ ಹಿಡಿದ ಜನರ ಹೊಸ ತಲೆಮಾರಿನ ಒಂದು ದೊಡ್ಡ ವಿಭಾಗ ಪ್ರತಿಗಾಮಿಗಳ ಬಲೆಗೆ ಬಿದ್ದು, ವಿರುದ್ಧ ದಿಕ್ಕಿನಲ್ಲಿ ಚಲಿಸುತ್ತಿದ್ದರೂ ಇದರಿಂದ ವಿಚಲಿತರಾಗದ ಗಂಗಯ್ಯನವರು, ಕಮ್ಯುನಿಸ್ಟ್ ಚಳವಳಿ, ದುಡಿಯುವ ಜನಗಳ ಸಂಘಟನೆ ಕಟ್ಟಲು ಹಗಲು ರಾತ್ರಿ ಶ್ರಮಿಸಿದರು.

ಗಂಗಯ್ಯರವರು ತನಗಾಗಿ ಏನನ್ನೂ ಬಯಸದೆ ಶ್ರಮಿಕರ ಶ್ರೇಯಸ್ಸನ್ನೇ ಬದುಕಿನ ಗುರಿಯಾಗಿಸಿಕೊಂಡವರು. ಜೀವನದ ಕೊನೆ ಕ್ಷಣದಲ್ಲೂ ಬಡತನದಲ್ಲೇ ಮಿಂದುಂಡವರು.

ಬಿಳಿ ಅಂಗಿ, ಧೋತಿ, ಸಾಧಾರಣವಾದ ಒಂದು ವಾಚು, ಕಾಲಿಗೊಂದು ಚಪ್ಪಲಿ ಇವಿಷ್ಟು ಅವರ ಉಡುಗೆ ತೊಡುಗೆಗಳಾಗಿದ್ದವು. ಈ ಕಾಲದ ತುಳುನಾಡಿನ ಯುವ ತಲೆಮಾರು ಗಂಗಯ್ಯ ಅಮೀನ್ ರಂತಹ ಕಮ್ಯೂನಿಸ್ಟ್ ಮುಖಂಡರಿಂದ ಕಲಿಯುವುದು ಬಹಳಷ್ಟಿದೆ. ಅವರ ಬದುಕಿನ, ಹೋರಾಟದ ಕತೆ ಬರಹ ರೂಪಕ್ಕೆ ಇಳಿಯಬೇಕು ಎಂಬುದು ಹಲವು ಸಂಗಾತಿಗಳ ಬಯಕೆಯಾಗಿದೆ.

ಆ.ಪ್ರದೇಶ: ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಐತಿಹಾಸಿಕ..... ಪುಟ 2 ರಿಂದ

ವ್ಯಕ್ತವಾಯಿತು. ಎಡಪಕ್ಷಗಳ ನಿಯೋಗವು ಮುಖ್ಯ ಕಾರ್ಯದರ್ಶಿಯನ್ನು ಭೇಟಿ ಮಾಡಿ, ಮುಷ್ಕರಕ್ಕೆ ಸೌಹಾರ್ದಯುತ ನಿರ್ಣಯಕ್ಕೆ ಒತ್ತಾಯಿಸಿತು.

ರಾಜ್ಯ ಸರ್ಕಾರದ ಕ್ರೂರ ಕ್ರಮಗಳಿಗೆ ಪ್ರತಿಯಾಗಿ ಎಡಪಕ್ಷಗಳು ಸಿಪಿಐ(ಎಂ) ರಾಜ್ಯ ಸಮಿತಿ ಕಚೇರಿ ಆವರಣದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದವು. ದಬ್ಬಾಳಿಕೆಗೆ ಕಡಿವಾಣ ಹಾಕಿ ಮುಷ್ಕರವನ್ನು ಬಗೆಹರಿಸುವಂತೆ ಒತ್ತಾಯಿಸಿದರು. ಸಿಪಿಐ(ಎಂ), ಸಿಪಿಐ ಮತ್ತು ಸಿಪಿಐ(ಎಂಎಲ್) ಮುಖಂಡರು ಉಪವಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಧರಣಿ ನಿರತ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹೋರಾಟಕ್ಕೆ ಟಿಡಿಪಿ, ಕಾಂಗ್ರೆಸ್, ಜನಸೇನಾ ಮುಂತಾದ ಇತರ ಪಕ್ಷಗಳ ಮುಖಂಡರು ಬೆಂಬಲ ವ್ಯಕ್ತಪಡಿಸಿದರು.

13 ರಲ್ಲಿ 11 ಬೇಡಿಕೆಗಳಿಗೆ ಒಪ್ಪಿಗೆ

ಅಂತಿಮವಾಗಿ, ಸಚಿವ ಸಂಪುಟ ಉಪಸಮಿತಿ ಮುಷ್ಕರ ನಿರತ ಸಂಘಟನೆಗಳು ಮತ್ತು ಕಾರ್ಮಿಕ ಸಂಘಟನೆಗಳನ್ನು 22ರ ರಾತ್ರಿ 9.30ರ ಸುಮಾರಿಗೆ ಚರ್ಚೆಗೆ ಆಹ್ವಾನಿಸಿತು. ಸುಮಾರು ಎರಡು ಗಂಟೆಗಳ ಕಾಲ ಮಾತುಕತೆ ನಡೆದು, ಮುಷ್ಕರದ ಮನವಿ ಪತ್ರದಲ್ಲಿ ವಿವರಿಸಿದ 13 ಬೇಡಿಕೆಗಳಲ್ಲಿ 11 ಬೇಡಿಕೆಗಳನ್ನು ಸರ್ಕಾರವು ಒಪ್ಪಿಕೊಂಡಿತು. ಅವರ ಬಹುತೇಕ ಬೇಡಿಕೆಗಳನ್ನು ಸರ್ಕಾರ ಅಂಗೀಕರಿಸಿದ್ದರಿಂದ ಜನವರಿ 23 ರಿಂದ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಮುಷ್ಕರವನ್ನು ಹಿಂಪಡೆದರು.

ಜುಲೈನಲ್ಲಿ ಅಂಗನವಾಡಿಗಳ ವೇತನ ಹೆಚ್ಚಳ ಕುರಿತಂತೆ ಸಂಘಟನೆಗಳು ಮತ್ತು ಸರ್ಕಾರ ಎರಡಕ್ಕೂ ಸ್ವೀಕಾರಾರ್ಹ ವೇತನವನ್ನು ಜುಲೈ 2024 ರ ನಂತರ ಹೆಚ್ಚಿಸಲು ಲಿಖಿತ ಭರವಸೆ, ಗ್ರಾಚ್ಯುಟಿ ಕುರಿತು ಕೇಂದ್ರಕ್ಕೆ ಶಿಫಾರಸು, ಕಾರ್ಯಕರ್ತೆಯರಿಗೆ 50,000 ದಿಂದ 1.20 ಲಕ್ಷ ರೂ.ವರೆಗೆ ಮತ್ತು ಸಹಾಯಕರಿಗೆ 60,000 ರೂ. ನಿವೃತ್ತಿ ವೇತನ, ಮಿನಿ ಅಂಗನವಾಡಿ ಕೇಂದ್ರಗಳನ್ನು ಮುಖ್ಯ ಕೇಂದ್ರಗಳನ್ನಾಗಿ ಪರಿವರ್ತಿಸಿ ಜಿಒ ನೀಡುವುದಾಗಿ ಒಪ್ಪಿಗೆ, ಸೇವೆಯಲ್ಲಿ ಮೃತಪಟ್ಟ ಕುಟುಂಬದ ➚

ನಿರ್ಣಾಯಕ ಹೋರಾಟಕ್ಕೆ ಸಜ್ಜಾಗಿ: ವರಲಕ್ಷ್ಮಿ

ಸ್ಕೀಂ ಕಾರ್ಮಿಕರಿಗೆ ಕನಿಷ್ಠ ವೇತನ ಕಾನೂನು ಅನ್ವಯವಾಗುವುದಿಲ್ಲ. ನಮ್ಮ ಬೇಡಿಕೆಗಳು ಈಡೇಬೇಕೆಂದರೆ ನಿರ್ಣಾಯಕ ಹೋರಾಟ ಹಮ್ಮಿಕೊಳ್ಳಲಾಗಿದ್ದು ಅದಕ್ಕೆ ಎಲ್ಲರೂ ಸಜ್ಜಾಗಿ ಎಂದು ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ ಕರೆ ನೀಡಿದರು.

ಸಿಐಟಿಯು ನೇತೃತ್ವದಲ್ಲಿ ನಡೆದ ಸಂಸದರ ಕಚೇರಿ ಎದುರು ಧರಣಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ರಾಜ್ಯದಲ್ಲಿ 1948ರ ಕನಿಷ್ಠ ವೇತನ ಕಾಯ್ದೆ ಜಾರಿಯಲ್ಲಿದೆ. ಇದರ ಅನುಸಾರ ತಿಂಗಳಿಗೆ 18 ಸಾವಿರ ರೂ.ಗಳ ವೇತನ ಪಾವತಿಸಬೇಕಾಗುತ್ತದೆ. ಆದರೆ ಕನಿಷ್ಠ ವೇತನ 31 ಸಾವಿರ ರೂ.ಗಳನ್ನು ನೀಡಬೇಕೆಂದು ಆಗ್ರಹಿಸಿದರು.

ನಮಗೆ ಯಾವುದೇ ರೀತಿಯ ಕಾನೂನು ಅನ್ವಯವಾಗುವುದಿಲ್ಲ. ಹೀಗಾಗಿ ನಮ್ಮ ಶಕ್ತಿ ಅನುಸಾರ ನಾವು ಕಾನೂನನ್ನು ಬಳಸಿಕೊಂಡು ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು ಎಂದು ಹೇಳಿದರು.

ಆಂಧ್ರದಲ್ಲಿನ ಅಂಗನವಾಡಿ ಕಾರ್ಮಿಕರು ಇಂತದೇ ಹೋರಾಟದಲ್ಲಿ ನಿರತರಾಗಿದ್ದಾರೆ. ಅವರ ಹೋರಾಟ 42 ದಿನಗಳಿಗೆ ತಲುಪಿದೆ. ಅಲ್ಲಿನ ಹೋರಾಟಗಾರರ ದೇಹದಲ್ಲಿನ ಸಕ್ಕರೆ ಪ್ರಮಾಣ ತೀವ್ರ ಏರುಪೇರಾಗಿದೆ. ಪಲ್ಸ್ ರೇಟ್ ಕುಸಿದಿದೆ. ಅಂತಹ ಹೋರಾಟಗಳಿಗೆ ನಾವೂ ಅಣಿಯಾಗಬೇಕೆಂದು ತಿಳಿಸಿದರು.

ಮಹಾರಾಷ್ಟ್ರದಲ್ಲೂ ಅಂಗನವಾಡಿ ಕಾರ್ಮಿಕರ ಹೋರಾಟ 64 ದಿನಗಳಿಗೆ ತಲುಪಿದೆ, ಬಿಹಾರದಲ್ಲಿ 30 ದಿನ ಹೋರಾಟ ಸಂಘಟಿಸಲಾಗಿತ್ತು, ಹರಿಯಾಣದಲ್ಲಿ 4000 ಕಾರ್ಮಿಕರನ್ನು ಉದ್ಯೋಗದಿಂದ ತೆಗೆಯಲಾಗಿತ್ತು ಎಂದು ವರಲಕ್ಷ್ಮಿ ತಿಳಿಸಿದರು.

ಕೇಂದ್ರ ಸರ್ಕಾರ 2018ರಿಂದಲೂ ಒಂದೇ ಒಂದು ಬೇಡಿಕೆಯನ್ನು ಈಡೇರಿಸಿಲ್ಲ. ನಾವು ದೇಶಾದ್ಯಂತ 12 ಕೋಟಿ ಮಕ್ಕಳನ್ನು ಆರೈಕೆ ಮಾಡುತ್ತಿದ್ದೇವೆ. ಅವರಿಗೆ ಆಹಾರ, ಅಕ್ಷರವನ್ನು ಒದಗಿಸುತ್ತಿದ್ದೇವೆ. ಕೂಸಿನ ಮನೆಗಳನ್ನು ಆರಂಭಿಸುವ ಯೋಜನೆ ಇದೆ. ನಮ್ಮಲ್ಲಿ ರಿಸಲ್ಟ್ ಇಲ್ಲ. ಇದೇ ಮುಂದುವರೆದರೆ 5–6 ವರ್ಷದಲ್ಲಿ ಸ್ಕೀಂ ಇರುವುದಿಲ್ಲ ಎಂದು ಎಚ್ಚರಿಸಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ ಐಎಲ್‌ಸಿ ಮುಂದೆ ತೀರ್ಮಾನ ಆದರೂ, ಸುಪ್ರೀಂ ಕೋರ್ಟ್ ಆದೇಶ ಇದ್ದರೂ ನಿಮಗೆ ನಿವೃತ್ತರಾದ ಮೇಲೆ ಗ್ರ್ಯಾಚುಟಿ ನೀಡುತ್ತಿಲ್ಲ. ಈ ಸರ್ಕಾರಗಳು ಜನರ ಸಮಸ್ಯೆಗಳನ್ನು ಈಡೇರಿಸುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇಂದು ಅಂಗನವಾಡಿ ನೌಕರರು ಎಲ್ಲಾ ಕೆಲಸಗಳನ್ನು ಮಾಡಬೇಕು. ಹತ್ತಾರು ರಿಜಿಸ್ಟರ್‌ಗಳನ್ನು ನಿರ್ವಹಿಸಬೇಕು. ಆರೋಗ್ಯ, ಸಮೀಕ್ಷೆಗಳು ಸೇರಿದಂತೆ ಹತ್ತಾರು ಕೆಲಸಗಳನ್ನು ಮಾಡಬೇಕು. ಹೀಗಿದ್ದರೂ ಅವರಿಗೆ ಕನಿಷ್ಠ ವೇತನ ಇಲ್ಲ. ನಿವೃತ್ತರಾದರೆ ಗ್ರ್ಯಾಚ್ಯುಟಿ ಇಲ್ಲ ಎಂದು ಹೇಳಿದರು.

ಯುವಕರಿಗೆ ಖಾಯಂ ಕೆಲಸಗಳಿಲ್ಲ. ಒಂದು ಕಡೆ ನಿರುದ್ಯೋಗ ಕಾಡುತ್ತಿದ್ದರೆ ಮತ್ತೊಂದು ಕಡೆ ಬೆಲೆ ಏರಿಕೆ ಕಾಡುತ್ತಿದೆ. ಇನ್ನು ಸ್ಕೀಂ ನೌಕರರು ರಿಟೈರ್ ಆದ ಮೇಲೆ ಭವಿಷ್ಯ ಇಲ್ಲ. ಕೆಲವೇ ಶ್ರೀಮಂತರು ಶ್ರೀಮಂತರಾಗುವುದನ್ನು ನೋಡುತ್ತಿದ್ದೇವೆ ಎಂದು ಹೇಳಿದರು.



ಕಾರ್ಮಿಕ ಮುಖಂಡ ಬಿ.ಎನ್.ಮಂಜುನಾಥ್ ಮಾತನಾಡಿ, ಈಗಿನ ಕೇಂದ್ರ ಸರ್ಕಾರ 29 ಕಾರ್ಮಿಕ ಕಾನೂನುಗಳನ್ನು 4 ಸಂಹಿತೆಗಳನ್ನಾಗಿ ಮಾಡಲು ಹೊರಟಿದೆ. ಕಳೆದ ಹತ್ತು ವರ್ಷಗಳಲ್ಲಿ ಈಗಿನ ಸರ್ಕಾರ ಯಾವುದೇ ಜನಪರ ಕೆಲಸಗಳನ್ನು ಕೈಗೊಂಡಿಲ್ಲ ಬದಲಿಗೆ ಜನವಿರೋಧಿ ನೀತಿಗಳನ್ನು ಕೈಗೊಂಡಿದೆ ಎಂದರು.

ಅಗತ್ಯ ವಸ್ತುಗಳ ಬೆಲೆಗಳು ತೀವ್ರವಾಗಿ ಏರಿಕೆ ಕಂಡಿವೆ. ಶಿಕ್ಷಣ–ಆರೋಗ್ಯ ದುಬಾರಿಯಾಗಿದೆ. ಎಲ್ಲರಿಗೂ ಮನೆ ಇಲ್ಲ, ಹಸಿವು–ಬಡತನ ಹೆಚ್ಚಾಗಿದೆ ಎಂದರು.

ಕಾರ್ಮಿಕರ ಉದ್ಯೋಗ ನಷ್ಟ ಹೆಚ್ಚಾಗಿದೆ. ಸಾರ್ವಜನಿಕ ಉದ್ಯಮಗಳು ಖಾಸಗೀಕರಣ ತೀವ್ರವಾಗಿ ನಡೆಯುತ್ತಿದೆ. ಜೊತೆಗೆ ಉದ್ಯಮಿಗಳ 15 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಲಾಗಿದೆ ಎಂದು ವಿವರಿಸಿದರು.

ಕಾರ್ಮಿಕ ಮುಖಂಡ ಮುನಿರಾಜು ಮಾತನಾಡಿದರು. ಕಾರ್ಮಿಕ ಮುಖಂಡರಾದ ಲೀಲಾವತಿ ಉಪಸ್ಥಿತರಿದ್ದರು.



ಸಂಕಷ್ಟದಲ್ಲಿ ಕಾರ್ಮಿಕರು

ಒಂದನೇ ಕೇಂದ್ರದಲ್ಲಿ ಟೀಚರ್, ಎಲ್ಪರ್ ಇಬ್ಬರೂ ಇಲ್ಲ. ನನ್ನ ಸೆಂಟರ್‌ನಲ್ಲಿ ಕಾರ್ಯಕರ್ತೆ ಇಲ್ಲ. ಆದರೂ ಕೇಂದ್ರವನ್ನು ನಿರ್ವಹಣೆ ಮಾಡಬೇಕಾಗಿದೆ ಎಂದು ಬೆಂಗಳೂರು ಪೂರ್ವದ ಎಮ್ಮಲೂರು ಅಂಗನವಾಡಿ ಕಾರ್ಯಕರ್ತೆ ಅನಸೂಯ ತನ್ನ ನೋವನ್ನು ತೋಡಿಕೊಂಡರು.

ಎರಡೂ ಸೆಂಟರ್‌ಗಳಲ್ಲಿ ನಾನೇ ಅಡಿಗೆ ಮಾಡಬೇಕು. ಮೂರು ವರ್ಷಗಳಿಂದ ಅಡಿಗೆ ಅನಿಲ ಹಣ ಬಂದಿಲ್ಲ. ಮೂರು ವರ್ಷಗಳಿಂದ ಮೊಟ್ಟೆ, ತರಕಾರಿ ಹಣ ಬಂದಿಲ್ಲ. ನಾವು ನಮ್ಮ ವೇತನಿಂದ ಇವುಗಳನ್ನು ಖರೀದಿಸಿ ಕೇಂದ್ರವನ್ನು ನಡೆಸುತ್ತಿದ್ದೇವೆ. ಎಷ್ಟಂತ ನಮ್ಮ ವೇತನದಿಂದ ಖರ್ಚು ಮಾಡುವುದು. ಕಣ್ಣಲ್ಲಿ ನೀರು ಬರುತ್ತದೆ ಎಂದು ತನ್ನ ಅಳಲು ತೋಡಿಕೊಂಡರು.

ಹನ್ನೆರಡು ವರ್ಷದಿಂದ ಒಬ್ಬಳೇ ಮಿನಿ ಕೇಂದ್ರವನ್ನು ನಡೆಸುತ್ತಿದ್ದೇನೆ ಎಂದು ಬೆಂಗಳೂರು ಮುರುಗೇಶ್‌ಪಾಳ್ಯ ಮಿನಿ ಅಂಗನವಾಡಿ ಕೇಂದ್ರದ ರುಕ್ಮಿಣಿ ಹೇಳುತ್ತಾರೆ.

ಮಕ್ಕಳ ಸೇವೆ ಮಾಡುವುದರೊಂದಿಗೆ ರೇಷನ್ ವಿತರಣೆವರೆಗೂ ಎಲ್ಲಾ ಕೆಲಸಗಳನ್ನು ನಾನೊಬ್ಬಳೇ ಮಾಡಬೇಕು. ಹಲವು ವರ್ಷಗಳಿಂದ ಮೊಟ್ಟೆ, ತರಕಾರಿ ಹಣ ಬಂದಿಲ್ಲ. ನಾನೇ ಕೈಯಿಂದ ಹಾಕಿಕೊಂಡು ನಿರ್ವಹಿಸುತ್ತಿದ್ದೇನೆ ಎಂದು ಹೇಳಿದರು.

➘ ಒಬ್ಬರಿಗೆ ಉದ್ಯೋಗ ನೀಡಲು ಆದ್ಯತೆ, ಸೇವೆಯಲ್ಲಿದ್ದಾಗ ಮರಣ ಹೊಂದಿದವರಿಗೆ ಅಂಗನವಾಡಿ ವಿಮೆ ಅಥವಾ ವೈಎಸ್‌ಆರ್ ವಿಮೆ ಜಾರಿ, ಅಂತ್ಯಸಂಸ್ಕಾರದ ವೆಚ್ಚ ರೂ. 20,000, ಸಹಾಯಕಿಯರ ಬಡ್ತಿ ವಯಸ್ಸನ್ನು 45 ವರ್ಷದಿಂದ 50 ವರ್ಷಕ್ಕೆ ಹೆಚ್ಚಳ, ಬಡ್ತಿಗೆ ನಿರ್ದಿಷ್ಟ ನಿಯಮಾವಳಿಗಳನ್ನು ರೂಪಿಸಲಾಗುವುದು, ನಿವೃತ್ತಿ ವಯಸ್ಸನ್ನು 60 ರಿಂದ 62 ವರ್ಷಕ್ಕೆ ಹೆಚ್ಚಿಸುವುದು, ನಾಲ್ಕು ಅಪ್ಲಿಕೇಶನ್‌ಗಳನ್ನು ಒಂದು ಅಪ್ಲಿಕೇಶನ್‌ಗೆ ವಿಲೀನಗೊಳಿಸುವುದು, ಬಾಕಿ ಉಳಿದಿರುವ 164 ಗ್ರೇಡ್ ಟು ಸೂಪರ್ ವೈಸರ್ ಹುದ್ದೆಗಳನ್ನು ಏಪ್ರಿಲ್ ವೇಳೆಗೆ ಜಾರಿ, ವೇತನದೊಂದಿಗೆ ವೈದ್ಯಕೀಯ ರಜೆ, ವೈಎಸ್‌ಆರ್ ಪೂರ್ಣ ಪೌಷ್ಟಿಕಾಂಶ ಮೆನು ಶುಲ್ಕ, ಮೆನು ಹೆಚ್ಚಳ, ಗ್ಯಾಸ್ ಇತ್ಯಾದಿ ಸಮಸ್ಯೆಗಳನ್ನು ಚರ್ಚಿಸಲು ಮತ್ತು ನಿರ್ಧರಿಸಲು ಸಮಿತಿ ರಚನೆ ಸೇರಿದಂತೆ 11 ಬೇಡಿಕೆಗಳ ಈಡೇರಿಕೆಗೆ ಸರ್ಕಾರ ಒಪ್ಪಿಗೆ ಸೂಚಿಸಿದೆ. ●

ಕಾರ್ಮಿಕ ವರ್ಗದ ಬೇಡಿಕೆಗಳ ಈಡೇರಿಕೆಗಾಗಿ ಸಂಸದರ ಕಚೇರಿ ಚಲೋ.......

ಪುಟ 3 ರಿಂದ

ವಿರುದ್ಧವೇ ದಬ್ಬಾಳಿಕೆ ನಡೆಸುತ್ತದೆ ಎಂದು ತೀವ್ರವಾಗಿ ಟೀಕಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, ದುಡಿಮೆಗೆ ತಕ್ಕ ಪ್ರತಿಫಲವಿಲ್ಲದೆ ಒದ್ದಾಡುತ್ತಿರುವ ಕಾರ್ಮಿಕ ವರ್ಗ, ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯಿಂದಲೂ ತತ್ತರಿಸುತ್ತಿದೆ. ಅಸಂಘಟಿತ ಕ್ಷೇತ್ರದ ಕೋಟ್ಯಾಂತರ ಸಂಖ್ಯೆಯ ಕಾರ್ಮಿಕರಿಗೆ ಕಲ್ಯಾಣ ಮಂಡಳಿ ರಚಿಸಲು ಆರ್ಥಿಕ ಕೊರತೆಯ ನೆಪ ಹೇಳುವ ಸರಕಾರ ಈ ದೇಶದ 100 ಕೋಟಿ ಒಡೆತನದ ಅಗರ್ಭ ಶ್ರೀಮಂತರಿಗೆ ಕೇವಲ 2% ವಿಶೇಷ ತೆರಿಗೆ ಹಾಕಿದರೆ 134 ಲಕ್ಷ ಕೋಟಿ ರೂ. ಸಂಗ್ರಹವಾಗುತ್ತದೆ. ಇದರಿಂದ ಇಡೀ ದೇಶದ ಜನತೆಗೆ ಉಚಿತವಾಗಿ ಆಹಾರ, ಆರೋಗ್ಯ, ಶಿಕ್ಷಣವನ್ನು ಉಚಿತವಾಗಿ ನೀಡಬಹುದಾಗಿದೆ ಎಂದರು.

ಪ್ರತಿಭಟನೆಯಲ್ಲಿ ರೈತ ಸಂಘಟನೆಯ ನಾಯಕರಾದ ಕೃಷ್ಣಪ್ಪ ಸಾಲ್ಯಾನ್, ಸದಾಶಿವದಾಸ್, ಯುವಜನ ಮುಖಂಡರಾದ ರಿಜ್ವಾನ್ ಹರೇಕಳ, ಜಗದೀಶ್ ಬಜಾಲ್ ರವರು ಭಾಗವಹಿಸಿದ್ದರು.

ಹೋರಾಟದ ನೇತೃತ್ವವನ್ನು ಸಿಐಟಿಯು ಜಿಲ್ಲಾ ನಾಯಕರಾದ ಯೋಗೀಶ್ ಜಪ್ಪಿನಮೊಗರು, ಸುಕುಮಾರ್ ತೊಕ್ಕೊಟು, ರಾಧಾ ಮೂಡಬಿದ್ರೆ, ಪದ್ಮಾವತಿ ಶೆಟ್ಟಿ, ಸುಂದರ ಕುಂಪಲ, ಜಯಂತ ನಾಯಕ್, ರೋಹಿದಾಸ್, ವಸಂತಿ ಕುಪ್ಪೆಪದವು, ಗಿರಿಜಾ ಮೂಡಬಿದ್ರೆ, ಜನಾರ್ದನ ಕುತ್ತಾರ್, ಭಾರತಿ ಬೋಳಾರ, ಜಯಲಕ್ಷ್ಮಿ, ಲೋಲಾಕ್ಷಿ, ಪುಷ್ಪಾ, ವಾರಿಜಾ, ಲಕ್ಷ್ಮಿ, ಜಯಶ್ರೀ ಬೆಳ್ತಂಗಡಿ, ಮುಸ್ತಾಫ, ಆಸಿಫ್, ಅಹಮ್ಮದ್ ಭಾವ ಮುಂತಾದವರು ವಹಿಸಿದ್ದರು.

ಬಳಿಕ ಸಿಐಟಿಯುನ ನಿಯೋಗವೊಂದು ಜಿಲ್ಲೆಯ ಸಂಸದರಾದ ನಳಿನ್ ಕುಮಾರ್ ಕಟೀಲ್ ರವರ ಕಚೇರಿಗೆ ತೆರಳಿ ಮನವಿಯನ್ನು ಸಲ್ಲಿಸಲಾಯಿತು. ●

ಕಾರ್ಮಿಕ ವರ್ಗ ಮತ್ತು ರೈತರ ಸಖ್ಯತೆ: ಲೆನಿನ್

ಅಶೋಕ್ ಧವಳೆ
ಸಿಪಿಎಂ ಪಾಲಿಟ್‌ಬ್ಯೂರೋ ಸದಸ್ಯರು

ಕಾರ್ಮಿಕ–ರೈತ ಸಖ್ಯತೆ ಎನ್ನುವ ಮೂಲ ತತ್ವದ ಆಧಾರದ ಮೇಲೆ ಲೆನಿನ್ ಮತ್ತು ಬೋಲ್ಶೆವಿಕ್ ಪಕ್ಷ ಅನೇಕ ನೀತಿ ನಿರ್ಧಾರಗಳನ್ನು ಅಕ್ಟೋಬರ್ ಕ್ರಾಂತಿಯ ವಿಜಯದ ಮೊದಲು, ನಂತರವೂ ಸಹಾ ತೆಗೆದುಕೊಂಡರು. ರಷ್ಯಾದ ಕ್ರಾಂತಿಯ ಮುಖ್ಯ ಘೋಷಣೆಯಾಗಿದ್ದ 'ಶಾಂತಿ, ಭೂಮಿ, ಆಹಾರ' ಈ ಐಕ್ಯತೆಯನ್ನು ಪ್ರತಿಫಲಿಸುತ್ತದೆ. "ಕಾರ್ಮಿಕರು, ರೈತರು ಮತ್ತು ಸೈನಿಕರ ಪ್ರತಿನಿಧಿಗಳು ಚುನಾಯಿತ ಸೋವಿಯತ್ ಗಳಲ್ಲಿ ಪರಸ್ಪರ ಹತ್ತಿರವಾಗಿದ್ದರು. ರೈತಾಪಿ ವರ್ಗದ ಮೇಲೆ ತನ್ನ ನೇತೃತ್ವದ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಕಾರ್ಮಿಕ ವರ್ಗ ಶಕ್ತರಾಗಿರಬೇಕಿತ್ತು. ಆರ್ಥಿಕ ವ್ಯವಸ್ಥೆಯಲ್ಲಿ ಅನಗತ್ಯ ದುಂದುವೆಚ್ಚಗಳನ್ನು ತೊಲಗಿಸುವ ಮೂಲಕ ರೈತರ ವಿಶ್ವಾಸ ಗಳಿಸಲು ಸಾಧ್ಯವಾಗಬೇಕಿತ್ತು. ಆ ವಿಧದ ಸಾಮಾಜಿಕ ಸಂಬಂಧಗಳು ಆರ್ಥಿಕ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರಬೇಕು."

ದುಡಿಯುವ ವರ್ಗದ ವಿಮೋಚನಾ ಹೋರಾಟದಿಂದ ಉತ್ಪತ್ತಿಯಾದ ವಿಚಾರವಾದಿಗಳಲ್ಲಿ ಲೆನಿನ್, ಮಾರ್ಕ್ಸ್ ಅವರಿಗೆ ಸರಿಸಮಾನವಾದ ವ್ಯಕ್ತಿ ಎಂದು ವರ್ಗಪ್ರಜ್ಞೆ ಮೇಲೆ ಮತ್ತು ಇತಿಹಾಸದ ಮೇಲೆ ಅಧ್ಯಯನ ಮಾಡಿದ ಬರಹಗಾರ, ಹಂಗೇರಿಗೆ ಸೇರಿದ ಮಾರ್ಕ್ಸ್‌ವಾದಿ ಜಾರ್ಜ್ ಲುಕಾಕ್ಸ್ ಹೇಳುತ್ತಾರೆ. ನಾವು ಇಂದು ಆಚರಿಸುವ ಲೆನಿನ್ ಶತಮಾನೋತ್ಸವವು ಸಿದ್ಧಾಂತ, ಅಭ್ಯಾಸದ ಜೊತೆಗೆ ಚಳುವಳಿಗಳು ಮತ್ತು ರಚನೆಯ ಒಂದು ವಿಶಿಷ್ಟ ಸಂಯೋಜನೆಯಾಗಿದೆ. ಮೊದಲ ಸಮಾಜವಾದಿ ಕ್ರಾಂತಿಗೆ ನಾಯಕತ್ವ ಕೊಟ್ಟು ಮುನ್ನಡೆಸಿದ್ದು ಲೆನಿನ್ ಅವರ ದೊಡ್ಡ ಸಾಧನೆ. ಎಲ್ಲಾ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಅದನ್ನು ರಕ್ಷಿಸಲು ಅಗತ್ಯವಾದ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿದ್ದು ಅವರ ವಿಶೇಷತೆ. ಮಾರ್ಕ್ಸ್ ವಾದಕ್ಕೆ ಅವರು ಮಾಡಿದ ಬಲಿಷ್ಟವಾದ ಸೈದ್ಧಾಂತಿಕ ಕೊಡುಗೆಗಳಲ್ಲಿ ಪ್ರಮುಖವಾದದ್ದು ಸಮಾಜವಾದಿ ಕ್ರಾಂತಿಗಾಗಿ ಕಾರ್ಮಿಕ–ರೈತ ಸಖ್ಯತೆಗೆ ಸಂಬಂಧಿಸಿದೆ. ಈ ವಿಷಯವನ್ನು ಅವರು ಸೈದ್ಧಾಂತಿಕವಾಗಿ ಪ್ರಸ್ತಾಪಿಸಿದ್ದು ಮಾತ್ರವಲ್ಲದೆ, ರಷ್ಯಾದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯಲ್ಲಿ ಅದನ್ನು ಆಚರಣೆಗೆ ತಂದರು. ಸಮಾಜವಾದಿ ವ್ಯವಸ್ಥೆಯ ನಿರ್ಮಾಣದಲ್ಲಿ ಅದನ್ನು ಆಂತರಿಕ ಭಾಗವನ್ನಾಗಿ ಮಾಡಿದರು.



1901 ರಲ್ಲಿ ಅವರು "ಕಾರ್ಮಿಕ ವರ್ಗ ಪಕ್ಷ, ರೈತಾಪಿ ವರ್ಗ" ಎಂಬ ಲೇಖನವನ್ನು ಬರೆದರು. ಕಾರ್ಮಿಕ ವರ್ಗದ ಹೋರಾಟಗಳ ಕ್ರಾಂತಿಕಾರಿ ಗುರಿ ಕೋಟ್ಯಂತರ ರೈತರಲ್ಲಿ ಕ್ರಾಂತಿ ಪ್ರಜ್ಞೆ ಜಾಗೃತವಾಗದೆ ಅದು ಸಾಧ್ಯವಿಲ್ಲ ಎಂದು ಹೇಳಿದರು. ಕೋಟ್ಯಂತರ ರೈತರಲ್ಲಿ ಕ್ರಾಂತಿಕಾರಿ ಪ್ರಜ್ಞೆ ಮೂಡಿಸದೆ ಕಾರ್ಮಿಕ ವರ್ಗದ ಹೋರಾಟಗಳ ಕ್ರಾಂತಿಕಾರಿ ಗುರಿ ಸಾಧ್ಯವಿಲ್ಲ ಎಂದರು.

ಕಾರ್ಮಿಕ ವರ್ಗ ಮತ್ತು ರೈತರು ಕ್ರಾಂತಿಕಾರಿ ಶಕ್ತಿ

ಮಾರ್ಕ್ಸ್ ಮತ್ತು ಎಂಗೆಲ್ಸ್ ತಮ್ಮ ಬರಹಗಳಲ್ಲಿ, ಕೈಗಾರಿಕೆಗಳಲ್ಲಿ ಅಭಿವೃದ್ಧಿ ಹೊಂದಿದ ಪಶ್ಚಿಮದ ದೇಶಗಳ ಕಾರ್ಮಿಕ ವರ್ಗದ ಮೇಲೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದರು. ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಪರಿವರ್ತನೆಯ ಪ್ರಕ್ರಿಯೆಯಲ್ಲಿ ಕಾರ್ಮಿಕ ವರ್ಗ ಅದಕ್ಕೆ ಅಗತ್ಯವಾದ ನಾಯಕತ್ವವನ್ನು ನೀಡಬಲ್ಲದು ಎಂದು ಈ ಇಬ್ಬರೂ ಪ್ರತಿಪಾದಿಸಿದರು. ಆದಾಗ್ಯೂ, ರೈತಾಪಿ ವರ್ಗದ ವಿವಿಧ ವಿಭಾಗಗಳು ಆ ಕ್ರಾಂತಿಯಲ್ಲಿ ನಿರ್ವಹಿಸಿದ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನು ಸಹಾ ಅವರು ಗಣನೆಗೆ ತೆಗೆದುಕೊಂಡರು. 1871 ರಲ್ಲಿ ನಡೆದ ವೀರೋಚಿತ ಪ್ಯಾರಿಸ್ ಕಮ್ಯೂನ್ ಅನ್ನು ಸೋಲಿಸುವಲ್ಲಿ ರೈತಾಪಿ ವರ್ಗ, ಫ್ರೆಂಚ್ ಬೂರ್ಜ್ವಾ ವರ್ಗಕ್ಕೆ ಯಾವ ರೀತಿಯಲ್ಲಿ ಸಹಕರಿಸಿದರು ಎಂಬುದನ್ನು ಅವರು ಪರಿಗಣನೆಗೆ ತೆಗೆದುಕೊಂಡರು. ಬಂಡವಾಳಶಾಹಿಗಳ ಆಸ್ತಿಗಳನ್ನು ಮಾತ್ರವಲ್ಲದೆ, ರೈತರ ಆಸ್ತಿಗಳ ಮೇಲೂ ಕಾರ್ಮಿಕ ವರ್ಗ ದಾಳಿ ಮಾಡುತ್ತದೆ ಎಂಬ ಭಯದಿಂದ ರೈತರು ಬಂಡವಾಳಶಾಹಿಗಳಿಗೆ ಬೆಂಬಲಿಸುವಂತೆ ಮಾಡಿತು. ಆದಾಗ್ಯೂ, ಮಾರ್ಕ್ಸ್ ಮತ್ತು ಎಂಗೆಲ್ಸ್ ರೈತರ ಶಕ್ತಿಯ ಬಗ್ಗೆ ಅರಿವು ಹೊಂದಿದ್ದರು. ಏಪ್ರಿಲ್ 16, 1856 ರಂದು ಮಾರ್ಕ್ಸ್ ಅವರು ಎಂಗೆಲ್ಸ್‌ಗೆ ಬರೆದ ಪತ್ರದಲ್ಲಿ, ಕಾರ್ಮಿಕ ವರ್ಗದ ಕ್ರಾಂತಿಗೆ ರೈತರು ಸೇರಿದರೆ ಅದ್ಭುತಗಳು ಸಂಭವಿಸುತ್ತವೆ ಎಂದು ಹೇಳಿದರು. ಈ ವಿಷಯವನ್ನು ಲೆನಿನ್ ಗಂಭೀರವಾಗಿ ತೆಗೆದುಕೊಂಡರು. ತಮ್ಮ ಜೀವನದ ಅಂತ್ಯದಲ್ಲಿ (1923, ಮೇ 30) ಪ್ರಾವ್ಡಾ ಪ್ರಕಟಿಸಿದ 'ನಮ್ಮ ಕ್ರಾಂತಿ' ಎಂಬ ಶೀರ್ಷಿಕೆಯ ಒಂದು ಲೇಖನವು ಈ ಅಂಶವನ್ನು ಒತ್ತಿಹೇಳಿದೆ.

ಲೆನಿನ್ ತಮ್ಮ 26 ನೇ ವಯಸ್ಸಿನಲ್ಲಿ, "ದಿ ಡೆವಲಪ್ಮೆಂಟ್ ಆಫ್ ಕ್ಯಾಪಿಟಲಿಸಂ ಇನ್ ರಷ್ಯಾ" ಎಂಬ ಗ್ರಂಥವನ್ನು 1896 ರಲ್ಲಿ ಬರೆದರು. ಅದರಲ್ಲಿ ಅವರು, ಕಾರ್ಮಿಕ ವರ್ಗ ಮತ್ತು ರೈತರ ಕ್ರಾಂತಿಕಾರಿ ಶಕ್ತಿಯ ಕುರಿತು ಬರೆದಿದ್ದಾರೆ. 1901 ರಲ್ಲಿ ಅವರು "ಕಾರ್ಮಿಕವರ್ಗ ಪಕ್ಷ, ರೈತಾಪಿ ವರ್ಗ" ಎಂಬ ಲೇಖನವನ್ನು ಬರೆದರು. ಕಾರ್ಮಿಕ ವರ್ಗದ ಹೋರಾಟಗಳ ಕ್ರಾಂತಿಕಾರಿ ಗುರಿ ಕೋಟ್ಯಂತರ ರೈತರಲ್ಲಿ ಕ್ರಾಂತಿ ಪ್ರಜ್ಞೆ ಜಾಗೃತವಾಗದೆ ಅದು ಸಾಧ್ಯವಿಲ್ಲ ಎಂದು ಹೇಳಿದರು. ಕೋಟ್ಯಂತರ ರೈತರಲ್ಲಿ ಕ್ರಾಂತಿಕಾರಿ ಪ್ರಜ್ಞೆ ಮೂಡಿಸದೆ ಕಾರ್ಮಿಕ ವರ್ಗದ ಹೋರಾಟಗಳ ಕ್ರಾಂತಿಕಾರಿ ಗುರಿ ಸಾಧ್ಯವಿಲ್ಲ ಎಂದರು. 1903 ರಲ್ಲಿ ಅವರು ತಮ್ಮ ಪುಸ್ತಕ "ಫಾರ್ ದಿ ರೂರಲ್ ಪೂರ್" ನಲ್ಲಿ ಈ ಕಲ್ಪನೆಯನ್ನು ವಿಸ್ತರಿಸಿದರು. ಇದು ಇನ್ನೂ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡಿದೆ.

ಕಾರ್ಮಿಕ ಮತ್ತು ರೈತ ಸಖ್ಯತೆ ದ್ವಂದ್ವ ಉದ್ದೇಶಗಳು

1905 ರಲ್ಲಿ ನಡೆದ ಮೊದಲ ರಷ್ಯಾದ ಕ್ರಾಂತಿಯು ಝಾರ್ ಪ್ರಭುತ್ವದ ರಕ್ತಪಾತದಿಂದಾಗಿ ಹಿನ್ನಡೆ ಅನುಭವಿಸಿದರೂ, ಅದು ಅನೇಕ ಅಮೂಲ್ಯವಾದ ಪಾಠಗಳನ್ನು ಕಲಿಸಿತು. ಆಗ ಬೋಲ್ಶೆವಿಕ್ ಪಕ್ಷವು 'ಕಾರ್ಮಿಕ ವರ್ಗ ಮತ್ತು ರೈತರ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಸರ್ವಾಧಿಕಾರ' ಎಂಬ ಘೋಷಣೆಯನ್ನು ಅಳವಡಿಸಿಕೊಂಡಿತು. ಇದು ಮಾರ್ಕ್ಸ್ ವಾದವನ್ನು ಇನ್ನಷ್ಟು ಶ್ರೀಮಂತ ಮಾಡಿತು. ನಿರ್ದಿಷ್ಟ ಸನ್ನಿವೇಶಗಳ ನಿರ್ದಿಷ್ಟ ವಿಶ್ಲೇಷಣೆಯ ಆಧಾರದ ಲೆನಿನ್ ಪ್ರಸ್ತಾಪಿಸಿದ ಸಿದ್ಧಾಂತವು ಈ ವಿಧದಲ್ಲಿತ್ತು. ಬಂಡವಾಳಶಾಹಿ ವಿಧಾನವು ಮೊದಲು ಪ್ರಾರಂಭಿಸಿದ ದೇಶಗಳಿಗೂ, ನಂತರ ತಡವಾಗಿ ಆರಂಭವಾದ ದೇಶಗಳಿಗೂ ಬಹಳ ವ್ಯತ್ಯಾಸವಿದೆ. 1789 ರ ಫ್ರೆಂಚ್ ಬೂರ್ಜ್ವಾ ವರ್ಗದ ನಾಯಕತ್ವದಲ್ಲಿ ನಡೆದ ಫ್ರೆಂಚ್ ಕ್ರಾಂತಿಯು, ಊಳಿಗಮಾನ್ಯ ಪದ್ಧತಿಯನ್ನು ನಾಶಪಡಿಸಿ, ಊಳಿಗಮಾನ್ಯ ಜಮೀನುಗಳನ್ನು ರೈತರಿಗೆ ವಿತರಿಸಿತು. ಇದು ಬಂಡವಾಳಶಾಹಿಯ ಆರಂಭಿಕ ಹಂತದ ಬೆಳವಣಿಗೆಯಾಗಿದೆ. ರಶಿಯಾದಲ್ಲಾಗಲೀ, ಇತರ ದೇಶಗಳಲ್ಲಾಗಲೀ, ಅಲ್ಲಿ ಬೆಳೆಯುತ್ತಿದ್ದ ಕಾರ್ಮಿಕವರ್ಗದ ಭಯದಿಂದಾಗಿ ಬಂಡವಾಳಶಾಹಿ ವರ್ಗವು ಭೂಮಾಲೀಕರೊಂದಿಗೆ ರಾಜಿ ಮಾಡಿಕೊಳ್ಳಲು ಆರಂಭಿಸಿತು. ಇದು ರೈತರ ಪ್ರಜಾಸತ್ತಾತ್ಮಕ ಆಕಾಕ್ಷೆಗಳಿಗೆ ವಿರುದ್ಧವಾಗಿದೆ ಮತ್ತು ಅವರ ಅಸಂತೃಪ್ತಿಯನ್ನು ಹೆಚ್ಚಿಸುತ್ತದೆ. ಭೂಮಾಲೀಕರ ಆಸ್ತಿಯ ಮೇಲೆ ದಾಳಿ ಮಾಡಿದರೆ ಪ್ರತೀಕಾರ ತೀರಿಸಿಕೊಳ್ಳಲು, ಬಂಡವಾಳಶಾಹಿಗಳ ಆಸ್ತಿಯ ಮೇಲೆ ಹಿಂತಿರುಗಿಸುವಂತೆ ಮಾಡುತ್ತದೆ ಎಂದು ಬೂರ್ಜ್ವಾ ವರ್ಗ ಭಯಪಟ್ಟಿತು.

ಪ್ರಸ್ತುತ ಅಧಿಕಾರದಲ್ಲಿರುವ ಕಾರ್ಪೊರೇಟ್–ಮತಾಂಧ–ಮನುವಾದ–ನಿರಂಕುಶ ಆರ್‌ಎಸ್‌ಎಸ್–ಬಿಜೆಪಿ ಸರ್ಕಾರವನ್ನು ಸೋಲಿಸಲು ವಿಶಾಲವಾದ, ಆಮೂಲಾಗ್ರ ಆಂದೋಲನ, ರಾಜಕೀಯ, ಸೈದ್ಧಾಂತಿಕ ಮತ್ತು ರಚನಾತ್ಮಕ ಕ್ರಮದ ಅಗತ್ಯವಿದೆ. ಲೆನಿನ್ ಅವರ ಕಾರ್ಮಿಕ–ರೈತ ಮೈತ್ರಿಯ ಕನಸನ್ನು ಕಟ್ಟಲು ಭಾರತದ ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅಗಾಧ ಪ್ರಯತ್ನಗಳನ್ನು ಮಾಡಬೇಕಾಗಿದೆ. ಅದು ಮಾತ್ರ ಭಾರತದಲ್ಲಿ ನಿಜವಾದ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆಯನ್ನು ತರಬಲ್ಲದು.

ಆ ನಿರ್ದಿಷ್ಟ ಪರಿಸ್ಥಿತಿಯಲ್ಲಿ ಲೆನಿನ್ ಕಾರ್ಮಿಕ ವರ್ಗದ ನಾಯಕತ್ವದಲ್ಲಿ ಕಾರ್ಮಿಕ–ರೈತ ಏಕತೆಯನ್ನು ಪ್ರತಿಪಾದಿಸಿದರು. ಇದು ಊಳಿಗಮಾನ್ಯ–ವಿರೋಧಿ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುತ್ತದೆ ಮತ್ತು ಬಂಡವಾಳಶಾಹಿ ವಿರೋಧಿ ಹೋರಾಟದಿಂದ ಸಮಾಜವಾದಿ ಕ್ರಾಂತಿಯತ್ತ ಸಾಗುತ್ತದೆ ಎಂದು ಅವರು ಪ್ರತಿಪಾದಿಸಿದರು. 1905 ರಲ್ಲಿ ಬರೆದ ತಮ್ಮ ಪ್ರಸಿದ್ಧ ಕೃತಿ 'ಡೆಮಾಕ್ರಟಿಕ್ ರೆವಲ್ಯೂಷನ್' ನಲ್ಲಿ, ಸೋಶಿಯಲ್ ಡೆಮಾಕ್ರಸಿಯನ್ನು ಎರಡು ಚಲನೆಗಳಲ್ಲಿ ಅದನ್ನು ಈ ಕೆಳಗಿನಂತೆ ಸಂಕ್ಷಿಪ್ತಗೊಳಿಸಿದರು. "ಬಂಡವಾಳಶಾಹಿ ವರ್ಗದ ಅಸ್ಥಿರತೆ ಮತ್ತು ಶ್ರೀಮಂತ ವರ್ಗದ ಪ್ರತಿರೋಧವನ್ನು ರೈತರ ಬಲದಿಂದ ಉರುಳಿಸಬೇಕಾದರೆ, ಕಾರ್ಮಿಕ ವರ್ಗ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸಬೇಕು. ಮಧ್ಯಮ ವರ್ಗದ ಕಾರ್ಮಿಕರು ಸೇರಿದಂತೆ, ರೈತಾಪಿ ವರ್ಗ, ಪೆಟಿ(ಸಣ್ಣ) ಬೂರ್ಜ್ವಾ ವರ್ಗಗಳ ಜನರನ್ನು ಒಟ್ಟುಗೂಡಿಸುವ ಮೂಲಕ, ಈ ಜನರ ನಡುವಿನ ಅಸ್ಥಿರತೆಯನ್ನು ತಡೆಯುವ ಮೂಲಕ, ಬೂರ್ಜ್ವಾಗಳ ಪ್ರತಿರೋಧವನ್ನು ಬಲಪ್ರಯೋಗದಿಂದ ಉರುಳಿಸಿ ಸಮಾಜವಾದಿ ಕ್ರಾಂತಿಯನ್ನು ಗೆಲ್ಲಬೇಕು.

ಕಾರ್ಮಿಕ–ರೈತ ಸಖ್ಯತೆ ಎನ್ನುವ ಮೂಲ ತತ್ವದ ಆಧಾರದ ಮೇಲೆ ಲೆನಿನ್ ಮತ್ತು ಬೋಲ್ಶೆವಿಕ್ ಪಕ್ಷ ಅನೇಕ ನೀತಿ ನಿರ್ಧಾರಗಳನ್ನು ಅಕ್ಟೋಬರ್ ಕ್ರಾಂತಿಯ ವಿಜಯದ ಮೊದಲು, ನಂತರವೂ ಸಹಾ ತೆಗೆದುಕೊಂಡರು. ರಷ್ಯಾದ ಕ್ರಾಂತಿಯ ಮುಖ್ಯ ಘೋಷಣೆಯಾಗಿದ್ದ 'ಶಾಂತಿ, ಭೂಮಿ, ಆಹಾರ' ಈ ಐಕ್ಯತೆಯನ್ನು ಪ್ರತಿಫಲಿಸುತ್ತದೆ. "ಕಾರ್ಮಿಕರು, ರೈತರು ಮತ್ತು ಸೈನಿಕರ ಪ್ರತಿನಿಧಿಗಳು ಚುನಾಯಿತ ಸೋವಿಯತ್ ಗಳಲ್ಲಿ ಪರಸ್ಪರ ಹತ್ತಿರವಾಗಿದ್ದರು. ರೈತಾಪಿ ವರ್ಗದ ಮೇಲೆ ತನ್ನ ನೇತೃತ್ವದ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಕಾರ್ಮಿಕ ವರ್ಗ ಶಕ್ತರಾಗಿರಬೇಕಿತ್ತು. ಆರ್ಥಿಕ ವ್ಯವಸ್ಥೆಯಲ್ಲಿ ಅನಗತ್ಯ ದುಂದುವೆಚ್ಚಗಳನ್ನು ತೊಲಗಿಸುವ ಮೂಲಕ ರೈತರ ವಿಶ್ವಾಸ ಗಳಿಸಲು ಸಾಧ್ಯವಾಗಬೇಕಿತ್ತು. ಆ ವಿಧದ ಸಾಮಾಜಿಕ ಸಂಬಂಧಗಳು ಆರ್ಥಿಕ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರಬೇಕು.

'ಸಾಮ್ರಾಜ್ಯಶಾಹಿಯ ಹೊಸ ಸವಾಲುಗಳು' ಎಂಬ ಇದೇ ಪುಸ್ತಕದಲ್ಲಿ ಲೆನಿನ್ 1916 ರಲ್ಲಿ ಸಾಮ್ರಾಜ್ಯವಾದದ ಮೇಲೆ ಅದ್ಭುತವಾದ ವಿಶ್ಲೇಷಣೆ ಮಾಡಿದ್ದಾರೆ. ಇಂದು, ಒಂದು ಶತಮಾನದ ನಂತರ, ಲೆನಿನ್ ವಿವರಿಸಿದ ಸಾಮ್ರಾಜ್ಯವಾದದ ಮೂಲಭೂತ ಲಕ್ಷಣವಾದ ಸುಲಿಗೆ, ಅಸಮಾನತೆ, ಯುದ್ಧಗಳು ಮತ್ತು ವಿನಾಶ ಮತ್ತಷ್ಟು ಹೆಚ್ಚಾಗಿವೆ. ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆಯು ವಿನಾಶಕಾರಿಯಾಗಿದೆ. ಯುದ್ಧಗಳು ಮತ್ತು ಕ್ಷಾಮಗಳಲ್ಲಿ ಲಕ್ಷಾಂತರ ಜನರು ಸಾಯುತ್ತಿದ್ದಾರೆ. ಜಾಗತಿಕ ತಾಪಮಾನ ಮತ್ತು ಪರಿಸರ ನಾಶದ ಕಾರಣಗಳಿಂದಾಗಿ ಭೂಮಿ ಗಂಭೀರ ಅಪಾಯದಲ್ಲಿದೆ.

ನವ–ಫ್ಯಾಸಿಸ್ಟ್, ಯುದ್ಧೋತ್ಸಾಹ ಪ್ರವೃತ್ತಿಗಳು

ಲೆನಿನ್ ಅವರ ಕಾರ್ಮಿಕ–ರೈತ ಮೈತ್ರಿ ಸಿದ್ಧಾಂತ ಮತ್ತು ಅದರ ಅನುಕರಣೆಯು ರಷ್ಯಾದಲ್ಲಿ ಮಾತ್ರವಲ್ಲದೆ ಚೀನಾ, ವಿಯೆಟ್ನಾಂ, ಕೊರಿಯಾ ಮತ್ತು ಕ್ಯೂಬಾದಲ್ಲಿ ಸಮಾಜವಾದಿ ಕ್ರಾಂತಿಗಳ ಯಶಸ್ಸಿಗೆ ಕಾರಣವಾಯಿತು. ಕ್ರಾಂತಿಗಳು ಯಶಸ್ವಿಯಾದ ಈ ಎಲ್ಲಾ ದೇಶಗಳಲ್ಲಿ, ಕ್ರಾಂತಿಕಾರಿ ಶಕ್ತಿಗಳು ಬೂರ್ಜ್ವಾ–ಊಳಿಗಮಾನ್ಯ ಆಡಳಿತ ವರ್ಗಗಳ ವಿರುದ್ಧ ಮತ್ತು ಆ ವರ್ಗಗಳ ಹಿಂದೆ ನಿಂತಿರುವ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಡಬೇಕಾಗಿತ್ತು. ಸಾಮ್ರಾಜ್ಯವಾದಿ ಜಾಗತೀಕರಣ ಮತ್ತು ನವ ಉದಾರವಾದದ ಹೊಸ ಯುಗದಲ್ಲಿ, ನವ–ಫ್ಯಾಸಿಸ್ಟ್, ಯುದ್ಧೋತ್ಸಾಹ, ಧಾರ್ಮಿಕ ಮತ್ತು ಜನಾಂಗೀಯ ಪ್ರವೃತ್ತಿಗಳು ➚

ಪಶ್ಚಿಮ ಬಂಗಾಳ, ಪಂಜಾಬ್‌ನಲ್ಲಿ ಆಡಳಿತ ಪಕ್ಷಗಳ ಪ್ರತ್ಯೇಕ ಸ್ಪರ್ಧೆಯು 'ಇಂಡಿಯಾ' ಮೈತ್ರಿಕೂಟದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ: ಯೆಚೂರಿ

ಪಶ್ಚಿಮ ಬಂಗಾಳ ಮತ್ತು ಪಂಜಾಬ್ ಮುಖ್ಯಮಂತ್ರಿಗಳು ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ, ರಾಮಮಂದಿರ ಉದ್ಘಾಟನೆ, 'ಇಂಡಿಯಾ' ಮೈತ್ರಿ ಪಕ್ಷಗಳ ನಡುವೆ ಸೀಟು ಹಂಚಿಕೆ ಇತ್ಯಾದಿ, ಹಿಂದೂ ಪತ್ರಕರ್ತೆ ಶೋಬನಾ ಕೆ. ನಾಯರ್ ಅವರ ಪ್ರಶ್ನೆಗಳಿಗೆ ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಉತ್ತರಿಸಿದ್ದಾರೆ.

ಪ್ರಶ್ನೆ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಇಬ್ಬರೂ 'ಇಂಡಿಯಾ' ಮೈತ್ರಿಕೂಟಕ್ಕೆ ಸೇರುವ ಬದಲು ತಮ್ಮ ರಾಜ್ಯಗಳಲ್ಲಿ ಪ್ರತ್ಯೇಕವಾಗಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಇದು 'ಇಂಡಿಯಾ' ಮೈತ್ರಿಗೆ ಹೊಡೆತ ಎಂದು ಹಲವರು ಪರಿಗಣಿಸಿದ್ದಾರೆ. ನಿಮ್ಮ ಅಭಿಪ್ರಾಯವೇನು?

ಯೆಚೂರಿ: ಪ್ರತಿಯೊಂದು ಪಕ್ಷವೂ ತನ್ನದೇ ಆದ ನಿಲುವು ತಳೆದು ಅದನ್ನು ಪ್ರಕಟಿಸುತ್ತದೆ. ಆ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಆದಾಗ್ಯೂ, ಎರಡೂ ರಾಜ್ಯಗಳಲ್ಲಿ ಇದು ನಿರೀಕ್ಷಿತವಾಗಿದೆ. ಇದು 'ಇಂಡಿಯಾ' ಮೈತ್ರಿಕೂಟದ ಮೇಲೆ ಯಾವುದೇ ರೀತಿಯ ಪರಿಣಾಮ ಬೀರುವುದಿಲ್ಲ. ದೇಶದ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ರಕ್ಷಿಸಲು ನಾವು ಯಾವಾಗಲೂ ಕೆಲಸ ಮಾಡುತ್ತೇವೆ ಎಂಬುದು ನಮ್ಮ ನಿಲುವು. ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಮತ್ತು ತೃಣಮೂಲ ಕಾಂಗ್ರೆಸ್ ಅನ್ನು ಸೋಲಿಸಲು ನಾವು ಕಾಂಗ್ರೆಸ್ ಮತ್ತು ಇತರ ಜಾತ್ಯತೀತ ಪಕ್ಷಗಳೊಂದಿಗೆ ಕೆಲಸ ಮಾಡಿದ್ದೇವೆ.

ಬೆಂಗಾಲಿ ಯುವಕರು ಹಿಂಡು ಹಿಂಡಾಗಿ ಸೇರುತ್ತಾರೆ

ತೃಣಮೂಲ ಕಾಂಗ್ರೆಸ್ ಅತ್ಯಂತ ಆಕ್ರಮಣಕಾರಿ ಪಕ್ಷವಾಗಿಯೇ ಬಂದಿದೆ. ಮಮತಾ ಬ್ಯಾನರ್ಜಿ ನಮ್ಮನ್ನು ಭಯೋತ್ಪಾದಕ ಸಂಘಟನೆ ಎಂದೂ ಕರೆದಿದ್ದಾರೆ. ಅವರು ಇನ್ನೂ ಏನೇನೋ ಹೇಳಿದರು. ನಾನು ಈಗ ಅವೆಲ್ಲವನ್ನೂ ಹೇಳಲು ಹೋಗುವುದಿಲ್ಲ. ಅವರು ಏನು ಬೇಕಾದರೂ ಹೇಳಲಿ. ಇದು ನಮ್ಮ ನಿಲುವು. ಬಂಗಾಳದ ಯುವಕರು ಈಗ ನಮ್ಮ ಕಡೆ ಸೇರುತ್ತಿದ್ದಾರೆ. ಜನವರಿ 8 ರಂದು ಕೋಲ್ಕತ್ತಾದ ಬ್ರಿಗೇಡಿಯರ್ ಮೈದಾನದಲ್ಲಿ ನಡೆದ ರ್‍ಯಾಲಿ ತೋರಿಸಿಕೊಟ್ಟದ್ದು ಇದನ್ನೇ. ಇದು ನಮ್ಮ ನಿರೀಕ್ಷೆಗಳನ್ನು ಮೀರಿದೆ.

ಪಂಜಾಬ್‌ನ ಮಟ್ಟಿಗೆ ಅಲ್ಲಿನ ಆಡಳಿತ ಪಕ್ಷದ ವಿರುದ್ಧ ಎಲ್ಲ ಪಕ್ಷಗಳು ಒಗ್ಗೂಡಿದರೆ ಬಿಜೆಪಿ, ಅಕಾಲಿದಳ ಸೇರಿದಂತೆ ವಿರೋಧ ಪಕ್ಷಗಳಿಗೆ ಅನುಕೂಲವಾಗಲಿದೆ. ಕೆಲವು ರಾಜ್ಯಗಳಲ್ಲಿ ಸೀಟುಗಳ ಹಂಚಿಕೆ ಇರುತ್ತದೆ ಮತ್ತು ಕೆಲವು ರಾಜ್ಯಗಳಲ್ಲಿ ಆಗದೇ ಇರಬಹುದು. ಇವೆಲ್ಲವೂ ಆಯಾ ರಾಜ್ಯಗಳ ವಿಶೇಷತೆಗಳಿಗೆ ಒಳಪಟ್ಟಿವೆ. ಉದಾಹರಣೆಗೆ, ಕೇರಳದಲ್ಲಿ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಲೆಫ್ಟ್ ಡೆಮಾಕ್ರಟಿಕ್ ಫ್ರಂಟ್ ಮತ್ತು ಕಾಂಗ್ರೆಸ್ ಪಕ್ಷದ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಅಲೈಯನ್ಸ್ ನಡುವೆ ನೇರವಾಗಿ ಸ್ಪರ್ಧೆ ಇದೆ. ಹೀಗಾಗಿ ಇಲ್ಲಿ ಬಿಜೆಪಿಗೆ ಒಂದು ಸ್ಥಾನವೂ ಸಿಗಲಿಲ್ಲ.

ಈ ತಿಂಗಳ ಅಂತ್ಯದ ವೇಳೆಗೆ ಸ್ಪಷ್ಟ ಸುಧಾರಣೆ

ಪ್ರಶ್ನೆ: ಕಳೆದ ವರ್ಷ ಜೂನ್ 23 ರಂದು ವಿರೋಧ ಪಕ್ಷಗಳು ಒಗ್ಗೂಡಿದವು. ಕಳೆದ ಏಳು ತಿಂಗಳಲ್ಲಿ ಎಲ್ಲಿಯೂ ಸೀಟು ಹಂಚಿಕೆ ನಡೆದಿಲ್ಲ. ಆದ್ದರಿಂದ ಇದು ತುಂಬಾ ತಡವಾಗಿದೆ, ಅಲ್ಲವೇ?

ಯೆಚೂರಿ: ಮಾತುಕತೆಗಳು ನಡೆಯುತ್ತಿವೆ. ಕ್ಷೇತ್ರಗಳ ಹಂಚಿಕೆಗಳನ್ನು ರಾಜ್ಯ ಮಟ್ಟದಲ್ಲಿ ಅಂತಿಮಗೊಳಿಸಲಾಗುತ್ತದೆ. ಮಹಾರಾಷ್ಟ್ರದಲ್ಲಿ, ಮಹಾ ವಿಕಾಸ್ ಅಘಾಡಿ ಇದೆ. ಬಿಹಾರದಲ್ಲಿ ಮಹಾಘಟ ಬಂಧನ್ ಇದೆ. ತಮಿಳುನಾಡಿನಲ್ಲಿ ಡಿಎಂಕೆ ನೇತೃತ್ವದಲ್ಲಿ ಜಾತ್ಯತೀತ ಮೈತ್ರಿ ಇದೆ. ಹೀಗೆ ಪ್ರತಿಯೊಂದು ರಾಜ್ಯದಲ್ಲೂ ಮಾತುಕತೆ ನಡೆಯುತ್ತಿದೆ. ಈ ತಿಂಗಳ ಅಂತ್ಯದ ವೇಳೆಗೆ, ಪರಿಸ್ಥಿತಿಗಳಲ್ಲಿ ಹೆಚ್ಚು ಸ್ಪಷ್ಟವಾದ ಸುಧಾರಣೆ ಕಂಡುಬರುತ್ತದೆ ಎಂದು ಭಾವಿಸುತ್ತೇವೆ.

ಪ್ರಶ್ನೆ: ಇಂಡಿಯಾ ಒಕ್ಕೂಟದ ಪರವಾಗಿ ಅದರ ಎಲ್ಲಾ ಪಕ್ಷಗಳು ಯಾವುದೇ ರ್‍ಯಾಲಿ ಅಥವಾ ಸಾರ್ವಜನಿಕ ಸಭೆ ನಡೆಸಿಲ್ಲ. ಇದು ತುಂಬಾ ತಡವಾಗಿದೆ, ಅಲ್ಲವೇ?

ಯೆಚೂರಿ: ಇಂಡಿಯಾ ಒಕ್ಕೂಟದ ಮೊದಲ ಸಭೆಯಿಂದಲೂ ನಾವು ನಿರಂತರವಾಗಿ ಸಭೆಗಳನ್ನು ನಡೆಸಬೇಕು ಮತ್ತು ರಾಜ್ಯ ಮಟ್ಟದಲ್ಲಿ ಚರ್ಚೆಗಳನ್ನು ಪ್ರಾರಂಭಿಸಬೇಕು ಎಂದು ಹೇಳುತ್ತಲೇ ಬಂದಿದ್ದೇವೆ. ಇವು ಆಗಲಿಲ್ಲ. ಆದಾಗ್ಯೂ, ಫೆಬ್ರವರಿ ಅಂತ್ಯದ ವೇಳೆಗೆ ಪ್ರಕ್ರಿಯೆಯು ಪ್ರಾರಂಭವಾಗಲಿದೆ ಎಂದು ನಾನು ಭಾವಿಸುತ್ತೇನೆ.

ಪ್ರಶ್ನೆ: ರಾಮಮಂದಿರದ ಉದ್ಘಾಟನೆಯ ನಂತರದ ಸಂಭ್ರಮವು ಚುನಾವಣಾ ಪ್ರಚಾರದ ಸಮಯದಲ್ಲಿ ವಿರೋಧ ಪಕ್ಷಗಳಿಗೆ ಅನಾನುಕೂಲವನ್ನುಂಟು ಮಾಡುತ್ತದೆ ಎಂದು ನೀವು ನಂಬುತ್ತೀರಾ?

ಯೆಚೂರಿ: ಇದು ನಿರೀಕ್ಷಿತವಾದುದೆ. ಹೀಗಾಗಿ ಅವರು ಚುನಾವಣಾ ಲಾಭಕ್ಕಾಗಿ ರಾಮಮಂದಿರದ ತೆರೆಯುವಿಕೆಯನ್ನು ದೊಡ್ಡ ರೀತಿಯಲ್ಲಿ ಬಳಸಿಕೊಳ್ಳಲು ಬಯಸುತ್ತಾರೆ. ಇದು ಕೇವಲ ನಮ್ಮ ಅಭಿಪ್ರಾಯವಲ್ಲ. ದೇಶದಲ್ಲಿ ಶಂಕರಾಚಾರ್ಯರು ಕೂಡ ನಿರ್ಮಾಣ ಕಾರ್ಯ ಅರ್ಧದಷ್ಟಿರುವಾಗಲೇ ದೇವಸ್ಥಾನವನ್ನು ತರಾತುರಿಯಲ್ಲಿ ಏಕೆ ತೆರೆದದ್ದು ಎಂದು ಪ್ರಶ್ನಿಸಿದ್ದಾರೆ.

ಜೀವನೋಪಾಯದ ಸಮಸ್ಯೆಗಳು ಮುಖ್ಯ

ಪ್ರಶ್ನೆ: ಇದನ್ನು ಹೇಗೆ ಎದುರಿಸಲಿದ್ದೀರಿ?

ಯೆಚೂರಿ: ಇದುವೇ ಅವರ ಹಿಂದುತ್ವದ ಸಮೀಕರಣ. ಇದನ್ನು ನಾವು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ನೋಡಿದ್ದೇವೆ. ಇದನ್ನು ಹೇಗೆ ಎದುರಿಸಬೇಕೆಂದು ಇಂಡಿಯಾ ಮಿತ್ರ ಪಕ್ಷಗಳು ಬಹಳ ಸ್ಪಷ್ಟವಾಗಿವೆ. ಈ ನಿಟ್ಟಿನಲ್ಲಿ ಪಕ್ಷಗಳ ನಡುವೆ ಸಾಮಾನ್ಯ ತಿಳುವಳಿಕೆ ಇದೆ.

ಇಂಡಿಯಾ ಒಕ್ಕೂಟದಲ್ಲಿನ ಪಕ್ಷಗಳು ಜಾತ್ಯತೀತತೆಯ ತತ್ವವನ್ನು ಕಟ್ಟುನಿಟ್ಟಾಗಿ ಪಾಲಿಸಲು ನಿರ್ಧರಿಸಿವೆ ಮತ್ತು ಸರ್ಕಾರ ಹಾಗೂ ಸರ್ಕಾರಿ ಕಾರ್ಯಗಳೊಂದಿಗೆ ಧರ್ಮವನ್ನು ಬೆರೆಸಬಾರದು. ಇದರೊಂದಿಗೆ ಜನರು ದಿನನಿತ್ಯ ಎದುರಿಸುತ್ತಿರುವ ಜೀವನೋಪಾಯದ ಸಮಸ್ಯೆಗಳೂ ಬಹಳ ಮುಖ್ಯ.

ರಾಮಮಂದಿರವು ಜನರಲ್ಲಿ ಧಾರ್ಮಿಕ ಆಂದೋಲನದ ಸ್ಥಿತಿಯನ್ನು ಉಂಟುಮಾಡಬಹುದು. ಆದರೆ, ಪ್ರತಿಯೊಬ್ಬರಿಗೂ ತಮ್ಮ ಇಷ್ಟದ ಧರ್ಮ ಮತ್ತು ದೇವರನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕಿದೆ. ಆದರೆ ಈಗ ಅವರ ಜೀವನ ಸ್ಥಿತಿ ಹೇಗಿದೆ ಎಂಬುದೇ ನಮ್ಮ ಮುಂದಿರುವ ಪ್ರಶ್ನೆ. ಕಳೆದ ಅರ್ಧ ಶತಮಾನದಲ್ಲಿ, ನಿರುದ್ಯೋಗವು ಉತ್ತುಂಗಕ್ಕೇರಿದೆ. ಬೆಲೆಗಳು ಅನಿಯಂತ್ರಿತವಾಗಿ ಏರುತ್ತಿವೆ. ಬದುಕಲು ದಾರಿಯಿಲ್ಲದೆ ಜನ ವಲಸೆ ಹೋಗುತ್ತಿದ್ದಾರೆ. ನಂತರವೂ ಕೆಲಸ ಸಿಗದೆ ತಮ್ಮ ಊರುಗಳಿಗೆ ಮರಳುತ್ತಾರೆ. ಇದು ಒಂದು ಅಪಾಯಕಾರಿ ಸೂಚನೆ. ವಾಸ್ತವ ಹೀಗಿರುವಾಗ ಗ್ರಾಮೀಣ ಜನರ ಜೀವನಾಡಿಯಾಗಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆಗೆ ಸರ್ಕಾರ ಸ್ವಲ್ಪ ಸ್ವಲ್ಪವೇ ಕಡಿವಾಣ ಹಾಕುತ್ತಿದೆ.

ಹಿಂದುತ್ವ ಸಮೀಕರಣದ ಪರ ಮತ್ತು ವಿರುದ್ಧ ಸ್ಪರ್ಧೆ

ಪ್ರಶ್ನೆ: ನೀವು ಹೇಳಿದ್ದು ಸರಿಯೇ ಆಗಿದ್ದರೆ, ಮೂರು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹೇಗೆ ಗೆದ್ದಿತು?

ಯೆಚೂರಿ: ಚುನಾವಣೆ ನಡೆದ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಢದಲ್ಲಿ ಕಾಂಗ್ರೆಸ್ ಪಕ್ಷ ಹಿಂದಿನ ಚುನಾವಣೆಯಲ್ಲಿ ಪಡೆದ ಮತಗಳನ್ನು ಉಳಿಸಿಕೊಂಡಿದೆ. ಬಿಜೆಪಿಯ ಹೆಚ್ಚುವರಿ ಮತಗಳಿಗೆ ಹಿಂದುತ್ವ ಸಮೀಕರಣವೇ ಕಾರಣ. ಇದೇ ವೇಳೆ ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ಬಿಜೆಪಿ ಸೋತಿದೆ. ಆದುದರಿಂದ, ಈಗಿರುವಂತೆ, ದೇಶದಲ್ಲಿ ಮತದಾರರು ಒಂದೇ ಹಾದಿ ಹಿಡಿಯಲ್ಲಿಲ್ಲ. ವಾಸ್ತವವೆಂದರೆ ಹಿಂದುತ್ವ ಸಮೀಕರಣ ಕಾರ್ಯ ಮತ್ತು ಅದರ ವಿರುದ್ಧದ ನಡುವೆ ಪೈಪೋಟಿ ಇದೆ.

ಕೃಪೆ: ದಿ ಹಿಂದೂ ಡೈಲಿ, 26.1.2024

ಹೊರಹೊಮ್ಮುತ್ತಿವೆ. ಈ ಪ್ರವೃತ್ತಿಗಳನ್ನು ಎದುರಿಸಲು, ಪ್ರತಿ ದೇಶದಲ್ಲಿ ಕಾರ್ಮಿಕ–ರೈತ ಮೈತ್ರಿಗಳನ್ನು ರೂಪಿಸುವ ಮತ್ತು ಬಲಪಡಿಸುವ ಪ್ರಾಮುಖ್ಯತೆಯು ಗಮನಾರ್ಹವಾಗಿ ಹೆಚ್ಚಾಗಿದೆ. ಏಕೆಂದರೆ ಕಾರ್ಮಿಕ ವರ್ಗ ಮತ್ತು ರೈತರು ಇಂದು ಊಳಿಗಮಾನ್ಯ ಪದ್ಧತಿ, ಅದರ ಅವಶೇಷಗಳು ಮತ್ತು ಅದಕ್ಕೆ ಸಂಬಂಧಿಸಿದ ಅನಿಷ್ಟಗಳಾದ ನವ ಉದಾರವಾದದ ದೊಡ್ಡ ದಾಳಿಯನ್ನು ಎದುರಿಸುತ್ತಿದ್ದಾರೆ. ಈ ಎರಡು ಶೋಷಿತ ಉತ್ಪಾದನಾ ಶಕ್ತಿಗಳ ನಡುವೆ ಬಲವಾದ ಮೈತ್ರಿಯನ್ನು ರೂಪಿಸುವ ಮೂಲಕ ಮಾತ್ರ ಇದನ್ನು ಸೋಲಿಸಬಹುದು.

ಪ್ರಭಾತ್ ಪಟ್ನಾಯಕ್ ಬರೆದಂತೆ, "ಬಹುತೇಕ ತೃತೀಯ ಜಗತ್ತಿನ ದೇಶಗಳಲ್ಲಿ ಕ್ರಾಂತಿಯ ನಿರೀಕ್ಷೆಗಳು ಕಾರ್ಮಿಕ–ರೈತ ಮೈತ್ರಿಯ ಯಶಸ್ವಿ ನಿರ್ಮಾಣದ ಮೇಲೆ ಅವಲಂಬಿತವಾಗಿದೆ. ಅಂತಹ ಮೈತ್ರಿ ಇಲ್ಲದೆ ಬಂಡವಾಳಶಾಹಿಯನ್ನು ಸೋಲಿಸಲು ಸಾಧ್ಯವಿಲ್ಲ. ಅಕ್ಟೋಬರ್ ಕ್ರಾಂತಿ ಕೂಡ ಸಾಧ್ಯವಾಗಲಿಲ್ಲ."

ಇಂದು ಊಳಿಗಮಾನ್ಯ ವಿರೋಧಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸುವುದರ ಹೊರತಾಗಿ, ಸಮಕಾಲೀನ ಜಾಗತೀಕರಣವು ಅನೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸೃಷ್ಟಿಸಿರುವ ತೀವ್ರವಾದ ಕೃಷಿ ಬಿಕ್ಕಟ್ಟು, ಸಣ್ಣ ಉತ್ಪಾದನಾ ವಲಯದಲ್ಲಿನ ಬಿಕ್ಕಟ್ಟು ಇವುಗಳನ್ನು ನಿವಾರಿಸಲು ಕೂಡ ಇಂತಹ ಕಾರ್ಮಿಕ–ರೈತ ಮೈತ್ರಿ ಅತ್ಯಗತ್ಯ. ವಸಾಹತುಶಾಹಿ–ವಿರೋಧಿ ಹೋರಾಟದ ಭರವಸೆಗಳಿಗೆ ಅನುಗುಣವಾಗಿ, ವಸಾಹತುಶಾಹಿ ನಂತರದ ಸರ್ಕಾರಗಳು ಒದಗಿಸಿದ ಸಣ್ಣ–ಪ್ರಮಾಣದ ಉತ್ಪಾದನಾ ವಲಯಕ್ಕೆ ರಾಜ್ಯ ಬೆಂಬಲದ ವಿವಿಧ ಹಂತಗಳನ್ನು ಜಾಗತೀಕರಣವು ನಾಶಗೊಳಿಸಿದೆ. ಜಗತ್ತಿನೆಲ್ಲೆಡೆ ಸಾಗುತ್ತಿರುವ ದೊಡ್ಡ ಮಟ್ಟದ ಹೂಡಿಕೆ ಹಾಗೂ ವಿಶ್ವ ಮಾರುಕಟ್ಟೆಯಲ್ಲಿನ ಬೆಲೆ ಏರಿಳಿತಕ್ಕೆ ಈ ಕ್ಷೇತ್ರ ಬಲಿಯಾಗಿದೆ.

"ಈ ಆರ್ಥಿಕತೆಗಳಲ್ಲಿ, ಹೂಡಿಕೆ ಕ್ಷೇತ್ರಗಳಲ್ಲಿ ಕಾರ್ಮಿಕರ ಬೇಡಿಕೆ ತೀವ್ರವಾಗಿ ಕುಸಿದಿದೆ. ಸಹಜವಾಗಿ ಬೆಳೆಯುತ್ತಿದ್ದ ಕಾರ್ಮಿಕ ಬಲಕ್ಕಿಂತ ಇದು ಕಡಿಮೆ ಇದೆ. ಇದಲ್ಲದೆ, ಬಂಡವಾಳಶಾಹಿಗಳು ಸಣ್ಣ ಪ್ರಮಾಣದ ಉತ್ಪಾದನಾ ವಲಯವನ್ನು ಆಕ್ರಮಿಸಿದಾಗ, ಕಾರ್ಮಿಕರ ಬದುಕು ನಾಶವಾಯಿತು. ಉದಾಹರಣೆಗೆ, ಕಳೆದ ಮೂರು ದಶಕಗಳಲ್ಲಿ ಭಾರತದಲ್ಲಿ ನಾಲ್ಕು ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಾರ್ಮಿಕ–ರೈತ ಸಖ್ಯತೆಗೆ ಶ್ರಮಿಸಿ

2000 ರಲ್ಲಿ ನವೀಕರಿಸಿದ CPI(M) ಕಾರ್ಯಕ್ರಮ 7.6 ಪ್ಯಾರಾದಲ್ಲಿ, "ಜನತಾ ಪ್ರಜಾಸತ್ತಾತ್ಮಕ ರಂಗದ ತಿರುಳು ಹಾಗೂ ತಳಹದಿಯು ಕಾರ್ಮಿಕ ವರ್ಗ ಮತ್ತು ರೈತಾಪಿ ವಿಭಾಗದ ಧೃಡವಾದ ಸಖ್ಯತೆಯೇ ಆಗಿದೆ. ರಾಷ್ಟ್ರೀಯ ಸ್ವಾತಂತ್ರ್ಯವನ್ನು ರಕ್ಷಿಸಲು, ದೂರಗಾಮಿಯಾದ ಪ್ರಜಾಸತ್ತಾತ್ಮಕ ಪರಿವರ್ತನೆಗಳನ್ನು ಸಾಧಿಸುವಲ್ಲಿ ಈ ಸಖ್ಯತೆಯು ಅತ್ಯಂತ ಪ್ರಾಮುಖ್ಯವಿದೆ. ಎಲ್ಲಾ ವಿಧದಲ್ಲಿಯೂ ಸಾಮಾಜಿಕ ಪ್ರಗತಿಗೆ ಈ ಮೈತ್ರಿ ಒಂದು ಭರವಸೆಯಾಗಿದೆ. ಕ್ರಾಂತಿಯನ್ನು ಮುನ್ನಡೆಸುವಲ್ಲಿ ಇತರ ವರ್ಗಗಳ ಪಾತ್ರವು ನಿರ್ಣಾಯಕವಾಗಿ ಕಾರ್ಮಿಕರ–ರೈತರ ಮೈತ್ರಿಯ ಶಕ್ತಿ ಮತ್ತು ದೃಢತೆಯ ಮೇಲೆ ಅವಲಂಬಿತವಾಗಿರುತ್ತದೆ.

"ಭಾರತದಲ್ಲಿ ಕಾರ್ಮಿಕ–ರೈತ ಮೈತ್ರಿಯು ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಹಿಂದೆ ನಡೆದ ಕಾರ್ಮಿಕ ವರ್ಗ ಮತ್ತು ರೈತರ ಐತಿಹಾಸಿಕ ಹೋರಾಟದಲ್ಲಿ ಹಲವು ಬಾರಿ ಪ್ರಕಟಗೊಂಡಿದೆ. ಇತ್ತೀಚಿನ ವರ್ಷಗಳಲ್ಲಿ, 2018 ರಿಂದ 2023 ರವರೆಗೆ ಸಿಐಟಿಯು, ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಮತ್ತು ಅಖಿಲ ಭಾರತ ಕೃಷಿ ಕಾರ್ಮಿಕರ ಒಕ್ಕೂಟ (ಎಐಎಡಬ್ಲ್ಯುಯು) ಜಂಟಿ ರಾಷ್ಟ್ರವ್ಯಾಪಿ ಅಭಿಯಾನದ ಮೂಲಕ ಈ ದಿಕ್ಕಿನಲ್ಲಿ ಪ್ರಜ್ಞಾಪೂರ್ವಕ ಪ್ರಯತ್ನ ನಡೆದಿದೆ. ಮೂರು ಕೆಟ್ಟ ಕೃಷಿ ಕಾನೂನುಗಳ ವಿರುದ್ಧ ವರ್ಷವಿಡೀ ರಾಷ್ಟ್ರವ್ಯಾಪಿ ಹೋರಾಟದಲ್ಲಿ ಈ ಮೈತ್ರಿ ಒಂದು ದೊಡ್ಡ ಸಾಧನೆಯಾಗಿದೆ. ಹೋರಾಟದ ನೇತೃತ್ವ ವಹಿಸಿದ್ದ ಸಂಯುಕ್ತ ಕಿಸಾನ್ ಮೋರ್ಚಾ (SKM), ಕೇಂದ್ರ ಕಾರ್ಮಿಕ ಸಂಘಗಳ (CTU) ನೇತೃತ್ವದಲ್ಲಿ ಕಾರ್ಮಿಕ ವರ್ಗದಿಂದ ಅಪಾರ ಬೆಂಬಲವನ್ನು ಪಡೆಯಿತು. ಅಂತೆಯೇ, CTU ನೇತೃತ್ವದ ರಾಷ್ಟ್ರವ್ಯಾಪಿ ಮುಷ್ಕರಗಳಿಗೆ SKM ತನ್ನ ಸಂಪೂರ್ಣ ಬೆಂಬಲವನ್ನು ನೀಡಿತು. ಈ ಎರಡು ಬಣಗಳ ಜಂಟಿ ಹೋರಾಟ 2024ರಲ್ಲೂ ಮುಂದುವರಿಯಲಿದೆ.

ಆದಾಗ್ಯೂ, ಇದು ಕೇವಲ ಒಂದು ಸಣ್ಣ ಆರಂಭವಾಗಿದೆ. ಪ್ರಸ್ತುತ ಅಧಿಕಾರದಲ್ಲಿರುವ ಕಾರ್ಪೊರೇಟ್–ಮತಾಂಧ–ಮನುವಾದ–ನಿರಂಕುಶ ಆರ್‌ಎಸ್‌ಎಸ್–ಬಿಜೆಪಿ ಸರ್ಕಾರವನ್ನು ಸೋಲಿಸಲು ವಿಶಾಲವಾದ, ಆಮೂಲಾಗ್ರ ಆಂದೋಲನ, ರಾಜಕೀಯ, ಸೈದ್ಧಾಂತಿಕ ಮತ್ತು ರಚನಾತ್ಮಕ ಕ್ರಮದ ಅಗತ್ಯವಿದೆ. ಲೆನಿನ್ ಅವರ ಕಾರ್ಮಿಕ–ರೈತ ಮೈತ್ರಿಯ ಕನಸನ್ನು ಕಟ್ಟಲು ಭಾರತದ ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಅಗಾಧ ಪ್ರಯತ್ನಗಳನ್ನು ಮಾಡಬೇಕಾಗಿದೆ. ಅದು ಮಾತ್ರ ಭಾರತದಲ್ಲಿ ನಿಜವಾದ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆಯನ್ನು ತರಬಲ್ಲದು.

ಅನು:ಸಿಚಿ

ಪ್ರಸಾರ ಸೇವಾ ಮಸೂದೆ ವಿರುದ್ಧ ಹೋರಾಟ ಅಗತ್ಯ

ಅಭಿವ್ಯಕ್ತಿ ಸ್ವಾತಂತ್ರ್ಯದ ಕತ್ತು ಹಿಸುಕುವ ಯತ್ನ ಸೋಲಿಸಿ



ನಿಯಂತ್ರಣ ನಿಯಮಗಳನ್ನು ಸುಗಮಗೊಳಿಸುವ ಹಾಗೂ ಸುಧಾರಿಸುವ ಹೆಸರಿನಲ್ಲಿ, ಟಿವಿ ಹಾಗೂ ಇಂಟರ್‌ನೆಟ್ ಸೇರಿದಂತೆ ಎಲ್ಲಾ ಬಗೆಯ ಪ್ರಸಾರಗಳ ಮೇಲೆ ಏಕರೂಪದ ಹಾಗೂ ಕಟ್ಟುನಿಟ್ಟಿನ ಚೌಕಟ್ಟನ್ನು ಹೇರುವುದು ಅದರ ಉದ್ದೇಶವಾಗಿದೆ. ನಿಯಂತ್ರಣ ಹಾಗೂ ದಂಡ ಹೇರಲು ಸರಕಾರಕ್ಕೆ ಏಕಪಕ್ಷೀಯ ಅಧಿಕಾರ ನೀಡುತ್ತದೆ. ವಾಟ್ಸಾಪ್, ಟೆಲಿಗ್ರಾಂ ಮತ್ತು ಸಿಗ್ನಲ್ ಮೆಸೇಜಿಂಗ್ ಸರ್ವಿಸಸ್‌ನಂಥ ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಒಳಗೊಳಿಸಲು ಸೆನ್ಸಾರ್‌ಶಿಪ್‌ನ ಗಡಿಗಳನ್ನು ವಿಸ್ತರಿಸುವುದು ಕೂಡ ಇದರ ಗುರಿಯಾಗಿದೆ.

ಪ್ರಕಾಶ್ ಕಾರತ್



ಕೇಂದ್ರ ವಾರ್ತೆ ಮತ್ತು ಪ್ರಸಾರ ಸಚಿವಾಲಯ, ಸಾರ್ವಜನಿಕರ ಹಿಮ್ಮಾಹಿತಿಗಾಗಿ 2023ರ ನವೆಂಬರ್‌ನಲ್ಲಿ ಪ್ರಕಟಿಸಿದ್ದ ಪ್ರಸಾರ ಸೇವಾ (ನಿಯಂತ್ರಣ) ಮಸೂದೆ–2023ರ ಕರಡು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿರ್ಬಂಧಿಸಿ ಅದರ ಕತ್ತು ಹಿಸುಕುವಲ್ಲಿ ಮೋದಿ ಸರ್ಕಾರದ ಇನ್ನೊಂದು ಹೆಜ್ಜೆಯಾಗಿದೆ. ಮೂರು ದಶಕದಷ್ಟು ಹಳೆಯದಾದ 1995ರ ಕೇಬಲ್ ಟೆಲಿವಿಜನ್ ನಿಯಂತ್ರಣ ಕಾನೂನಿನ ಸ್ಥಾನದಲ್ಲಿ ಹೊಸ ಕಾನೂನು ತರುವುದು ಇದರ ಉದ್ದೇಶವಾಗಿದೆ. ಇದಕ್ಕೂ ಮುನ್ನ ಸರ್ಕಾರ 2023ರ ದೂರಸಂಪರ್ಕ ಕಾನೂನು, 2023ರ ಡಿಜಿಟಲ್ ವೈಯಕ್ತಿಕ ಡೇಟಾ ಸಂರಕ್ಷಣಾ ಕಾನೂನು ಮತ್ತು ಅದಕ್ಕೂ ಹಿಂದೆ, 2021ರ ಮಾಹಿತಿ ತಂತ್ರಜ್ಞಾನ (ಮಧ್ಯಂತರ ಮಾರ್ಗಸೂಚಿಗಳು ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮಗಳನ್ನು (ಸಂಕ್ಷಿಪ್ತವಾಗಿ 2021ರ ಐಟಿ ನಿಯಮಗಳು) ರೂಪಿಸಿತ್ತು. ಈ ಪೈಕಿ ಕೊನೆಯ ಕಾನೂನಿಗೆ ಬಾಂಬೆ ಮತ್ತು ಮದ್ರಾಸ್ ಹೈಕೋರ್ಟ್‌ಗಳು ಈಗಾಗಲೇ ತಡೆ ನೀಡಿವೆ. ಸಂವಿಧಾನವನ್ನು ಉಲ್ಲಂಘಿಸುತ್ತದೆ ಎನ್ನುವ ಕಾರಣದ ಮೇಲೆ ತಡೆ ನೀಡಲಾಗಿದೆ. ವಾಸ್ತವವಾಗಿ ಪ್ರಸಾರ ಸೇವಾ ಮಸೂದೆ ಕೂಡ 2021ರ ಐಟಿ ನಿಯಮಗಳನ್ನೇ ಹೋಲುವ ನಿಯಮಗಳನ್ನು ಜಾರಿಗೆ ತರುವ ಉದ್ದೇಶ ಹೊಂದಿದೆ. ಈ ಎಲ್ಲಾ ನಿಯಮಗಳಿಗೆ ಒಂದು ಸಾಮಾನ್ಯವಾದ ಥೀಮ್ ಇದೆ. ವಿಸ್ತಾರವಾಗುತ್ತಿರುವ ಮಾಧ್ಯಮ ಮತ್ತು ಡಿಜಿಟಲ್ ಡೇಟಾ ಮೇಲೆ ಸರಕಾರದ ನಿಯಂತ್ರಣವನ್ನು ಹೆಚ್ಚಿಸುವುದು; ಹಾಗೂ ಅಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ಕೆಲವು ಅಂಶಗಳ ಆಧಾರದಲ್ಲಿ ಪ್ರಸಾರವನ್ನು ನಿಲ್ಲಿಸುವುದು ಅಥವಾ ದಂಡ ವಿಧಿಸುವುದು –ಇದೇ ಆ ಥೀಮ್ ಆಗಿದೆ.

ಸೆನ್ಸಾರ್‌ಶಿಪ್‌ಗೆ ರಹದಾರಿ

ಟೆಲಿವಿಜನ್ ಚಾನಲ್ ಮತ್ತು ಸಿನಿಮಾಗಳಿಂದ ಹಿಡಿದು ಒಟಿಟಿ ವೇದಿಕೆ ವರೆಗೆ, ಹಾಗೂ ಸ್ವತಂತ್ರ ಯೂಟ್ಯೂಬ್ ಚಾನಲ್‌ಗಳ ವರೆಗೆ ಎಲ್ಲಾ ಬಗೆಯ ಮಾಧ್ಯಮದ ಮೇಲೆ ಸರಕಾರಿ ನಿರ್ಬಂಧ–ನಿಯಂತ್ರಣವನ್ನು ವಿಸ್ತರಿಸಲು ಅನುಕೂಲವಾಗುವಂಥ ಸೆನ್ಸಾರ್‌ಶಿಪ್‌ನ ಸನ್ನದಾಗಿದೆ ಈ ಪ್ರಸಾರ ಮಸೂದೆ. ನಿಯಂತ್ರಣ ನಿಯಮಗಳನ್ನು ಸುಗಮಗೊಳಿಸುವ ಹಾಗೂ ಸುಧಾರಿಸುವ ಹೆಸರಿನಲ್ಲಿ, ಟಿವಿ ಹಾಗೂ ಇಂಟರ್‌ನೆಟ್ ಸೇರಿದಂತೆ ಎಲ್ಲಾ ಬಗೆಯ ಪ್ರಸಾರಗಳ ಮೇಲೆ ಏಕರೂಪದ ಹಾಗೂ ಕಟ್ಟುನಿಟ್ಟಿನ ಚೌಕಟ್ಟನ್ನು ಹೇರುವುದು ಅದರ ಉದ್ದೇಶವಾಗಿದೆ. ನಿಯಂತ್ರಣ ಹಾಗೂ ದಂಡ ಹೇರಲು ಸರಕಾರಕ್ಕೆ ಏಕಪಕ್ಷೀಯ ಅಧಿಕಾರ ನೀಡುತ್ತದೆ. ವಾಟ್ಸಾಪ್, ಟೆಲಿಗ್ರಾಂ ಮತ್ತು ಸಿಗ್ನಲ್ ಮೆಸೇಜಿಂಗ್ ಸರ್ವಿಸಸ್‌ನಂಥ ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಒಳಗೊಳಿಸಲು ಸೆನ್ಸಾರ್‌ಶಿಪ್‌ನ ಗಡಿಗಳನ್ನು ವಿಸ್ತರಿಸುವುದು ಕೂಡ ಇದರ ಗುರಿಯಾಗಿದೆ.

ಕರಾಳ ಸ್ವರೂಪ

ಮಸೂದೆಯಲ್ಲಿರುವ ವ್ಯಾಖ್ಯಾನಗಳನ್ನು ನೋಡಿದರೆ ಈ ಮಸೂದೆಯ ಕರಾಳ ಸ್ವರೂಪ ಗೊತ್ತಾಗುತ್ತದೆ. ಉದಾಹರಣೆಗೆ, ಸೆಕ್ಷನ್ 1 (ಡಿಡಿ) 'ಕಾರ್ಯಕ್ರಮಗಳನ್ನು' ಹೀಗೆ ವ್ಯಾಖ್ಯಾನಿಸುತ್ತದೆ. 'ಯಾವುದೇ ದೃಶ್ಯ, ಶ್ರಾವ್ಯ ಅಥವಾ ದೃಶ್ಯ–ಶ್ರಾವ್ಯ ಅಂಶ (ಕಂಟೆಂಟ್), ಸನ್ನೆ, ಸೂಚನೆಗಳು, ಬರಹ, ಚಿತ್ರಗಳನ್ನು ಪ್ರಸಾರ ಜಾಲದ ಮೂಲಕ ಪ್ರಸಾರ ಮಾಡಿದರೆ ಅದನ್ನು ಕಾರ್ಯಕ್ರಮ ಎನ್ನಲಾಗುತ್ತದೆ'. ಯಾವುದೇ ಸುದ್ದಿ ಮತ್ತು ಪ್ರಸಕ್ತ ವಿದ್ಯಮಾನಗಳ ಕಾರ್ಯಕ್ರಮಕ್ಕೆ ಗಮನ ನೀಡಲಾಗುವುದು ಹಾಗೂ ಅವು ಕೂಡ ಸಂಹಿತೆಗೆ ಬದ್ಧವಾಗಿರಬೇಕು. ಸ್ಮಾರ್ಟ್ ಫೋನ್ ಮೂಲಕ ಸಂದೇಶ ಅಥವಾ ಕಾರ್ಟೂನ್ ಕಳಿಸುವವರೂ ಸೇರಿದಂತೆ ಎಲ್ಲಾ ಇಂಟರ್‌ನೆಟ್ ಮತ್ತು ಮಾಧ್ಯಮ ಬಳಕೆದಾರರು ಕೂಡ ಹೊಣೆಗಾರರಾಗಬೇಕಾಗುತ್ತದೆ. ಈ ಮಸೂದೆಯು ಎಲ್ಲಾ ಸ್ವತಂತ್ರ ಯೂಟ್ಯೂಬ್ ಪತ್ರಕರ್ತರು, ಸುದ್ದಿ ವಿಶ್ಲೇಷಕರು ಮತ್ತು ಡಿಜಿಟಲ್ ಸುದ್ದಿ ವೆಬ್‌ಸೈಟ್‌ಗಳ ವಿರುದ್ಧ ಒಂದು ಆಯುಧವಾಗಲಿದೆ. ಸೈಟ್ ಮತ್ತು ಯೂಟ್ಯೂಬ್‌ಗಳ ಚಂದಾದಾರರ ಮೇಲೆ ಕೂಡ ಕಣ್ಣಿಡಲಾಗುತ್ತದೆ. ಸಾಮಾಜಿಕ ಮಾಧ್ಯಮಗಳ ಕುರಿತ ವ್ಯಾಖ್ಯಾನ ಕೂಡ ಐಟಿ ನಿಯಮಗಳಲ್ಲಿ ಇರುವಂತೆಯೇ ಇದೆ. ಎಲ್ಲಾ ಪ್ರಸಾರಕರು (ಬ್ರಾಡ್‌ಕಾಸ್ಟರ್‌ಗಳು) ತಮ್ಮ ಚಂದಾದಾರರ ಮಾಹಿತಿಯನ್ನು ಕಾಲಕಾಲಕ್ಕೆ ಸರಕಾರಕ್ಕೆ ಸಲ್ಲಿಸಬೇಕು. ಹೀಗಾಗಿ ವೈಯಕ್ತಿಕ ಗೋಪ್ಯತೆಯನ್ನು (ಪ್ರೈವೆಸಿ) ಗಾಳಿಗೆ ತೂರಿದಂತಾಗಿದೆ. ಕಂಟೆಂಟ್‌ಗಳು ಕಂಟೆಂಟ್ ಮೌಲ್ಯಮಾಪನ ಸಮಿತಿಯಿಂದ (ಸಿಇಸಿ) 'ಪೂರ್ವ–ಪ್ರಮಾಣೀಕೃತವಾಗಿರಬೇಕು' ಎಂದು ಮಸೂದೆ ಹೇಳಿದೆ. ಸಮಿತಿ ಸದಸ್ಯರ ಸಂಖ್ಯೆ ಮತ್ತು ಕೋರಂ ಇತ್ಯಾದಿಗಳನ್ನು ಸರಕಾರ ನಿಗದಿಪಡಿಸುತ್ತದೆ.

ಕಾನೂನನ್ನು ಉಲ್ಲಂಘಿಸಲಾಗಿದೆ ಎಂದು 'ಯಾವುದೇ ಅಧಿಕೃತ ಅಧಿಕಾರಿ' ನಂಬಿದರೆ ಉಪಕರಣಗಳನ್ನು ವಶಪಡಿಸಿಕೊಳ್ಳಬಹುದಾಗಿದೆ. ಅದೇ ರೀತಿ ಭಾರತದ ಸಾರ್ವಭೌಮತ್ವ, ಸಮಗ್ರತೆ ಅಥವಾ ಸುರಕ್ಷತೆ, ಇತರ ದೇಶಗಳೊಂದಿಗೆ ಸ್ನೇಹಯುತ ಸಂಬಂಧಗಳು, ಸಾರ್ವಜನಿಕ ಸುವ್ಯವಸ್ಥೆ, ಸಭ್ಯತೆ ಮತ್ತು ನೈತಿಕತೆಯ ರಕ್ಷಣೆಗಾಗಿ ಅಧಿಕೃತ ಅಧಿಕಾರಿಯು ಯಾವುದೇ ಕಾರ್ಯಕ್ರಮದ ಪ್ರಸಾರವನ್ನು ನಿಷೇಧಿಸಬಹುದಾಗಿದೆ. ಇಂಥ ಅಸ್ಪಷ್ಟ ಹಾಗೂ ಖುಲ್ಲಂಖುಲ್ಲಾ ಅಧಿಕಾರವು ಸರಕಾರದ ಲಂಗುಲಗಾಮಿಲ್ಲದ ಸೆನ್ಸಾರ್‌ಶಿಪ್‌ಗೆ ಒಂದು ಆಹ್ವಾನವಾಗಿದೆ. ಅವೆಲ್ಲಕ್ಕಿಂತ ಮೇಲಾಗಿ, ಕಾರ್ಯಕ್ರಮ ಸಂಹಿತೆ ಮತ್ತು ಜಾಹಿರಾತು ಸಂಹಿತೆ ಉಲ್ಲಂಘನೆ ಕುರಿತ ದೂರುಗಳನ್ನು ಪರಿಶೀಲಿಸಲು ಹಾಗೂ ಕೇಂದ್ರ ಸರಕಾರಕ್ಕೆ ಸಲಹೆ ನೀಡಲು ಪ್ರಸಾರ ಸಲಹಾ ಮಂಡಳಿಯೊಂದನ್ನು (ಬಿಎಸಿ) ರಚಿಸಲೂ ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಲ್ಲಿ ಕೂಡ ಸರಕಾರ ನೇಮಿಸಿದವರೇ ಇರುತ್ತಾರೆ. ಈ ಉನ್ನತ ಸಮಿತಿಯು ಯಾವುದೇ ಸ್ವತಂತ್ರ ಪರಿಶೀಲನೆ ನಡೆಸುತ್ತದೆ ಅಥವಾ ತೀರ್ಪು ನೀಡುತ್ತದೆ ಎನ್ನುವುದು ಅನುಮಾನಸ್ಪದವಾಗಿದೆ. ಎರಡೂ ಸಂಹಿತೆಗಳಿಗೆ ಅನುಗುಣವಾಗಿಲ್ಲದ ಯಾವುದೇ ಕಾರ್ಯಕ್ರಮವನ್ನು ಕೇಂದ್ರ ಸರಕಾರ ನಿಯಂತ್ರಿಸಬಹುದು ಅಥವಾ ಪ್ರಸಾರವನ್ನು ನಿಷೇಧಿಸಬಹುದು ಎಂದು ಮಸೂದೆ ಹೇಳುತ್ತದೆ. ಸದ್ಯಕ್ಕೆ ಈ ಸಂಹಿತೆಗಳ ವಿವರಗಳು ಸ್ಪಷ್ಟವಾಗಿಲ್ಲ.

ಕಾರ್ಪೊರೇಟ್ ಹಿಡಿತಕ್ಕೆ ಮೌನ


ಕಂಟೆಂಟ್‌ಗಳನ್ನು ನಿಯಂತ್ರಿಸಲು ಬೇಕಾದಷ್ಟು ನಿಯಮಗಳನ್ನು ಹೇರಿರುವ ಮಸೂದೆ, ಮಾಧ್ಯಮದ ಮಾಲಿಕತ್ವವು ಕಾರ್ಪೊರೇಟ್ ಹಿಡಿತದಲ್ಲಿ ಕೇಂದ್ರೀಕೃತವಾಗಿರುವ ಬಗ್ಗೆ ದಿವ್ಯ ಮೌನ ವಹಿಸಿರುವುದು ಅಚ್ಚರಿಯ ವಿಷಯವೇನೂ ಅಲ್ಲ. ಕಾರ್ಪೊರೇಟ್ ಹಿಡಿತವು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮತ್ತು ವಿಭಿನ್ನ ಅಭಿಪ್ರಾಯಗಳಿಗೆ ಅತ್ಯಂತ ದೊಡ್ಡ ಅಪಾಯವಾಗಿದೆ.

ಅಭಿಪ್ರಾಯಗಳ ನಿರ್ಲಕ್ಷ್ಯ

ಇತರ ಹಲವು ಕಾನೂನುಗಳ ವಿಚಾರದಲ್ಲಿ ಆದಂತೆ, ಈ ಕರಡು ಮಸೂದೆ ಬಗ್ಗೆ ತಜ್ಞರು, ಸಂಬಂಧಿತ ಪಾಲುದಾರರು ಮತ್ತು ಸಾರ್ವಜನಿಕರು ಕಳಿಸುವ ಸಲಹೆ–ಅಭಿಪ್ರಾಯಗಳನ್ನು ಕೂಡ ಸರಕಾರ ನಿರ್ಲಕ್ಷಿಸುವ ಅಪಾಯವಿದೆ. ಮತ್ತು ಅದು ಕಾನೂನಾಗಿ ಬರುವಂತೆ ಮಾಡುವ ಅಪಾಯವಿದೆ. ಈ ಮಸೂದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡುವ ಸಾಧ್ಯತೆಯಿದ್ದು ಮಸೂದೆಯನ್ನು ನಿರ್ಬಂಧಿಸುವ ಅಥವಾ ರದ್ದುಪಡಿಸುವ ಸಂಭವವೂ ಇದೆ. ಮೋದಿ ಸರಕಾರವು ತಜ್ಞರು ಮತ್ತು ಸಾಮಾನ್ಯ ಗ್ರಾಹಕರ ಅಭಿಪ್ರಾಯಗಳನ್ನು ಗೌರವಿಸಲಿದೆ ಹಾಗೂ ಸಾಂವಿಧಾನಿಕ ತತ್ವಗಳಿಗೆ ಬದ್ಧವಾಗಿ ಮಸೂದೆಯನ್ನು ವಾಪಸ್ ಪಡೆಯಲಿದೆ ಎಂದು ನಿರೀಕ್ಷಿಸಬಹುದು. ವೈವಿಧ್ಯಮಯ ಅಭಿಪ್ರಾಯಗಳು ಹಾಗೂ ಭಿನ್ನ ಚಿಂತನೆ ಪ್ರಜಾಪ್ರಭುತ್ವಕ್ಕೆ ಅಗತ್ಯ ಎಂಬುದನ್ನು ಒಪ್ಪಿಕೊಳ್ಳಬೇಕು. ಆದರೆ, ಭಿನ್ನಾಭಿಪ್ರಾಯದ ದನಿಗಳು ಮತ್ತು ವೈವಿಧ್ಯಮಯ ಅಭಿಪ್ರಾಯಗಳು, ವಿಶೇಷವಾಗಿ ಲೋಕಸಭೆ ಚುನಾವಣೆ ಸಮೀಪದಲ್ಲಿರುವ ಈ ಸಮಯದಲ್ಲಿ, ತನ್ನ ರಾಜಕೀಯ ಹಿಡಿತವನ್ನು ಸಡಿಲಗೊಳಿಸಬಹುದೆಂಬುದು ಬಿಜೆಪಿ ಮತ್ತು ಮೋದಿ ನೇತೃತ್ವದ ಅದರ ಸರಕಾರದ ಚಿಂತೆಯಾಗಿದೆ. ಆ ಕಾರಣದಿಂದಲೇ ಅದು ಪ್ರಸಾರ ಸೇವಾ ಮಸೂದೆಯಂಥ ಕಾನೂನುಗಳನ್ನು ತರಲು ಹೊರಟಿದೆ. ಈಗಾಗಲೇ ಇರುವಂಥ ಕಾನೂನುಗಳನ್ನು ಕೂಡ ಬಳಸಿಕೊಂಡು ಸರಕಾರ ಸ್ವತಂತ್ರ ಮಾಧ್ಯಮ ಸಂಸ್ಥೆ ಮತ್ತು ಕಂಟೆಂಟ್ ರಚಿಸುವವರಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿದೆ. ಪತ್ರಕರ್ತರನ್ನು ಜೈಲಿಗಟ್ಟಿದೆ, ಸುಳ್ಳು ಕೇಸ್‌ಗಳನ್ನು ದಾಖಲಿಸಿದೆ ಮತ್ತು ಸರಕಾರದ ನೀತಿಗಳನ್ನು ಪ್ರಶ್ನಿಸುವ ಕಂಟೆಂಟ್‌ಗಳ ಪ್ರಸಾರವನ್ನು ತಡೆಯುತ್ತಿದೆ. ಆಳುವ ಪಕ್ಷ ಮತ್ತು ಸಂಘ ಪರಿವಾರದ ಸಹ ಸಂಸ್ಥೆಗಳನ್ನು ಬೀದಿ ಹೋರಾಟಗಾರರಂತೆ ಅಥವಾ ಸತ್ವವನ್ನು ನುಡಿಯುವವರ ವಿರುದ್ಧದ ಎನ್ನಲಾಗುವ ತಥಾಕಥಿತ ಪ್ರತಿಭಟನೆಗಳನ್ನು ಪ್ರಚಾರ ಮಾಡಲು ಟ್ರೋಲ್ ಮಾಡುತ್ತಿವೆ. ಈ ಎಲ್ಲಾ ಕುತಂತ್ರಗಳ ಹಿನ್ನೆಲೆಯಲ್ಲಿ ನೋಡಿದರೆ, ಪ್ರಸಾರ ಮಸೂದೆಯು ಪ್ರತಿಭಟನೆ ಮತ್ತು ಭಿನ್ನಮತವನ್ನು ಅಡಗಿಸಲು ಒಂದು ಒರಟು ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಬೇಕಾದರೆ ಎಲ್ಲಾ ಜನತಾಂತ್ರಿಕ ಶಕ್ತಿಗಳು ಇದರ ವಿರುದ್ಧ ಹೋರಾಡಬೇಕು.

ಅನು: ವಿಶ್ವ

‘1980ರ ದಶಕದಲ್ಲಿ ‘ರಾಮಜನ್ಮಭೂಮಿ’ ಚಳುವಳಿ ಬೆಳೆದು ಬರುವ ಮುನ್ನ, ರಾಮನ ಜನ್ಮಕ್ಕೆ ಸಂಬಂಧಪಟ್ಟ ‘ಜನ್ಮಸ್ಥಾನ’ ಮಂದಿರ ಅಯೋಧ್ಯೆಯಲ್ಲಿ ಇತ್ತು, ಭಕ್ತಾದಿಗಳು ಅದರ ದರ್ಶನಕ್ಕೆ ಬರುತ್ತಿದ್ದರು ಎಂದು ಹಲವರಿಗೆ ತಿಳಿದಿರಲಿಕ್ಕಿಲ್ಲ, ಅದನ್ನೀಗ, ಅಂದರೆ ಮೂರು ವರ್ಷಗಳ ಹಿಂದೆ ‘ರಾಮಭಕ್ತ’ರೇ ‘ಭವ್ಯ ರಾಮಮಂದಿರ’ ನಿರ್ಮಾಣಕ್ಕಾಗಿ ಕೆಡವಿಹಾಕಿದ್ದಾರೆ ಎಂಬುದೂ ಹಲವರಿಗೆ ತಿಳಿದಿರಲಿಕ್ಕಿಲ್ಲ. ಅಷ್ಟೇ ಅಲ್ಲ, ಬಾಬ್ರಿ ಮಸೀದಿ ಧ್ವಂಸ ಮಾಡಿದ ‘ಕರಸೇವಕರೇ’ ಭಕ್ತಾದಿಗಳು ದರ್ಶನಕ್ಕಾಗಿ ಬರುತ್ತಿದ್ದ ರಾಮ್ ಚಬುತ್ರ/ ಸೀತಾ ರಸೋಇಯಿಯನ್ನೂ ಕೆಡವಿ ಹಾಕಿದರು ಎಂಬುದನ್ನೂ ಸಾಮಾನ್ಯವಾಗಿ ಹೇಳಲಾಗುತ್ತಿಲ್ಲ. ‘ಜನ್ಮಸ್ಥಾನ’, ರಾಮ್ ಚಬುತ್ರ, ಸೀತಾ ರಸೋಇಯಿ ಮತ್ತಿತರ ಸ್ಥಳಗಳ ಧ್ವಂಸದೊಂದಿಗೆ ಸಾಮರಸ್ಯದ ಸಂಸ್ಕೃತಿಯ ಕುರುಹಾಗಿದ್ದ ಅಯೋಧ್ಯೆಯನ್ನು ಈಗ ಕೋಮು ಸಂಘರ್ಷದ ತಾಣವಾಗಿ ಮಾರ್ಪಾಟು ಮಾಡಲಾಗುತ್ತಿದೆ.



ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಈ ಮುಂಚೆ ಮಂದಿರವಿರಲಿಲ್ಲವೇ?

ಟಿ. ಸುರೇಂದ್ರ ರಾವ್

ಅಯೋಧ್ಯಾ ರಾಮ ಈಗ ವಿವಾದಿತ ವ್ಯಕ್ತಿಯಾಗಿ ಭಾರಿ ಚರ್ಚೆಯಲ್ಲಿ ಇದ್ದಾನೆ. ಆದರೆ ಈ ಶ್ರೀರಾಮನಿಗೂ ನಾವು ಚಿಕ್ಕಂದಿನಲ್ಲಿ ಕಾಪಿ ಪುಸ್ತಕದಲ್ಲಿ ತಿದ್ದುತ್ತಿದ್ದ ಶ್ರೀರಾಮನಿಗೂ ಬಹಳ ವ್ಯತ್ಯಾಸವಿದೆ.

ಕಾಪಿ ಪುಸ್ತಕದ ಶ್ರೀರಾಮ ಹೀಗಿದ್ದ:

‘ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಮ್ // ಈಶ್ವರ ಅಲ್ಲಾ ತೇರೋ ನಾಮ್ ಸಬ್ ಕೋ ಸನ್ಮತಿ ದೇ ಭಗವಾನ್’. ಇವನು ಮಹಾತ್ಮಾ ಗಾಂಧಿಯವರ ಭಜನೆಯ ಶ್ರೀರಾಮ. ಇದರ ಉದ್ದೇಶ ‘ದೇವನೊಬ್ಬ ನಾಮ ಹಲವು’ ಎಂದು ಎಲ್ಲಾ ಸಮುದಾಯದ ಜನರನ್ನು ಒಗ್ಗೂಡಿಸುವುದಾಗಿತ್ತು.

ಆದರೆ, ಈಗ ಚರ್ಚೆಯಲ್ಲಿರುವ ಅಯೋಧ್ಯಾ ರಾಮ 1990 ರ ನಂತರ ಹೆಚ್ಚು ಪ್ರಚಾರಕ್ಕೆ ಬಂದವನು. ಅಯೋಧ್ಯಾ ರಾಮನಿಗೊಂದು ತಲೆಯ ಮೇಲೆ ಸೂರು ಕಟ್ಟಿಸಬೇಕೆಂಬ ನೆಪದಲ್ಲಿ ದೇಶಾದ್ಯಂತ ಕೋಮು ಸಾಮರಸ್ಯ ಹಾಳುಗೆಡವಲು ಅವನನ್ನು ದುರ್ಬಳಕೆ ಮಾಡಲಾಯಿತು.

ಹಾಗಾದರೆ ಅಯೋಧ್ಯೆಯಲ್ಲಿ ಈ ಮುಂಚೆ ರಾಮನಿಗೆ ಒಂದು ಸೂರು ಇರಲಿಲ್ಲವೇ? ಎಂಬ ಪ್ರಶ್ನೆ ಹಾಕಿದರೆ ಅದಕ್ಕೆ ಸರಿಯಾದ ಉತ್ತರ ಸಿಗುತ್ತಿರಲಿಲ್ಲ. ಅದರ ಹುಡುಕಾಟದಲ್ಲಿ ಸಿಕ್ಕಿರುವ ಒಂದು ಮಾಹಿತಿ ಎಂದರೆ ಇತ್ತೀಚಿನ ವರೆಗೂ ‘ರಾಮ ಜನ್ಮಸ್ಥಾನ’ವೆಂದೇ ಹೆಸರಾದ 300 ವರ್ಷಗಳಷ್ಟು ಹಳೆಯದಾದ ಮಂದಿರವಿತ್ತು. 1980 ರಲ್ಲಿ ಆರಂಭವಾದ ರಾಮಜನ್ಮಭೂಮಿ ಚಳವಳಿಗೆ ಬಾಬ್ರಿ ಮಸೀದಿ ಮಾತ್ರವಲ್ಲ, ಈ ‘ಜನ್ಮಸ್ಥಾನ’ ಮಂದಿರವೂ ಬಲಿಯಾಗಿದೆ.. ಆಗಸ್ಟ್ 27, 2020 ರಂದು ಶ್ರೀರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟಿನ ‘ನಿರ್ಮಾಣ ಸಮಿತಿ’ಯ ಉಸ್ತುವಾರಿಯಲ್ಲಿ ಸಂಘಪರಿವಾರದ ಪ್ರಸ್ತಾಪಿತ ಹೊಸ ರಾಮ ಮಂದಿರದ ‘ವಿಶಾಲತೆಗೆ ಅವಕಾಶ ಮಾಡಿಕೊಡುವ’ ಉದ್ದೇಶದಿಂದ ಇದನ್ನು ಧ್ವಂಸ ಮಾಡಲಾಯಿತು!

ಇದಕ್ಕಿಂತ ವಿಪರ್ಯಾಸ ಬೇರೆ ಇರಲು ಸಾಧ್ಯವೆ ಎಂದಿದ್ದಾರೆ ಈ ಕುರಿತ ವಿವರಗಳನ್ನು ನೀಡಿರುವ ಫೈಜಾಬಾದ್‌ನ ಹಿಂದಿ ದೈನಿಕ ‘ಜನಮೋರ್ಚಾ’ದ ಹಿರಿಯ ಪತ್ರಕರ್ತ ಸುಮನ್‌ಗುಪ್ತ (ಅವರ ಈ ಲೇಖನದ ಇಂಗ್ಲಿಷ್ ಅನುವಾದ ಈ ಹಿಂದೆ ‘ದಿ ವೈರ್’ನಲ್ಲಿ ಸಪ್ಟಂಬರ್ 6, 1920ರಲ್ಲಿ ಪ್ರಕಟವಾಗಿತ್ತು. ‘ಪ್ರಾಣ ಪ್ರತಿಷ್ಠಾಪನೆ’ಯ ಸಂದರ್ಭದಲ್ಲಿ ಅದನ್ನು ಮರುಪ್ರಕಟಿಸಲಾಗಿದೆ)

ಆ ಮಂದಿರಕ್ಕೆ ಅಗತ್ಯವಾದ ಜಮೀನನ್ನು ಮುಸ್ಲಿಂ ಜಮೀನ್ದಾರರೊಬ್ಬರು 319 ವರ್ಷಗಳ ಹಿಂದೆ ದಾನ ಮಾಡಿದ್ದರು. ಅಯೋಧ್ಯಾ ನಗರವು ಇತ್ತೀಚಿನ ವರೆಗೂ ಸೌಹಾರ್ದ ಪರಂಪರೆಯ ಸಂಕೇತವಾಗಿತ್ತು ಎಂಬುದುಕ್ಕೆ ಇಂತಹ ಹಲವು ಉದಾಹರಣೆಗಳಿವೆ ಎಂದು ಅವರು ಹೇಳುತ್ತಾರೆ. ಅದೀಗ ಸಾಮರಸ್ಯದ ಸಂಕೇತವಾಗಿ ಉಳಿಯದೆ ಕೋಮು ಸಂಘರ್ಷದ ತಾಣವಾಗಿ ಮಾರ್ಪಾಟಾಗಿದೆ ಎಂಬುದು ಬೇರೆ ಮಾತು.

ಆ ರಾಮ ‘ಜನ್ಮಸ್ಥಾನ’ ಮಂದಿರವು ಬಾಬರಿ ಮಸೀದಿಯ ಪಕ್ಕದಲ್ಲಿ ಹಾದುಹೋಗುವ ಹನುಮಾನ್‌ಗಢಿಯಿಂದ ದೋರಾಹಿ ಕುವಾಂ ವರೆಗಿನ ರಸ್ತೆಯ ಇನ್ನೊಂದು ಪಕ್ಕದಲ್ಲಿ ಇತ್ತು. ಆ ಮಂದಿರವನ್ನು ನಿರ್ಮಾಣ ಮಾಡಿದ ಸಮಯದಲ್ಲಿ ಬಾಬರಿ ಮಸೀದಿಯಲ್ಲಿ ರಾಮನ ವಿಗ್ರಹವಿರಲಿಲ್ಲ. ರಾಮನ ವಿಗ್ರಹವನ್ನು 1949 ರ ಡಿಸೆಂಬರ್ 22 ಮತ್ತು 23 ರ ನಡುವಿನ ರಾತ್ರಿ ಬಾಬರಿ ಮಸೀದಿಯಲ್ಲಿ ಇಡಲಾಯಿತು ಎಂಬುದು ಈಗ ಎಲ್ಲರಿಗೂ ತಿಳಿದಿರುವ ಸಂಗತಿ.

ಅಯೋಧ್ಯಾ ಪಟ್ಟಣ ಫೈಜಾಬಾದ್ ಜಿಲ್ಲೆಯಲ್ಲಿದ್ದು, 1870 ರಲ್ಲಿ, ‘ಫೈಜಾಬಾದ್ ಜಿಲ್ಲೆಯ ಫೈಜಾಬಾದ್ ತಹಶೀಲ್‌ನ ಚಾರಿತ್ರಿಕ ನಕ್ಷೆ’ ಎಂಬ ಶೀರ್ಷಿಕೆಯ ವರದಿಯೊಂದನ್ನು ಅವಧದ ಸರ್ಕಾರಿ ಮುದ್ರಣಾಲಯವು ಪ್ರಕಟಿಸಿದೆ. ಆಗಿನ ಆ ಪ್ರದೇಶದ ಬ್ರಿಟಿಷ್ ಆಡಳಿತದ ಪ್ರಭಾರಿ ಕಮಿಷನರ್ ಹಾಗೂ ವಸಾಹತು ಅಧಿಕಾರಿ ಪಿ.ಕಾರ್ನಿಗಿ ಮತ್ತಿತರು ತಯಾರಿಸಿದ ಆ ವರದಿಯಲ್ಲಿ ಆಗ ಅಯೋಧ್ಯೆಯಲ್ಲಿದ್ದ ಮಹತ್ವದ ಧಾರ್ಮಿಕ ಸ್ಥಳಗಳ ಪಟ್ಟಿಮಾಡಲಾಗಿದ್ದು, ಅದರಲ್ಲಿ ಈಗ ಧ್ವಂಸವಾಗಿರುವ ಈ ರಾಮ ‘ಜನ್ಮಸ್ಥಾನ’ವು ಪ್ರಮುಖವಾಗಿದೆ ಎನ್ನುತ್ತಾರೆ ಸುಮನ್ ಗುಪ್ತ.


1867–68 ರಲ್ಲಿ ಬರೆದ ಆ ವರದಿಯ ಪ್ರಕಾರ ಆ ವೇಳೆಗೆ ಆಗ 166 ವರ್ಷಗಳಷ್ಟು ಹಳೆಯದಾದ ಆ ಮಂದಿರವನ್ನು ಮಹಂತ ರಾಮದಾಸ್ ಅವರು ಕಟ್ಟಿಸಿದರು; ಒಂದು ಎಕರೆಯಷ್ಟು ವಿಸ್ತೀರ್ಣದ ಆ ನಿವೇಶನವನ್ನು ಮಿರ್ ಮಾಸುಮ್ ಅಲಿ ಎಂಬ ಜಮೀನ್ದಾರರು ದಾನವಾಗಿ ನೀಡಿದ್ದರು.ಆ ಮಂದಿರದ ಆವರಣದಲ್ಲಿ 22 ಸಾಧುಗಳು ವಾಸಿಸುತ್ತಿದ್ದರು ಎಂದು ಆ ವರದಿ ಹೇಳುತ್ತದೆ.


1984 ರ ವರೆಗೆ, ಈ ರಾಮ‘ಜನ್ಮಸ್ಥಾನ’ ಶ್ರೀರಾಮನ ದರ್ಶನಕ್ಕೆ ಅಯೋಧ್ಯೆಗೆ ಬರುವ ಭಕ್ತರಿಗೆ ಚಾರಿತ್ರಿಕ ಮಹತ್ವದ ಸ್ಥಳವಾಗಿತ್ತು. ಹನುಮಾನ್‌ಗಢಿಯಿಂದ ಆರಂಭವಾಗುತ್ತಿದ್ದ ತಮ್ಮ ದರ್ಶನಗಳ ಹಾದಿಯಲ್ಲಿ ಕನಕ ಭವನ, ದಶರಥ ಮಹಲ್, ರಾಮ್ ಖಜಾನಾ, ರತ್ನಸಿಂಹಾಸನ ಮತ್ತು ರಂಗ ಮಹಲ್‌ಗಳನ್ನು ನೋಡಿಕೊಂಡು ಕೊನೆಯಲ್ಲಿ ಜನ್ಮಸ್ಥಾನ ಮತ್ತು ರಾಮ ಚಬೂತರ್/ ಸೀತಾ ರಸೋಇಯಿ ತಲುಪುತ್ತಿದ್ದರು. ಈ ಎಲ್ಲಾ ದೇವಸ್ಥಾನಗಳು ಅಯೋಧ್ಯಾ ಪಟ್ಟಣದ ಅತ್ಯಂತ ಶ್ರೀಮಂತರ ಪ್ರದೇಶವೆಂದು ಪರಿಗಣಿಸಲ್ಪಟ್ಟ ಕೋಟ್ ರಾಮಚಂದ್ರ ಕ್ಷೇತ್ರದಲ್ಲಿದ್ದವು.

ಹಿಂದುತ್ವ ರಾಜಕೀಯದ ಏರುಗತಿಯೊಂದಿಗೆ ರಾಮಜನ್ಮಸ್ಥಾನ ಮತ್ತಿತರ ಮಂದಿರಗಳ ಅವನತಿ ಆರಂಭವಾಯಿತು ಎನ್ನುತ್ತಾರೆ ಸುಮನ್ ಗುಪ್ತ ತಮ್ಮ ಲೇಖನದಲ್ಲಿ.

1984 ರ ನಂತರ ಹಿಂದುತ್ವ ಕಥನಗಳು ರಾಮಜನ್ಮಸ್ಥಾನದ ಗತಿಯನ್ನೇ ಬದಲಾಯಿಸಿದವು, ಅಯೋಧ್ಯಾ ವಿವಾದ ಚಾಲನೆ ಪಡೆದುಕೊಂಡಿತು. ಈ ಕಾರಣಗಳಿಂದಾಗಿ ಕೋಟ್ ರಾಮಚಂದ್ರ ಪ್ರದೇಶವು ವಿವಾದಗ್ರಸ್ತ ರಾಜಕೀಯ ವಲಯವಾಗಿ ಮಾರ್ಪಾಟಾಯಿತು; ಸುರಕ್ಷಾ ಕಾಳಜಿಗಳು ಹೆಚ್ಚಾಗುತ್ತಲೇ ಸಾಮಾನ್ಯ ಭಕ್ತರಿಗೆ ಈ ‘ಜನ್ಮಸ್ಥಾನ’ ಸೇರಿದಂತೆ ಹಲವು ಹಳೆಯ ಮಂದಿರಗಳ ಭೇಟಿ ದುಸ್ತರವಾಯಿತು.

1984 ರ ಹೊತ್ತಿಗೆ ಮಂದಿರದ ವಸತಿ ಪ್ರದೇಶದ ಕೆಳ ಮಹಡಿಯಲ್ಲಿ ಅಂಚೆ ಕಛೇರಿ ಬಂತು.. 1991 ರ ನಂತರ ಬಾಬರಿ ಮಸೀದಿಯಲ್ಲಿನ ಚಲನವಲನಗಳ





ಪುಟ 10 ಕ್ಕೆ

ಅಯೋಧ್ಯೆಯಲ್ಲಿ ಶ್ರೀರಾಮನಿಗೆ ಈ ಮುಂಚೆ ಮಂದಿರವಿರಲಿಲ್ಲವೇ.......

ಪುಟ 9 ರಿಂದ

ಮೇಲೆ ಕಣ್ಗಾವಲಿಡಲು ಜನ್ಮಸ್ಥಾನದ ಮೇಲುಗಡೆಯ ಭಾಗವನ್ನು ಪೋಲೀಸ್ ನಿಯಂತ್ರಣ ಕೊಠಡಿಯಾಗಿ ಪರಿವರ್ತನೆ ಮಾಡಲಾಯಿತು. ಡಿಸೆಂಬರ್ 6, 1992 ರಂದು ಇದೇ ನಿಯಂತ್ರಣ ಕೊಠಡಿಯಲ್ಲಿ ಉತ್ತರ ಪ್ರದೇಶದ ಹಿರಿಯ ಪೋಲೀಸ್ ಅಧಿಕಾರಿಗಳು ಮತ್ತು ಆಡಳಿತ ಸಿಬ್ಬಂದಿಗಳು ಕರಸೇವಕರು ಬಾಬರಿ ಮಸೀದಿಯನ್ನು ಧ್ವಂಸಮಾಡುವ ಕ್ರಿಯೆಯನ್ನು ನೋಡುತ್ತಾ ಕುಳಿತಿದ್ದರು ಎಂದು ಸುಮನ್ ಗುಪ್ತ ನೆನಪಿಸುತ್ತಾರೆ.

1993ರಲ್ಲಿ ಪಿ.ವಿ.ನರಸಿಂಹ ರಾವ್ ನೇತೃತ್ವದ ಕೇಂದ್ರ ಸರ್ಕಾರವು ಬಾಬರಿ ಮಸೀದಿಯು ಇದ್ದ ಜಾಗದ ಸುತ್ತಮುತ್ತಲ 67.703 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ವರೆಗೂ ಭಕ್ತಾದಿಗಳು ಇಲ್ಲಿಗೆ ದರ್ಶನಕ್ಕಾಗಿ ಬರುತ್ತಿದ್ದರು, ಕೆಲವರು ಅಲ್ಲಿಯೇ ಉಳಿಯುತ್ತಿದ್ದರು ಮತ್ತು ಪೂಜೆಗಳನ್ನು ನೆರವೇರಿಸುತ್ತಿದ್ದರು.

ಆದರೆ, ಕೇಂದ್ರ ಸರ್ಕಾರವು 67 ಎಕರೆಗಳಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದು ಆ ಪ್ರದೇಶದ ಸುತ್ತಮುತ್ತಲಿದ್ದ ಹತ್ತಾರು ಮಂದಿರಗಳಿಗೆ ಸಮಸ್ಯೆಗಳನ್ನು ಸೃಷ್ಟಿಮಾಡಿತು. ಈ ಮಂದಿರಗಳಿಗೆ ಹೋಗಿಬರುವ ದಾರಿಗಳಿಗೆ ಬೇಲಿ ಹಾಕಿದ್ದರಿಂದ ಸಾರ್ವಜನಿಕರ ಕೊಡುಗೆಗಳು ಬತ್ತಿಹೋಗಿ ಆದಾಯದ ಪ್ರಮುಖ ಸಂಪನ್ಮೂಲಗಳೇ ಇಲ್ಲದಂತಾಯಿತು. ಈ ಹಿನ್ನೆಲೆಯಲ್ಲಿ ಆ ಮಂದಿರಗಳಲ್ಲಿ ದಿನನಿತ್ಯದ ಆರತಿ ಹಾಗೂ ಭೋಗ್ ಆಚರಣೆಗಳು ನಡೆಯುವುದು ತೀರ ಕಷ್ಟವಾಗಿ ಆ ಮಂದಿರಗಳ ಅಸ್ತಿತ್ವವೇ ಪ್ರಶ್ನೆಯಾಗಿ ಪರಿಣಮಿಸಿತು. ಜಮೀಂದಾರ ಮಿರ್ ಮಾಸುಮ್ ಅಲಿಯವರು ದಾನವಾಗಿ ನೀಡಿದ್ದ ಜಾಗದಲ್ಲಿನ ರಾಮ ಜನ್ಮಸ್ಥಾನಕ್ಕೆ ಪ್ರವೇಶಿಸುವುದು ಹಾಗೂ ದಿನನಿತ್ಯದ ಆರತಿ ಮತ್ತು ಭೋಗ್ ಆಚರಣೆಗಳ ವೆಚ್ಚಗಳನ್ನು ಭರಿಸುವುದು ಕೂಡ ಕಷ್ಟವಾಯಿತು.

ವಾಸ್ತವ ಸಂಗತಿಯೆಂದರೆ, ಭಕ್ತಾದಿಗಳು ಭೇಟಿ ನೀಡಲು ಉಳಿದ ಒಂದೇ ಒಂದು ಸ್ಥಳವೆಂದರೆ, ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದ ನಂತರ ರಾಮಲಲ್ಲಾ ಮೂರ್ತಿಯನ್ನು ಇಟ್ಟು ತಾತ್ಕಾಲಿಕವಾಗಿ ಸೃಷ್ಟಿ ಮಾಡಿದ್ದ ಮಂದಿರ ಮಾತ್ರ. ಅಲ್ಲಿಗೆ ಹೋಗಲು ನಿರ್ಮಿಸಿದ್ದ ಅಡ್ಡಾದಿಡ್ಡಿಯಾದ ಹಾದಿಯಲ್ಲಿ ಬಂದೂಕುಧಾರಿ ಪೋಲಿಸರನ್ನು ದಾಟಿಕೊಂಡು ಅವರು ಹೋಗಬೇಕಾಗಿತ್ತು.

ಡಿಸೆಂಬರ್ 6, 1992 ರಂದು ಬಾಬರಿ ಮಸೀದಿಯನ್ನು ಕೆಡವಿದ 'ರಾಮ ಭಕ್ತ ಕರಸೇವಕರು' ಆ ಮಸೀದಿಯ ಹೊರ ಅಂಗಣದಲ್ಲಿದ್ದ ರಾಮ ಚಬೂತ್ರ ಮತ್ತು ಸೀತಾ ರಸೋಯಿಯನ್ನು ಕೂಡ ಧ್ವಂಸಗೊಳಿಸಿದ್ದರು ಎಂಬ ಸಂಗತಿಯನ್ನು ಸಾಮಾನ್ಯವಾಗಿ ಹೇಳಲಾಗುತ್ತಿಲ್ಲ.

1898 ರಲ್ಲಿ, ರಾಜಕುಮಾರ ಅಲ್ಬರ್ಟ್ ಎಡ್ವರ್ಡ್‌ನ ಹುಟ್ಟುಹಬ್ಬದ ವರ್ಷಾಚರಣೆಯ ಸಂದರ್ಭದಲ್ಲಿ ಅಯೋಧ್ಯಾದಲ್ಲಿನ ಬಡಾಸ್ಥಾನ್ (ದಶರಥ್ ಮಹಲ್) ಮಹಂತ, ಮನೋಹರ್ ಪ್ರಸಾದ್ ಅವರು ಎಡ್ವರ್ಡ್ ತೀರ್ಥ ರಕ್ಷಿಣಿ ವಿವೇಚಿಣಿ ಸಭಾವನ್ನು ರಚಿಸಿದರು. ಆ ಸಭಾವು ಸಾರ್ವಜನಿಕರಿಂದ ರೂ.1,000 ಹಣವನ್ನು ಸಂಗ್ರಹಿಸಿತು ಮತ್ತು ದೇವಸ್ಥಾನಗಳು ಹಾಗೂ ಕುಂಡಗಳ ಹೆಸರುಗಳನ್ನು ಗುರುತಿಸುವ ಹಾಗೂ ಫಲಕಗಳ ಮೂಲಕ ಅವನ್ನು ಪ್ರದರ್ಶಿಸುವ ಕೆಲಸ ಮಾಡಲು ಮುಂದಾಯಿತು. ಅಂದಿನಿಂದ ಅದು 'ಜನ್ಮಭೂಮಿ' ಎಂದೆನಿಸಿದ್ದರೆ, ಅದಕ್ಕಿಂತಲೂ ಮೊದಲು , ನಂತರವೂ ಮಂದಿರ ಇದ್ದ ಸ್ಥಳ 'ಜನ್ಮಸ್ಥಾನ'ದ ಎಂದೇ ಪ್ರಚಲಿತವಾಗಿತ್ತು.

1885 ರಲ್ಲಿ ಮಹಂತ ರಘುವರ ದಾಸ್ ಅವರು ರಾಮ್ ಚಬೂತ್ರದ ಮೇಲೆ ರಾಮ ಮಂದಿರ ನಿರ್ಮಿಸಲು ಅನುಮತಿಯನ್ನು ಕೋರಿದ್ದರು. ಆ ಅರ್ಜಿಯನ್ನು ಫೈಜಾಬಾದಿನ ಉಪ ನ್ಯಾಯಾಧೀಶರು ವಜಾ ಮಾಡಿದ್ದರು ಮತ್ತು ಆ ನಂತರದ ಮನವಿಯನ್ನು ಕೂಡ ಜಿಲ್ಲಾ ನ್ಯಾಯಾಧೀಶರು ವಜಾ ಮಾಡಿದರು.

ರಾಮ್ ಚಬೂತ್ರ ಹಾಗೂ ಸೀತಾ ರಸೋಯಿ ಎರಡೂ ಪರಸ್ಪರ ಲಂಬಕೋನದಲ್ಲಿ ನಿರ್ಮಿತವಾಗಿದ್ದು, ಎರಡೂ ಬಾಬರಿ ಮಸೀದಿಯ ಮುಖ್ಯದ್ವಾರಕ್ಕೆ ಸಮೀಪದಲ್ಲಿದ್ದವು. 1859 ರಲ್ಲಿ ವಸಾಹತು ಆಡಳಿತವು ಮಸೀದಿ ಮತ್ತು ಈ ಎರಡೂ ಕಟ್ಟಡಗಳ ನಡುವೆ ಒಂದು ಕಬ್ಬಿಣದ ಕಂಬಿಗಳ ಬೇಲಿಯನ್ನು ನಿರ್ಮಿಸಿತ್ತು; ಎರಡೂ ಸಮುದಾಯದವರು ತಮ್ಮ ತಮ್ಮ ಪ್ರದೇಶಗಳಲ್ಲಿ ಪ್ರಾರ್ಥನೆ ಸಲ್ಲಿಸಲು ಅನುಕೂಲ ಮಾಡಿ ಕೊಟ್ಟಿತ್ತು.

ಬಾಬರಿ ಮಸೀದಿಯ ಹಕ್ಕುಪತ್ರಗಳಲ್ಲಿ ಮಸೀದಿಯಿದ್ದ ಸ್ಥಳವನ್ನು 'ಒಳಗಿನ ಅಂಗಳ' ಎಂದೂ, ರಾಮ್ ಚಬೂತ್ರ ಹಾಗೂ ಸೀತಾ ರಸೋಯಿ ಇದ್ದ ಸ್ಥಳವನ್ನು 'ಹೊರ ಅಂಗಳ' ಎಂದು ಉಲ್ಲೇಖಿಸಲಾಗಿತ್ತು. 1949ರ ಡಿಸೆಂಬರ್ 22 ರ ವರೆಗೆ ಒಳಗಿನ ಅಂಗಳದಲ್ಲಿ 'ರಾಮ್‌ಲಲ್ಲಾ' ಮೂರ್ತಿಯಿರಲಿಲ್ಲ, ಅಲ್ಲಿ ನಮಾಜುಗಳು ನಡೆಯುತ್ತಿದ್ದವು. ಮತ್ತು ರಾಮ್ ಚಬೂತ್ರಾದಲ್ಲಿ ಡಿಸೆಂಬರ್ 6, 1992ರಂದು ಕರಸೇವಕರು ಬಾಬ್ರಿಮಸೀದಿಯೊಂದಿಗೆ ಅದನ್ನು ಕೂಡ ಧ್ವಂಸ ಮಾಡುವ ವರೆಗೂ ಅಲ್ಲಿ ಪೂಜೆಗಳು ನಡೆಯುತ್ತಿದ್ದವು ಎಂದು ನೆನಪಿಸಿದ್ದರು ತಮ್ಮ ಲೇಖನದಲ್ಲಿ ಸುಮನ್ ಗುಪ್ತ.

2010 ರಲ್ಲಿ ಅಲಹಾಬಾದ್ ಹೈಕೋರ್ಟ್ ತನ್ನ ತೀರ್ಪಿನಲ್ಲಿ ಆ ಪ್ರದೇಶವನ್ನು ಮೂರು ವಿಭಾಗಗಳಾಗಿ ವಿಭಜಿಸಿ ಒಂದು ಭಾಗವನ್ನು ನಿರ್ಮೋಹಿ ಅಖಾಡಾದ ಸ್ವಾಧೀನಕ್ಕೆ ನೀಡಿತು. ಡಿಸೆಂಬರ್ 6, 1992 ರ ವರೆಗೂ ರಾಮ್ ಚಬೂತ್ರ ಹಾಗೂ ಸೀತಾ ರಸೋಯಿ ಇದ್ದ ಭಾಗವು ನಿರ್ಮೋಹಿ ಅಖಾಡರವರ ಸ್ವಾಧೀನದಲ್ಲಿತ್ತು.

ನವಂಬರ್ 9, 2019 ರಂದು ಸುಪ್ರೀಂ ಕೋರ್ಟು ತನ್ನ ಅಂತಿಮ ತೀರ್ಪಿನಲ್ಲಿ ನೂತನ ರಾಮ ಮಂದಿರ ನಿರ್ಮಾಣಕ್ಕೆ ದಾರಿ ಮಾಡಿಕೊಟ್ಟಿತು. ಮೋದಿ ಸರ್ಕಾರವು ತೀರ್ಪಿನ ಅನುಸಾರ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಎಂಬುದನ್ನು ಸ್ಥಾಪಿಸಿತು. 1993 ರಲ್ಲಿ ಸ್ವಾಧೀನ ಪಡಿಸಿಕೊಂಡಿದ್ದ 67 ಎಕರೆಯ ಜಮೀನನ್ನು ಆ ಟ್ರಸ್ಟಿಗೆ ಹಸ್ತಾಂತರಿಸಿದ ಕೇಂದ್ರ ಸರ್ಕಾರವು ಮಂದಿರ ನಿರ್ಮಾಣ ಮಾಡಲು ಆ ಟ್ರಸ್ಟಿಗೆ ಆದೇಶ ನೀಡಿತು. ವಿಶ್ವ ಹಿಂದೂ ಪರಿಷತ್ ತಯಾರಿಸಿದ್ದ ಹಳೆಯ ರಾಮ ಮಂದಿರ ಮಾದರಿಯನ್ನು ಪರಿಷ್ಕರಿಸಿ ಭವ್ಯ ಪ್ರಮಾಣದ ಮಂದಿರ ನಿರ್ಮಾಣಕ್ಕೆ ಸಿದ್ಧತೆ ಆರಂಭವಾಯಿತು.

ಈ ಸಿದ್ಧತೆಯ ಭಾಗವಾಗಿಯೇ ಆಗಸ್ಟ್ 27, 2020 ರಂದು ರಾಮ ಜನ್ಮಸ್ಥಾನ ಮತ್ತು ಅಲ್ಲಿ ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ಇದ್ದ ರಾಮನ ಹೆಸರಿನೊಂದಿಗೆ ಜೋಡಿಸಲ್ಪಟ್ಟ ಸುಮಾರಾಗಿ ಎಲ್ಲ ಕಟ್ಟಡಗಳನ್ನೂ ಧ್ವಂಸ ಮಾಡಲಾಯಿತು.

ಇದಕ್ಕೂ ಮುಂಚೆ, ಕಲ್ಯಾಣ ಸಿಂಗ್ ನೇತೃತ್ವದ ಉತ್ತರ ಪ್ರದೇಶದ ಬಿಜೆಪಿ ಸರ್ಕಾರವು 1991 ರಲ್ಲಿ ಸಾರ್ವಜನಿಕ ಸೌಕರ್ಯ ಕಲ್ಪಿಸಲು ಎಂಬ ಉದ್ದೇಶಕ್ಕಾಗಿ ಬಾಬರಿ ಮಸೀದಿಯ ಬಳಿ 2.77 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿತ್ತು. ಆ ಜಮೀನನ್ನು ಸಮತಟ್ಟಾಗಿ ಮಾಡುವ ಉದ್ದೇಶದಿಂದ ಆ ಪ್ರದೇಶದಲ್ಲಿದ್ದ ಹಲವಾರು ಚಿಕ್ಕ–ದೊಡ್ಡ ಮಂದಿರಗಳನ್ನು ನಾಶಗೊಳಿಸಲಾಗಿತ್ತು. ಹಾಗೆ ನಾಶಗೊಂಡ ಪ್ರಮುಖ ಮಂದಿರಗಳಲ್ಲಿ ಸುಮಿತ್ರಾ ಭವನ್, ಸಂಕಟಮೋಚನ್ ಮತ್ತು ರಾಮ್ ಜಾನಕಿ ಮಂದಿರಗಳು ಅಲ್ಲಿದ್ದವು. ಇವತ್ತು ಆ ಪ್ರದೇಶವು ವಿಶಾಲ ಮೈದಾನದಂತೆ ಕಾಣುತ್ತಿದೆ.

ಸೌಹಾರ್ದ ಸಹಜೀವನದ ಸಂಕೇತವಾಗಿದ್ದ ಅಯೋಧ್ಯೆ

ಅಯೋಧ್ಯೆ ಅದರ 'ಗಂಗಾ–ಜಮುನಿ ಸಂಸ್ಕೃತಿ' ಅಂದರೆ ಸಮನ್ವಯದ ಸಂಸ್ಕೃತಿಗೆ ಹೆಸರಾಗಿತ್ತು. ಮುಸ್ಲಿಂ ರಾಜರುಗಳು ಹಾಗೂ ಜಮೀನುದಾರರು ಅಯೋಧ್ಯಾ ಸುತ್ತಮುತ್ತಲ ಪ್ರದೇಶಗಳಲ್ಲಿ ರಾಮ ಜನ್ಮಸ್ಥಾನ ಹಾಗೂ ಹತ್ತಾರು ದೇವಸ್ಥಾನಗಳ ಸ್ಥಾಪನೆ ಹಾಗೂ ಸಂರಕ್ಷಣೆಗೆ ಜಮೀನುಗಳನ್ನು ದಾನ ಮಾಡಿರುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಹನುಮಾನ್‌ಗಢಿ, ಆಚಾರಿ, ರಾಣೋಪಲಿ ನಾನಕ್‌ಶಾಹಿ ಮತ್ತು ರಾಮ ಗುಲೇಲ ದೇವಸ್ಥಾನಗಳು, ಹಾಗೂ ಖಾಕಿ ಅಖಾಡಾ ಮಂದಿರಗಳು ಬಹಳ ಪ್ರಮುಖವಾದವು. ಈಗಾಗಲೇ ಈ ಮೇಲೆ ಹೇಳಿರುವ 1870 ರ ಕಾರ್ನೆಗಿ ಒಪ್ಪಂದದ ವರದಿಯಲ್ಲಿ ಇವುಗಳ ಬಗ್ಗೆ ದಾಖಲೆಗಳಿವೆ.

ಒಂದು ಶತಮಾನದ ನಂತರ ರಾಮ ಚಬೂತ್ರ/ ಸೀತಾ ರಸೋಯಿ ನೆನಪು ಮಾಸಿ ಹೋಗಲಾರಂಭಿಸಿದೆ. ಕೆಲವರು ಮಾತ್ರವೇ ಅದರ ಕೊನೆಯನ್ನು – ಡಿಸೆಂಬರ್ 6, 1992 ರಂದು ಬಾಬರಿ ಮಸೀದಿಯನ್ನು ಧ್ವಂಸ ಮಾಡಿದ ಕರಸೇವಕರೇ ಅದನ್ನೂ ನೆಲಸಮ ಮಾಡಿದರು ಎಂದು ನೆನಪು ಮಾಡಿಕೊಳ್ಳಬಹುದು. "ಜನ್ಮಸ್ಥಾನ"ದ ನೆನಪೂ ಕೂಡ ಮಾಸಿ ಹೋಗುತ್ತದೆ. ಕೆಲವರು, ಮುಸ್ಲಿಂ ರಾಜರುಗಳು ಹಾಗೂ ಜಮೀನುದಾರರ ಜಮೀನು ಹಾಗೂ ಹಣ ದಾನಗಳಿಂದ ಕಟ್ಟಲ್ಪಟ್ಟ ಅಯೋಧ್ಯಾದಲ್ಲಿನ 300 ವರ್ಷಗಳ ಹಳೆಯ ಚಾರಿತ್ರಿಕ 'ಜನ್ಮಸ್ಥಾನ'ವನ್ನು ಹಾಗು ಮತ್ತಿತರ ದೇವಸ್ಥಾನಗಳನ್ನು, ನೆನಪು ಮಾಡಿಕೊಳ್ಳಬಹುದು. ಅಯೋಧ್ಯೆಯ ಸಹಜೀವನ ಸಂಸ್ಕೃತಿಯ ಪ್ರತೀಕಗಳಾಗಿದ್ದ ಇತಿಹಾಸದ ಹೆಗ್ಗುರುತುಗಳ ನಾಶದೊಂದಿಗೆ ಇತಿಹಾಸದ ಇಡೀ ಅಧ್ಯಾಯವೊಂದನ್ನು ಹೇಳಹೆಸರಿಲ್ಲದಂತೆ ನಿರ್ನಾಮ ಮಾಡಲಾಯಿತು ಎಂದಿದ್ದಾರೆ ಸುಮನ್ ಗುಪ್ತ. ●





ರಾಮ ಚಬೂತ್ರ/ಸೀತಾರಸೋಯಿ ಮತ್ತು ಬಾಬರಿ ಮಸೀದಿಯಿಂದ ಪ್ರತ್ಯೇಕಿಸಲ್ಪಟ್ಟ ಬೇಲಿಯ ಸಮೀಪ ಇದ್ದ '1 ಜನ್ಮಭೂಮಿ' ಎಂಬ ಫಲಕ.



'ಅಗ್ನಿಪಥ್' ಯೋಜನೆಯು ದೇಶಭಕ್ತಿ ಮತ್ತು ಪ್ರೇರಿತ ಯುವಕರಿಗೆ ನಾಲ್ಕು ವರ್ಷಗಳ ಅವಧಿಗೆ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡುತ್ತದೆ ಎನ್ನುತ್ತದೆ ನರೇಂದ್ರ ಮೋದಿ ಸರ್ಕಾರ. 'ಅಗ್ನಿಪಥ್' ಯೋಜನೆ ತರುವ ಮೂಲಕ ಸೈನಿಕರಿಗೆ ಕಡಿಮೆ ಸಂಬಳ, ಸೇವಾ ಅವಧಿ ಕಡಿತ ಮತ್ತು ನಿವೃತ್ತಿ ನಂತರದ ಪಿಂಚಣಿಗೆ ಕತ್ತರಿ ಹಾಕಿದೆ. ಜೊತೆಗೆ 'ಅಗ್ನಿವೀರ'ರನ್ನು ನಿರುದ್ಯೋಗಿಗಳ ದೊಡ್ಡ ಸಾಲಿನಲ್ಲಿ ನಿಲ್ಲುವಂತೆ ಮಾಡಿದೆ. ಅಗ್ನಿಪಥ್ ಮೂಲಕ ಆಯ್ಕೆಯಾಗುವ ಶೇ. 75ರಷ್ಟು ಸೈನಿಕರು ಯಾವುದೇ ಗ್ರಾಚ್ಯುಟಿ ಅಥವಾ ಪಿಂಚಣಿ ಇಲ್ಲದೆ, ಸುಮಾರು 11.71 ಲಕ್ಷ ರೂ.ಗಳ ಒಂದು ಬಾರಿ ತೆರಿಗೆ–ಮುಕ್ತ ಸೇವಾ ನಿಧಿ ಪ್ಯಾಕೇಜ್ ಅನ್ನು ಪಡೆಯುತ್ತಾರೆ ಎನ್ನುತ್ತದೆ ಸರ್ಕಾರ. ಆದರೆ, ಈ ಪ್ಯಾಕೇಜ್ ನ ಮೊತ್ತದಲ್ಲಿಯೂ ಅಗ್ನಿವೀರರ ವೇತನದಲ್ಲಿ ಕಡಿತ ಮಾಡಿದ ಶೇ. 30 ರಷ್ಟು (5.02 ಲಕ್ಷ) ಮತ್ತು ಇದರ ಮೇಲಿನ ಬಡ್ಡಿ ಹಣವೂ ಇರುತ್ತದೆ.

ಮೋದಿ–9 ವರ್ಷಗಳು–ಭಾಗ–36

ಕಡಿಮೆ ವೇತನ ಮತ್ತು ಕೇವಲ 4 ವರ್ಷಗಳ ಸೇವೆಯ ನಂತರ ಸೈನಿಕರನ್ನು ನಿವೃತ್ತರನ್ನಾಗಿ ಮಾಡಿ, ಪಿಂಚಣಿಯೂ ಇಲ್ಲದಂತೆ ಮಾಡುವ

'ಅಗ್ನಿಪಥ್' ಯೋಜನೆಯ ಒಳ–ಹೊರಗು

2022ರ ಜೂನ್ 14 ರಂದು, ಆಶ್ಚರ್ಯಕರ ಪ್ರಕಟಣೆಯಲ್ಲಿ ನರೇಂದ್ರ ಮೋದಿ ಸರ್ಕಾರವು ಭಾರತೀಯ ಮಿಲಿಟರಿಯ ಎಲ್ಲಾ ಶಾಖೆಗಳಿಗೆ ಅಗ್ನಿಪಥ್ ("ಬೆಂಕಿಯ ಹಾದಿ") ಯೋಜನೆ ಎಂಬ ಹೊಸ ವಿವಾದಾತ್ಮಕ ನೇಮಕಾತಿ ಯೋಜನೆಯನ್ನು ಪ್ರಕಟಣೆ ಮಾಡಿತು. ಈ ಯೋಜನೆ ಮೂಲಕ ಭಾರತದ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗೆ ಯೋಧರನ್ನು ನೇಮಕಮಾಡಿಕೊಳ್ಳಲಾಗುತ್ತದೆ. ಅಗ್ನಿಪಥ್ ಎಂಬ ಹೆಸರಿನಲ್ಲಿ ಭಾರತೀಯ ಸೇನೆಗೆ ನಾಲ್ಕು ವರ್ಷಗಳ ಅವಧಿಗೆ ಸೇರ್ಪಡೆ ಮಾಡಿಕೊಳ್ಳುವ ಯೋಜನೆಯನ್ನು ಮೋದಿ ಸರ್ಕಾರ ಜಾರಿಗೆ ತಂದಿದೆ. ಈ ಯೋಜನೆಯಿಂದಾಗಿ ಸೈನಿಕರಿಗೆ ಈ ಹಿಂದಿನ 17 ವರ್ಷಗಳ ಸೇವೆ ಇಲ್ಲದಂತಾಗಿ, ಬಹುತೇಕ ಸೈನಿಕರಿಗೆ ಖಾಯಂ ಉದ್ಯೋಗ, ನಿವೃತ್ತಿ ವೇತನ ಇಲ್ಲದಂತೆ ಮಾಡುತ್ತದೆ. ಸೈನಿಕರಿಗೆ ಸಿಗುವ ಬಹುತೇಕ ಸೌಲಭ್ಯಗಳಿಂದ ಇವರು ವಂಚಿತರಾಗುತ್ತಾರೆ. ಅಗ್ನಿಪಥ್ ಮೂಲಕ ಆಯ್ಕೆಯಾಗಿ, ನಾಲ್ಕು ವರ್ಷಗಳ ತರಬೇತಿ ಮತ್ತು ಸೇವೆಯ ನಂತರ, ಕಡ್ಡಾಯವಾಗಿ ನಿವೃತ್ತರಾಗುತ್ತಾರೆ. ನಂತರ ತಮ್ಮ 22 ರಿಂದ 27 ನೇ ವಯಸ್ಸಿನ ನಡುವೆಯೇ ನಿರುದ್ಯೋಗಿಗಳಾಗಿ, ಸರ್ಕಾರ ಕೊಡುವ 'ಅಗ್ನಿವೀರ್' ಎಂಬ ಪ್ರಮಾಣಪತ್ರ ಹಿಡಿದು ಮತ್ತೆ ಉದ್ಯೋಗ ಹುಡುಕುತ್ತಾ ಅಲೆಯಬೇಕಾಗುತ್ತದೆ.

ಸಿ. ಸಿದ್ದಯ್ಯ

ವಿವಿಧ ರೀತಿಯ ಉದ್ಯಮಗಳಲ್ಲಿ, ಕಾರ್ಖಾನೆಗಳಲ್ಲಿ 'ನಿಗದಿತ ಅವಧಿಯ ಉದ್ಯೋಗ' (Fixed Term Employment-FTE) ನೇಮಕಾತಿ ಜಾರಿಗೆ ತಂದಿರುವ ವಿಷಯ ಗೊತ್ತೇ ಇದೆ. ಇದು ಉದ್ಯಮದ ಮಾಲೀಕರು ತಮ್ಮ ಉದ್ಯಮಕ್ಕೆ ಅವಶ್ಯಕವಾದ ಕೆಲಸಗಾರರನ್ನು, ನಿಗಧಿತ ಅವಧಿಗೆ ನೇಮಕ ಮಾಡಿಕೊಳ್ಳುವ ಮತ್ತು ನಂತರ ಆ ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕುವ, ಅಥವಾ ಆ ನಿಗಧಿತ ಅವಧಿ ಮುಗಿದ ನಂತರ ಮಾಲೀಕರಿಗೆ ಅಗತ್ಯವಿದ್ದಲ್ಲಿ ಮತ್ತೊಂದು 'ನಿಗದಿತ ಅವಧಿ'ಗೆ ಇರಿಸಿಕೊಳ್ಳುವ ಅವಕಾಶವನ್ನು ಮಾಲೀಕರಿಗೆ ಕೊಡುತ್ತದೆ. ಅಂದರೆ, ಇಂತಹ ನಿಗಧಿತ ಅವಧಿಗೆ ನೇಮಕಕೊಂಡ ಕೆಲಸಗಾರರಿಗೆ, ಕೆಲಸದಿಂದ ಹೊರಹಾಕಿದ್ದನ್ನು ಪ್ರಶ್ನಿಸುವ ಹಕ್ಕು, ಖಾಯಂ ನೌಕರಿ ಕೇಳುವ ಹಕ್ಕು, ನಿವೃತ್ತಿ ನಂತರದ ಸೌಲಭ್ಯಗಳನ್ನು ಪಡೆಯುವ ಹಕ್ಕು, ಖಾಯಂ ನೌಕರರಿಗೆ ಸಿಗುವ ಇತರೆ ಕಾರ್ಮಿಕ ಹಕ್ಕುಗಳನ್ನು ಕೇಳುವ ಹಕ್ಕು ಇರುವುದಿಲ್ಲ.

'ಅಗ್ನಿಪಥ್' (ಬೆಂಕಿಯ ಹಾದಿ) ಯೋಜನೆಯು 'ನಿಗಧಿತ ಅವಧಿಯ ಉದ್ಯೋಗ' ದ ನಿಯಮಕ್ಕೆ ಹೋಲುವಂತಿದೆ. ಸೈನ್ಯದಲ್ಲಿ ಸಿಪಾಯಿ ಮತ್ತು ನೌಕಾ ಮತ್ತು ವಾಯುಸೇನೆಯಲ್ಲಿ ಸಮಾನ ಶ್ರೇಣಿಯು 17–19 ವರ್ಷಗಳ ಸೇವೆಯ ನಂತರ ನಿವೃತ್ತರಾಗುತ್ತಾರೆ ಮತ್ತು ಅಧಿಕಾರಿಗಳು 60 ವರ್ಷ ವಯಸ್ಸನ್ನು ತಲುಪುವ ಮೊದಲು ನಿವೃತ್ತರಾಗುತ್ತಾರೆ. ಆದರೆ, ಅಗ್ನಿಪಥ್ ನೇಮಕಾತಿ ಯೋಜನೆಯು ಭಾರತೀಯ ಸೇನೆಯಲ್ಲಿ ಇದುವರೆಗೆ ಅಸ್ತಿತ್ವದಲ್ಲಿರುವ ನೇಮಕಾತಿ ಕಾರ್ಯತಂತ್ರವನ್ನೇ ಬದಲಾಯಿಸುತ್ತದೆ.

17.5 ರಿಂದ 23 ವರ್ಷ ವಯಸ್ಸಿನ ಒಳಗಿನವರು ಈ ಯೋಜನೆಯ ಮೂಲಕ ಸೈನ್ಯಕ್ಕೆ ಸೇರಲು ಅರ್ಹರಾಗಿರುತ್ತಾರೆ. ಶೇ. 25 ರಷ್ಟು ಅಗ್ನಿವೀರ್ ಗಳನ್ನು ಮುಂದಿನ 15 ವರ್ಷಗಳ ಸೇವೆಗಾಗಿ ಸಾಮಾನ್ಯ ಸೈನಿಕರಾಗಿ ದಾಖಲಾತಿಗಾಗಿ ಆಯ್ಕೆ ಮಾಡಲಾಗುತ್ತದೆ. ಉಳಿದ ಶೇಕಡಾ 75 ರಷ್ಟು ಮಂದಿ ಕಡ್ಡಾಯವಾಗಿ ನಿವೃತ್ತರಾಗುತ್ತಾರೆ. ಇವರು ಯಾವುದೇ ಗ್ರಾಚ್ಯುಟಿ ಅಥವಾ ಪಿಂಚಣಿ ಇಲ್ಲದೆ ಸುಮಾರು 11.71 ಲಕ್ಷ ರೂ.ಗಳ ಒಂದು ಬಾರಿ ತೆರಿಗೆ–ಮುಕ್ತ ಸೇವಾ ನಿಧಿ ಪ್ಯಾಕೇಜ್ ಅನ್ನು ಪಡೆಯುತ್ತಾರೆ. ಅವರು ಅಭಿವೃದ್ಧಿಪಡಿಸಿದ ಕೌಶಲ್ಯಗಳನ್ನು ಔಪಚಾರಿಕವಾಗಿ ಗುರುತಿಸಲು ಅವರಿಗೆ ಪ್ರಮಾಣಪತ್ರವನ್ನು ನೀಡಲಾಗುತ್ತದೆ ಮತ್ತು ತೆರಿಗೆ–ಮುಕ್ತ ಪ್ಯಾಕೇಜ್ ಅನ್ನು ಪ್ರಸ್ತುತ 10 ಲಕ್ಷ ರೂಪಾಯಿ ಎಂದು ಅಂದಾಜಿಸಲಾಗಿದೆ. ಉಳಿಸಿಕೊಳ್ಳುವ ಶೇ. 25 ರಷ್ಟು ನೇಮಕಾತಿಗಳನ್ನು ಹೇಗೆ ನಿಖರವಾಗಿ ಆಯ್ಕೆ ಮಾಡಲಾಗುತ್ತದೆ ಎಂಬುದು ಅಸ್ಪಷ್ಟವಾಗಿದೆ. ಮಾತ್ರವಲ್ಲ, ಇದು ಹಿಂದಿನ 17 ವರ್ಷಗಳ ಕನಿಷ್ಠ ಸೇವಾವಧಿಯನ್ನು ಮತ್ತು ಪಿಂಚಣಿ ವ್ಯವಸ್ಥೆಯನ್ನು ಬದಲಿಸುತ್ತದೆ. ಅಗ್ನಿಪಥ್ ಯೋಜನೆಯು ಸೈನಿಕರ ಸರಾಸರಿ ವಯಸ್ಸನ್ನು ಪ್ರಸ್ತುತ 32 ವರ್ಷಗಳಿಂದ 26 ವರ್ಷಗಳವರೆಗೆ ಕಡಿಮೆ ಮಾಡುವ ಗುರಿಯನ್ನು ಹೊಂದಿದೆ ಎಂದು ಹೇಳಿದೆ.

ಪಿಂಚಣಿ ಹೊರೆ ಕಡಿಮೆ ಮಾಡಿಕೊಳ್ಳುವ ತಂತ್ರ!!

ಭಾರತ ಸರ್ಕಾರವು ತನ್ನ ಪ್ರಕಟಣೆಗಳಿಂದ ಸ್ಪಷ್ಟವಾಗಿ ಹೇಳದಿದ್ದರೂ, ಅಗ್ನಿಪಥ್ ಯೋಜನೆಯು ಹಲವಾರು ಬಹಳಷ್ಟು ರಹಸ್ಯ ಗುರಿಗಳನ್ನು ಹೊಂದಿದೆ ಎಂದು ವ್ಯಾಪಕವಾಗಿ ಅರ್ಥೈಸಲಾಗಿದೆ. ಪ್ರಮುಖವಾಗಿ ಆರ್ಥಿಕತೆಗೆ ಸಂಬಂಧಿಸಿದ್ದು. ಸರ್ಕಾರ ಮಿಲಿಟರಿ ಸಿಬ್ಬಂದಿಯ ಪಿಂಚಣಿಗೆ ಹೆಚ್ಚಿನ ಹಣ ಖರ್ಚು ಮಾಡುತ್ತದೆ. ತಮ್ಮ 17 ವರ್ಷಗಳ ಸೇವೆಯ ನಂತರ, ವರ್ಷಕ್ಕೆ ಭಾರತೀಯ ಸೇನೆಯ ಸರಿಸುಮಾರು 60,000 ಸಿಬ್ಬಂದಿ ನಿವೃತ್ತಿ ಹೊಂದುತ್ತಾರೆ. ಪ್ರಸ್ತುತ ಪಿಂಚಣಿ ಪಡೆಯುವ 30 ಲಕ್ಷ ಮಾಜಿ ಸೈನಿಕರಿದ್ದಾರೆ. ಇವರೆಲ್ಲರಿಗೂ ಸರ್ಕಾರ ಪಿಂಚಣಿ ಕೊಡುತ್ತಿದೆ.

ಭಾರತೀಯ ಸೇನೆಯು ನಿವೃತ್ತಿಯಿಂದಾಗಿ ಉಂಟಾಗುವ ತನ್ನ ಸಿಬ್ಬಂದಿಗಳ ಕೊರತೆಯನ್ನು ಪ್ರತಿ ವರ್ಷವೂ ಈ ಹೊಸ ನೇಮಕಗಳ ಮೂಲಕ ತುಂಬಿಕೊಳ್ಳಬೇಕು. ಅಗ್ನಿಪಥ್ ಮೂಲಕ ಇಷ್ಟು ಸಂಖ್ಯೆಯ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಉದ್ದೇಶ ಸರ್ಕಾರದ್ದಾಗಿದೆ ಎಂದೂ ಹೇಳಲಾಗಿದೆ. ಆದರೆ ಅಗ್ನಿಪಥ್ ಯೋಜನೆಯು ಆರಂಭದಲ್ಲಿ 46,000 ನೇಮಕಾತಿಗಳನ್ನು ತೆಗೆದುಕೊಳ್ಳುತ್ತದೆ. 2027 ರ ವೇಳೆಗೆ ನೇಮಕಾತಿಗಳನ್ನು 1,25,000 ಕ್ಕೆ ಹೆಚ್ಚಿಸುವ ನಿರೀಕ್ಷೆಯಿದೆ. ಅಗತ್ಯವಿರುವ ಸೇವೆಯನ್ನು ನಾಲ್ಕು ವರ್ಷಗಳಿಗೆ ಸೀಮಿತಗೊಳಿಸಿ, ಅವರಿಗೆ ಪಿಂಚಣಿ ಸೌಲಭ್ಯ ಇಲ್ಲದಂತೆ ಮಾಡುವ ಅಗ್ನಿಪಥ್ ಯೋಜನೆಯಿಂದಾಗಿ, ಪಿಂಚಣಿ ಪಡೆಯುವ ಸೈನಿಕರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಾ ಹೋಗುತ್ತದೆ. ಇದರಿಂದ ಸರ್ಕಾರ ಈಗ ನಿವೃತ್ತಿ ಸೈನಿಕರಿಗಾಗಿ ಮಾಡುತ್ತಿರುವ ಪಿಂಚಣಿ ವೆಚ್ಚವೂ ಗಮನಾರ್ಹವಾಗಿ ಕಡಿಮೆಯಾಗುತ್ತದೆ. ಅಗ್ನಿಪಥ್ ಮೂಲಕ ನೇಮಕವು ಸೈನಿಕರ ಮೇಲಿನ ವೆಚ್ಚ ಕಡಿತದ ವ್ಯಾಯಾಮ ಎಂಬುದನ್ನು ಸರ್ಕಾರ ಹೇಳದಿದ್ದರೂ ಇದೇ ಸರ್ಕಾರದ ಅಘೋಷಿತ ಗುರಿಯಾಗಿದೆ.

'ಒಂದು ಶ್ರೇಣಿ–ಒಂದು ಪಿಂಚಣಿ' (OROP) ಗಾಗಿನ ಹೋರಾಟದ ಹಿನ್ನಲೆಯಲ್ಲಿ ಸರ್ಕಾರದ ಈ ನಡೆಯನ್ನು ನೋಡಬೇಕಿದೆ. OROP ಯೋಜನೆ ಜಾರಿಗೆ ತಂದಿದ್ದೇವೆ ಎಂದು ಮೋದಿ ಸರ್ಕಾರ ಹೇಳುತ್ತಿದೆಯಾದರೂ, ನಿವೃತ್ತ ಸೈನಿಕರ ಈ ಬೇಡಿಕೆಗಳನ್ನು ಸಂಪೂರ್ಣವಾಗಿ ಸರ್ಕಾರ ಒಪ್ಪಿಕೊಂಡಿಲ್ಲ. ಭಾರತೀಯ ಮಾಜಿ ಸೈನಿಕರ ಹೋರಾಟ ಸಮಿತಿ ಇಂದಿಗೂ ಇದಕ್ಕಾಗಿ ಹೋರಾಡುತ್ತಿದೆ. OROP ಜಾರಿ ಮಾಡಿದರೆ, ಇದಕ್ಕಾಗಿ ಸರ್ಕಾರ ಹೆಚ್ಚಿನ ಹಣ ತೆಗೆದಿರಿಸಬೇಕಾಗುತ್ತದೆ. ಅಗ್ನಿಪಥ್ ಯೋಜನೆಯು ಬಹುತೇಕ ಸೈನಿಕ ಸಿಬ್ಬಂದಿಗಳಿಗೆ ಪಿಂಚಣಿಯೇ ಇಲ್ಲದಂತೆ ಮಾಡುತ್ತದೆ. ಆಗ, 'ಒಂದು ಶ್ರೇಣಿ–ಒಂದು ಪಿಂಚಣಿ' ಎಂಬ ಪಿಂಚಣಿಗಾಗಿನ ಹೋರಾಟಗಳೇ ಇರುವುದಿಲ್ಲ. ಇದೂ ಕೂಡ ಸರ್ಕಾರದ 'ದೂ(ದು)ರಾಲೋಚನೆ' ಇರಬಹುದೇ?

ಅಗ್ನಿಪಥ ಯೋಜನೆ ಮೂಲಕ ನೇಮಕಗೊಂಡ 'ಅಗ್ನಿವೀರ'ರಿಗೆ ನಾಲ್ಕು ವರ್ಷಗಳ ತರಬೇತಿ ಮತ್ತು ಸೇವೆಯ ಅವಧಿಯಲ್ಲಿ ಮಾಸಿಕ ವೇತನ ಮೊದಲ ವರ್ಷ ರೂ. 30,000, ಎರಡನೇ ವರ್ಷ ರೂ. 33,000, ಮೂರನೇ ವರ್ಷ ರೂ. 36,500 ಮತ್ತು ನಾಲ್ಕನೇ ವರ್ಷ ರೂ. 40,000 ವೇತನ ಕೊಡಲಾಗುತ್ತದೆ. ಈ ವೇತನದಲ್ಲಿ ಶೇ. 30 ರಷ್ಟು ಮೊತ್ತವನ್ನು ಅಗ್ನಿವೀರ್ ಕಾರ್ಪಸ್ ನಿಧಿಗೆ ಕೊಡುಗೆಯಾಗಿ ಕಡಿತ ಮಾಡಿ ಉಳಿದ ವೇತನದ ಹಣವನ್ನು ಅಗ್ನಿವೀರರಿಗೆ ಕೊಡಲಾಗುತ್ತದೆ. ಈ ನಿಧಿಗೆ ಅಗ್ನಿವೀರರ ಕೊಡುಗೆ 5.02 ಲಕ್ಷ ರೂ., ಈ ನಿಧಿಗೆ ಇಷ್ಟೇ ಪ್ರಮಾಣದ ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ. ನಿವೃತ್ತಿ ನಂತರ, ಈ ಎರಡೂ ಕೊಡುಗೆಯ ಹಣಕ್ಕೆ ಬರುವ ಬಡ್ಡಿ ಸೇರಿಸಿ, 11.71 ಲಕ್ಷ ರೂಪಾಯಿಗಳ ತೆರಿಗೆ–ಮುಕ್ತ ಸೇವಾ ನಿಧಿ ಪ್ಯಾಕೇಜ್ ಅನ್ನು ಪಡೆಯುತ್ತಾರೆ.



ಪ್ರತಿಭಟನೆಗಳು ಭುಗಿಲೆದ್ದವು

ಅಧಿಕೃತ ವೆಬ್‌ಸೈಟ್‌ನಲ್ಲಿ ಅಗ್ನಿಪಥ್ ಅನುಷ್ಠಾನದ ಪರಿಣಾಮವಾಗಿ ಸಚಿವಾಲಯವು ಹಿಂದಿನ ನೇಮಕಾತಿ ವರ್ಷಗಳಲ್ಲಿ ಭಾರತೀಯ ಸೇನಾ ನೇಮಕಾತಿಯ ಸಾಮಾನ್ಯ ಪ್ರವೇಶ ಪರೀಕ್ಷೆ (CEE) ಸೇರಿದಂತೆ ಎಲ್ಲಾ ಬಾಕಿಯಿರುವ ಪ್ರಕ್ರಿಯೆಗಳನ್ನು ನಿಲ್ಲಿಸಿತು ಮತ್ತು ರದ್ದುಗೊಳಿಸಿತು. ಸೇನೆಯಲ್ಲಿ 17 ವರ್ಷಗಳ ಪೂರ್ಣಕಾಲದ ಸೇವೆ ಸಲ್ಲಿಸಬೇಕೆಂದು ಬಯಸಿದ್ದ ಸಹಸ್ರಾರು ಆಕಾಂಕ್ಷಿಗಳ ಆಸೆಗೆ ಸರ್ಕಾರ ತಣ್ಣೀರು ಎರಚಿತು. ಅಗ್ನಿಪಥ್ ಯೋಜನೆಯ ವಿರುದ್ಧ ಹಲವಾರು ರಾಜ್ಯಗಳಲ್ಲಿ ಪ್ರತಿಭಟನೆಗಳು ಭುಗಿಲೆದ್ದವು. ಈ ಯೋಜನೆಯು ಉದ್ಯೋಗ ಭದ್ರತೆಯನ್ನು ಒದಗಿಸುವುದಿಲ್ಲ ಮತ್ತು 'ಅಗ್ನಿವೀರ್ಸ್' ಪಿಂಚಣಿ ಪ್ರಯೋಜನಗಳನ್ನು

ಪುಟ 15 ಕ್ಕೆ

ರಕ್ಷಣೆ–ಉದ್ಯೋಗ–ಆದಾಯ ಖಾತರಿಯ ಜವಾಬ್ದಾರಿ ತೆಗೆದುಕೊಳ್ಳದ ಒಪ್ಪಂದದ ಅಡಿಯಲ್ಲಿ

ಸಂಘರ್ಷ ಪೀಡಿತ ಇಸ್ರೇಲಿಗೆ ಭಾರತೀಯ ಕಾರ್ಮಿಕರ ರವಾನೆ!

ಪಾಲೆಸ್ಟೈನ್ ಮೇಲೆ ಅಮಾನವೀಯ ಬರ್ಬರ ನರಮೇಧದ ಯುದ್ಧವನ್ನು ಆರಂಭಿಸಿರುವ ಇಸ್ರೇಲ್‌ಗೆ ಭಾರತೀಯ ಕಾರ್ಮಿಕರನ್ನು ಒದಗಿಸಲು ಕೇಂದ್ರ ಸರ್ಕಾರ ಮುಂದಾಗಿದೆ ಎಂದು ಸಿಐಟಿಯು ಖಂಡಿಸಿದೆ. ಇದಕ್ಕೆ ಸಂಬಂಧಪಟ್ಟಂತೆ ಇಸ್ರೇಲ್‌ನೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಗೊಳಿಸುವಂತೆ ಅದು ಸರ್ಕಾರವನ್ನು ಒತ್ತಾಯಿಸಿದೆ.

ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿ(ಎನ್‌ಎಸ್‌ಡಿಸಿ) ಯ ಮೇಲ್ವಿಚಾರಣೆಯ ನಡೆಸುತ್ತಿರುವ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವು(ಎಂಎಸ್‌ಡಿಇ) ನವೆಂಬರ್ 2023 ರಲ್ಲಿ ಇಸ್ರೇಲಿನೊಂದಿಗೆ ಮೂರು ವರ್ಷಗಳ ಒಪ್ಪಂದವನ್ನು ಮಾಡಿಕೊಂಡಿದೆ ಎಂದು ವರದಿಯಾಗಿದೆ. ಅದರ ಪ್ರಕಾರ ಕಟ್ಟಡ ನಿರ್ಮಾಣ ಮತ್ತು ಆರೈಕೆಯಂತಹ ನಿರ್ದಿಷ್ಟ ಶ್ರಮ ವಲಯಗಳಲ್ಲಿ ಇಸ್ರೇಲಿಗೆ ತಾತ್ಕಾಲಿಕವಾಗಿ ಭಾರತದಿಂದ 40ಸಾವಿರಕ್ಕೂ ಹೆಚ್ಚು ಕಾರ್ಮಿಕರನ್ನು ಕಳಿಸಲು ಸರಕಾರ ಅನುವು ಮಾಡಿಕೊಡುತ್ತದೆ.

ಸಾವಿರಾರು ಮಂದಿಯನ್ನು ಸಂಹಾರ ಮಾಡುತ್ತಿರುವ ಯುದ್ಧದ ನಡುವೆಯೇ ಈ ಒಪ್ಪಂದ ನಡೆದಿದೆ. ಆಗಲೂ ಸಿಐಟಿಯು ಮತ್ತು ಅದಕ್ಕೆ ಸಂಯೋಜಿತವಾದ ಭಾರತದ ನಿರ್ಮಾಣ ಕಾರ್ಮಿಕರ ಒಕ್ಕೂಟ (ಸಿಡಬ್ಲ್ಯೂಎಫ್‌ಐ) ಇದನ್ನು ಖಂಡಿಸಿದ್ದವು. ಇದು ದೇಶದ ಅಸಹಾಯಕ ನಿರುದ್ಯೋಗಿ ಯುವಜನರ ಜೀವಗಳನ್ನು ಸಾವಿನ ಬಲೆಯತ್ತ ನೂಕುತ್ತಿದೆ ಎಂದು ಹೇಳಿದ್ದವು. ಪ್ಯಾಲೆಸ್ಟೈನ್ ಮೇಲೆ ದಾಳಿಗಳನ್ನು ನಡೆಸಿ ನರಮೇಧದಲ್ಲಿ ತೊಡಗಿರುವ ಇಸ್ರೇಲಿ ಸರಕಾರವೇ ಸಾವಿರಾರು ಪ್ಯಾಲೆಸ್ತೀನಿಯನ್ನರನ್ನು ನಿರುದ್ಯೋಗಿಗಳಾಗಿ ಮಾಡಿದ್ದು, ಅವರ ಜಾಗದಲ್ಲಿ ಕೆಲಸ ಮಾಡಲು ಕೇಂದ್ರ ಮತ್ತು ರಾಜ್ಯಗಳ ಬಿಜೆಪಿ ನೇತೃತ್ವದ ಸರ್ಕಾರಗಳು ಒಡ್ಡುತ್ತಿರುವ ಆಮಿಷಗಳಿಗೆ ಬಲಿಯಾಗಬೇಡಿ ಎಂದು ಸಿಐಟಿಯು ಭಾರತೀಯ ಕಾರ್ಮಿಕರಿಗೆ ಮನವಿ ಮಾಡಿತ್ತು.

ಸಿಐಟಿಯು ಸೇರಿದಂತೆ ಹತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳು ವಿರೋಧಿಸಿದರೂ ಗಾಜಾದ ಮೇಲಿನ ಇಸ್ರೇಲಿನ ಬರ್ಬರ ದಾಳಿ 100ನೇ ದಿನಕ್ಕೆ ಕಾಲಿಟ್ಟಿರುವ ವೇಳೆಗೇ ಬಿಜೆಪಿ ನೇತೃತ್ವದ ಉತ್ತರಪ್ರದೇಶ ಮತ್ತು ಹರಿಯಾಣ ಸರಕಾರಗಳು ಇಸ್ರೇಲಿನಲ್ಲಿ ಉದ್ಯೋಗಕ್ಕಾಗಿ ಯುವಕರ ಆಯ್ಕೆಗೆ ಸಿದ್ಧತೆ ನಡೆಸಿವೆ ಎಂದು ವರದಿಯಾಗಿದೆ. ಕಾರ್ಮಿಕ ಸಂಘಗಳ ಮನವಿಯ ಹೊರತಾಗಿಯೂ ಸಾವಿರಾರು ಕಾರ್ಮಿಕರು ಇಸ್ರೇಲಿಗೆ ಹೋಗಲು ಸಿದ್ಧರಾಗಿದ್ದಾರೆ ಎಂದೂ ವರದಿಯಾಗಿದೆ.

ಇದು ಭಾರತದಲ್ಲಿ ಕುಶಲ ಕಾರ್ಮಿಕರ ಹತಾಶ ಪರಿಸ್ಥಿತಿಯನ್ನು ಬಿಂಬಿಸುತ್ತದೆ ಎಂದೊಬ್ಬ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಹರಿಯಾಣದ ರೋಹ್ಟಕ್‌ನಲ್ಲಿ ಅನೇಕರು ಇಸ್ರೇಲ್‌ನಲ್ಲಿ ಉದ್ಯೋಗಕ್ಕಾಗಿ ನೋಂದಾಯಿಸಲು ಸಾಲುಗಟ್ಟಿ ನಿಂತಿದ್ದರು, ಕೆಲವು ಡಾಲರ್‌ಗಳಿಗೆ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಬಾಂಬ್ ದಾಳಿಗೊಳಗಾದ ಗಾಜಾದಲ್ಲಿ ಕೆಲಸ ಮಾಡಲು ಸಹ ಸಿದ್ಧರಾಗಿರುವವರು "ನಮ್ಮ ಅದೃಷ್ಟದಲ್ಲಿ ಸಾಯುವುದೇ ಇದ್ದರೆ, ಇಲ್ಲಿಯಾದರೇನು, ಅಲ್ಲಿಯಾದರೇನು? ನಾವು ಅಲ್ಲಿಗೆ ಹೋಗಿ ಒಳ್ಳೆಯ ಕೆಲಸ ಮಾಡಿ ಸ್ವಲ್ಪ ಸಮಯ ಕಳೆದು ಹಿಂತಿರುಗಿ ಬರುತ್ತೇವೆ ಎಂಬುದು ನನ್ನ ನಿರೀಕ್ಷೆ" ಎಂದೊಬ್ಬ ಕಾರ್ಮಿಕ ಹೇಳಿರುವುದು 19ನೇ ಶತಮಾನದಲ್ಲಿ ಬ್ರಿಟಿಶ್ ವಸಾಹುಶಾಹಿಗಳು ಶಾಂತಸಾಗರ ಮತ್ತು ಅಟ್ಲಾಂಟಿಕ್ ಸಾಗರ





ಪ್ರದೇಶಗಳ ಪ್ಲಾಂಟೇಶನ್‌ಗಳಲ್ಲಿ ದುಡಿಯಲು ಕೂಲಿಯಾಳುಗಳಾಗಿ ಬಿಹಾರ, ಬಂಗಾಲ ಮತ್ತು ಉತ್ತರಪ್ರದೇಶದ ಬಡ ಜನರ ಹತಾಶ ಸ್ಥಿತಿಯನ್ನು ನೆನಪಿಸುತ್ತದೆ ಎಂದಿದ್ದಾರೆ ಈ ಅರ್ಥಶಾಸ್ತ್ರಜ್ಞರು. 28 ವರ್ಷದ ಇನ್ನೊಬ್ಬ ಕಾರ್ಮಿಕ "ಹೌದು, ನನಗೆ ಘರ್ಷಣೆ ನಡೆಯುತ್ತಿರುವುದು ತಿಳಿದಿದೆ, ಆದರೆ ನಾನು ಕಡಿಮೆ ಸಮಯದಲ್ಲಿ 12000 ಡಾಲರ್ ಗಳಿಸಬಹುದು. ಭಾರತದಲ್ಲಿ ಅದೇ ಪ್ರಮಾಣದ ಹಣವನ್ನು ಗಳಿಸಲಿಕ್ಕೆ ನನಗೆ ಕನಿಷ್ಟ ಐದು ವರ್ಷಗಳು ಬೇಕಾಗಬಹುದು" ಎಂದರಂತೆ. ನಿರುದ್ಯೋಗ ಮತ್ತು ಕಡಿಮೆ ಮಟ್ಟದ ಕೂಲಿ/ಸಂಬಳ ಈ ಹತಾಶೆಯ ಹಿಂದಿದೆ ಎಂಬುದು ಸ್ವಯಂವೇದ್ಯ ಎನ್ನುತ್ತಾರೆ ಅವರು.

ಒಂದು ಶತಮಾನದ ಹಿಂದೆ, ಆಗಿನ ಬ್ರಿಟಿಷ್ ವಸಾಹತುಶಾಹಿ ಸರಕಾರದ ವಸಾಹತು ಕಾರ್ಯದರ್ಶಿ ಬಡಕಾರ್ಮಿಕರನ್ನು ಕಳಿಸುವುದನ್ನು ನಿಲ್ಲಿಸಬೇಕು, ಅಥವ ಇದರಲ್ಲಿ ಸರಕಾರ ಭಾಗಿಯಾಗುವುದನ್ನಾದರೂ ತಡೆಯಬೇಕು ಎಂದು 1910ರಲ್ಲಿ ಸಲಹೆ ಮಾಡಿದ್ದರಂತೆ. ಕೊನೆಗೂ 1915ರಲ್ಲಿ ಇದು ಜಾರಿಗೆ ಬಂತು. ಆದರೆ ಈಗ ದೇಶದ ಅರ್ಥವ್ಯವಸ್ಥೆ ಅದ್ಭುತ ಪ್ರಮಾಣದಲ್ಲಿ ಬೆಳೆಯುತ್ತಿದೆ, ಎಂದು ಡಂಗುರ ಸಾರುತ್ತಿರುವ ಬಿಜೆಪಿಯ 'ದೇಶಭಕ್ತ' ಸರಕಾರಗಳೇ ಅದನ್ನು ಮತ್ತೆ ಆರಂಭಿಸುತ್ತಿರುವಂತೆ ಕಾಣುತ್ತದೆ.


ಇಷ್ಟೇ ಅಲ್ಲ, ಭಾರತದ 'ದೇಶಭಕ್ತರು' ಎಂದೆನಿಸಿಕೊಳ್ಳುವವರು ಬಾಂಗ್ಲಾದೇಶೀ, ರೊಹಿಂಗ್ಯಾ ಇತ್ಯಾದಿ 'ಕಾನೂನು ಬಾಹಿರ ವಲಸೆಗಾರರ' ವಿರುದ್ಧ ಹರಿಹಾಯುತ್ತಿರುವಾಗ, ಅಕ್ಟೋಬರ್ 2022ರಿಂದ ಸಪ್ಟಂಬರ್ 2023ರ ನಡುವೆ 96917 ಭಾರತೀಯರು ಕಾನೂನು ಬಾಹಿರವಾಗಿ ಅಮೆರಿಕವನ್ನು ಪ್ರವೇಶಿಸಿದ್ದಾರೆ ಎಂದು ಅಲ್ಲಿನ ಕಸ್ಟಮ್ಸ್ ಮತ್ತು ಗಡಿ ರಕ್ಷಣಾ ದತ್ತಾಂಶಗಳು ಹೇಳುತ್ತಿವೆಯಂತೆ. ಕಳೆದ ತಿಂಗಳಷ್ಟೇ 303 ಭಾರತೀಯರಿದ್ದ ಒಂದು ವಿಮಾನವನ್ನು ಪ್ಯಾರಿಸಿನಲ್ಲಿ ತಡೆಹಿಡಿದು, ವಾಪಾಸು ಕಳಿಸಿದ ಘಟನೆ ವರದಿಯಾಗಿದೆ. ಇವರು ದುಬಾಯಿ ಮೂಲಕ ನಿಕರಗುವಕ್ಕೆ ಹೋಗಿ ಅಮೆರಿಕಾಕ್ಕೆ ಕಾನೂನು ಬಾಹಿರವಾಗಿ ಪ್ರವೇಶಿಸಲು ಹೊರಟವರು ಎಂಬ ಗುಮಾನಿಯ ಮೇಲೆ ಹೀಗೆ ಮಾಡಲಾಯಿತು. ಇವರಲ್ಲಿ 96 ಮಂದಿ ಗುಜರಾತಿನವರು, ಅವರಲ್ಲಿ ಕೆಲವರು ತಮ್ಮ 'ಮಾದರಿ ರಾಜ್ಯ'ಕ್ಕೆ ಹಿಂದಿರುಗಲು ನಿರಾಕರಿಸಿದರು ಎಂದೂ ವರದಿಯಾಗಿದೆ. ಸರಕಾರ ಸಂಸತ್ತಿಗೆ ನೀಡಿರುವ ಅಂಕಿ–ಅಂಶಗಳ ಪ್ರಕಾರ, ಈ ಪರಮ ದೇಶಭಕ್ತ ಪಕ್ಷದ ಸರಕಾರದ ಆಳ್ವಿಕೆಯ ಕಳೆದ 9 ವರ್ಷಗಳಲ್ಲಿ, 15,06,724 ಭಾರತೀಯ ನಾಗರಿಕರು ತಮ್ಮ ಭಾರತೀಯ ನಾಗರಿಕತ್ವವನ್ನು ತ್ಯಜಿಸಿದ್ದಾರೆ. ಸ್ವತಂತ್ರ ಭಾರತದ ಅಮೃತ ವರ್ಷದಲ್ಲಂತೂ (2022ರಲ್ಲಿ) 2 ಲಕ್ಷಕ್ಕೂ ಹೆಚ್ಚು ಮಂದಿ ತಮ್ಮ ಭಾರತೀಯ ನಾಗರಿಕತ್ವವನ್ನು ಬಿಟ್ಟುಕೊಟ್ಟಿದ್ದಾರೆ!

ಇನ್ನೇನು ಐದು ಟ್ರಿಲಿಯನ್ ಡಾಲರ್ ಮಟ್ಟಕ್ಕೇರಿ ಜಗತ್ತಿನ ಮೂರನೇ ಅತಿ ದೊಡ್ಡ ಅರ್ಥವ್ಯವಸ್ಥೆಯಾಗಲಿದೆ ಎಂದು ದಿನಬೆಳಗಾದರೆ ಬೆನ್ನು ತಟ್ಟಿಕೊಳ್ಳುತ್ತಿರುವ ಅರ್ಥವ್ಯವಸ್ಥೆಗೆ ತನ್ನ ಕಾರ್ಮಿಕರಿಗೆ ಒಂದು ಘನತೆಯ ಬದುಕು ಒದಗಿಸಲು ಸಾಧ್ಯವಾಗುತ್ತಿಲ್ಲವೇ ಎಂಬ ಪ್ರಶ್ನೆ ಸಹಜವಾಗಿಯೇ ಏಳುತ್ತದೆ.

ಇಸ್ರೇಲಿಗೆ ಮೇಸ್ತ್ರಿಗಳು, ಪೇಂಟರ್‌ಗಳು, ಎಲೆಕ್ಟ್ರಿಷಿಯನ್‌ಗಳು, ಪ್ಲಂಬರ್‌ಗಳು ಬೇಕಂತೆ. ಅವರ ಬೇಡಿಕೆಗಳನ್ನು ಪೂರೈಸುವ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆಯಂತೆ. ಆದರೆ ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯವಾಗಲೀ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಮಂಡಳಿಯಾಗಲೀ ಈ ಕಾರ್ಮಿಕರ ಸುರಕ್ಷತೆ, ಸಾಮಾಜಿಕ ಭದ್ರತೆ ಮತ್ತು ಇತರ ಕನಿಷ್ಟ ಕಾರ್ಮಿಕ ರಕ್ಷಣೆ ಸೇರಿದಂತೆ ಕಾರ್ಮಿಕರ ಭವಿಷ್ಯ ಮತ್ತು ಸುರಕ್ಷತೆಯ ಬಗ್ಗೆ ಯಾವುದೇ ಜವಾಬ್ದಾರಿಯನ್ನು ವಹಿಸುವುದಿಲ್ಲ. ಅದೇ ಸಮಯದಲ್ಲಿ ಸಚಿವಾಲಯ ಇಸ್ರೇಲಿನಲ್ಲಿ ಉದ್ಯೋಗಗಳಿಗೆ ಅಗತ್ಯವಿರುವ ಕೌಶಲ್ಯಗಳನ್ನು ಬೆಳೆಸುವ ಶುಲ್ಕದ ಹೆಸರಿನಲ್ಲಿ ನಿರುದ್ಯೋಗಿ ಯುವಕರಿಂದ ರೂ.10000 ಲೂಟಿ ಮಾಡುತ್ತಿದೆ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ.

ಇದಷ್ಟೇ ಅಲ್ಲ, ನರಹತ್ಯೆಯ ಯುದ್ಧದಲ್ಲಿ ಮುಳುಗಿರುವ ದೇಶಕ್ಕೆ ಅಗ್ಗದ ಶ್ರಮಶಕ್ತಿಯನ್ನು ಒದಗಿಸುವ ಭಾರತ ಸರ್ಕಾರದ ಈ ನಡೆಯು ವಿಶ್ವಸಂಸ್ಥೆಯ ಎರಡು ರಾಷ್ಟ್ರಗಳ ನಿರ್ಣಯ ಮತ್ತು ಯುದ್ಧವಿರಾಮದ ನಿರ್ಣಯ ಇವೆರಡಕ್ಕೂ ಮತ್ತು ಪ್ಯಾಲೆಸ್ಟೈನನ್ನು ಸ್ವತಂತ್ರ ಸಾರ್ವಭೌಮ ರಾಷ್ಟ್ರವೆಂದು ಗುರುತಿಸುವ ಭಾರತದ ವಿದೇಶಾಂಗ ನೀತಿಗೂ ತದ್ವಿರುದ್ಧವಾಗಿದೆ. ಇದು ಅಮಾನುಷ ಝಿಯೋನಿಸ್ಟ್ ನರಮೇಧದ ಯುದ್ಧಕೋರ ಇಸ್ರೇಲಿನ ಬೆಂಬಲಕ್ಕೆ ನಿಲ್ಲುವ, ಮತ್ತು ಭಾರತೀಯ ಕಾರ್ಮಿಕರ ಜೀವಗಳನ್ನು ಪಣಕ್ಕಿಡುವ ಕೃತ್ಯವಾಗಿದೆ, ಈ ಅಮಾನವೀಯ ನಡೆಯನ್ನು ನಿಲ್ಲಿಸಬೇಕು ಎಂದು ಸಿಐಟಿಯು ಆಗ್ರಹಿಸಿದೆ.

ಅಯೋಧ್ಯೆಯಲ್ಲಿ ರಾಮಮಂದಿರ... ವ್ಯಂಗ್ಯಚಿತ್ರಕಾರರು ಕಂಡಂತೆ



ರಾಮ ರಾಜ್ಯದ ಕ್ಯಾರಟ್

ಓಡು!

ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್




ಇಲ್ಲ ಮಗಳೇ, ಈ ರಸ್ತೆ ಮೋದಿ ಮಂದಿರದತ್ತ ಹೋಗುವುದಿಲ್ಲ!

ಸತೀಶ ಆಚಾರ್ಯ



ಗುರಿ–2024

ಎಂ.ಅಲಿ, ಆರೋಆನಂದ್



ಪಿ.ಮಹಮ್ಮದ್, ಫೇಸ್‌ಬುಕ್



ನನ್ನ ರಾಜ್ಯಭಾರದಲ್ಲಿ ಬೇರೆಯೇ ಶತ್ರುಗಳಿದ್ದಾರೆ

* ದ್ವೇಷಸಾಧಕರ ಬೆನ್ನು ಹತ್ತಿರುವವರು
* ವಿಚಾರವಂತರು
* ಹಕ್ಕುಗಳ ಪ್ರತಿಪಾದಕರು

ಪೆನ್‌ಪೆನ್ಸಿಲ್‌ಡ್ರಾ,, ಫೇಸ್‌ಬುಕ್



ಜನವರಿ 22–26–30

"ವರ್ಷವನ್ನು ಆರಂಭಿಸಲೊಂದು ಮಹಾನ್ ದಾರಿ–ರಾಮ, ರಿಪಬ್ಲಿಕ್ ಮತ್ತು ಒಬ್ಬ ರಾಮಭಕ್ತನ ಬಗ್ಗೆ ಯೋಚಿಸುವುದು

ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನ್ ಸಿದ್ಧಾಂತದ ಮಹತ್ವ



ಲೆನಿನ್ ಮರಣ–ಶತಾಬ್ದಿ ಲೇಖನಮಾಲೆ

ವಿಶ್ವ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಅಖಂಡವಾಗಿ ಕಂಡರಿಸಿದ, ಸಾಮ್ರಾಜ್ಯಶಾಹಿ ಕುರಿತ ಲೆನಿನ್ ಸಿದ್ಧಾಂತ ಮಾರ್ಕ್ಸ್‌ವಾದಿ ಸೈದ್ಧಾಂತಿಕ ನಿಲುವನ್ನು ಕನಿಷ್ಠ ಐದು ಪ್ರಮುಖ ರೀತಿಗಳಲ್ಲಿ ವಿಸ್ತರಿಸಿತು. ಅದೊಂದು ಅದ್ಭುತವಾದ ಸೈದ್ಧಾಂತಿಕ ಸಾಧನೆಯಾಗಿತ್ತು. ಮಾರ್ಕ್ಸ್‌ವಾದದ ಬಲ ಅಡಗಿರುವುದು ಅದು ಸತ್ಯ ಎಂಬುದರಲ್ಲಿ ಎಂದು ಲೆನಿನ್ ಒಂದೊಮ್ಮೆ ಟಿಪ್ಪಣಿ ಮಾಡಿದ್ದರು. ಸಾಮ್ರಾಜ್ಯಶಾಹಿಯ ಕುರಿತು ಲೆನಿನ್ ಪ್ರತಿಪಾದಿಸಿದ ಸಿದ್ಧಾಂತದ ಬಗ್ಗೆಯೂ ಹೀಗೆಯೇ ಹೇಳಬಹುದು. ಲೆನಿನ್ ಅವರ ಗಮನಾರ್ಹವಾದ ಮತ್ತು ಅದ್ಭುತವಾದ ಸೈದ್ಧಾಂತಿಕ ಸಾಧನೆಯು ಹೊಸ ಸಂಧಿಕಾಲದಲ್ಲಿ ಉದ್ಭವಿಸಿದ ಮತ್ತು ಉತ್ತರಗಳಿಗಾಗಿ ತಳಮಳಿಸುತ್ತಿದ್ದ ಎಲ್ಲ ಪ್ರಶ್ನೆಗಳಿಗೆ ಕಣ್ಣು ಕೋರೈಸುವ ಮಟ್ಟದ ಉತ್ತರಗಳನ್ನು ಒದಗಿಸಿತು.

ಪ್ರೊ. ಪ್ರಭಾತ್ ಪಟ್ನಾಯಕ್ **ಅನು: ಕೆ.ಎಂ.ನಾಗರಾಜ್**

ಸಾಮ್ರಾಜ್ಯಶಾಹಿಯ ಕುರಿತು ಲೆನಿನ್ ಪ್ರತಿಪಾದಿಸಿದ ಸಿದ್ಧಾಂತದ ಮಹತ್ವವೆಂದರೆ, ಅದು ಕ್ರಾಂತಿಯನ್ನು ಗ್ರಹಿಸುವ ಕ್ರಮವನ್ನೇ ಆಮೂಲಾಗ್ರವಾಗಿ ಬದಲಾಯಿಸಿತು ಎಂಬುದು. ಮೆಟ್ರೊಪಾಲಿಟನ್(ಮುಂದುವರೆದ ಬಂಡವಾಳಶಾಹಿ) ದೇಶಗಳಲ್ಲಿ ಕಾರ್ಮಿಕ ವರ್ಗದ ಕ್ರಾಂತಿ ಸಂಭವಿಸುವ ಮೊದಲು ವಸಾಹತು ದೇಶಗಳಲ್ಲಿ ಮತ್ತು ಅವಲಂಬಿತ ದೇಶಗಳಲ್ಲಿ ಅವರದ್ದೇ ಕ್ರಾಂತಿಗಳು ಸಂಭವಿಸುವ ಸಾಧ್ಯತೆ ಇದೆ ಎಂಬ ಅಭಿಪ್ರಾಯವನ್ನು ಮಾರ್ಕ್ಸ್ ಮತ್ತು ಎಂಗೆಲ್ಸ್ ಅದಾಗಲೇ ವ್ಯಕ್ತಪಡಿಸಿದ್ದರು. ಆದರೆ ಈ ರೀತಿಯ ಎರಡು ಕ್ರಾಂತಿಗಳ ನಡುವೆ ತಾಳ ಮೇಳವಿಲ್ಲ ಎಂದು ಕಾಣಲಾಗಿತ್ತು. ಅಂಚಿನ ದೇಶಗಳಲ್ಲಿ ಕ್ರಾಂತಿಯ ದಿಕ್ಪಥ ಮತ್ತು ಮೆಟ್ರೊಪಾಲಿಟನ್ ದೇಶಗಳ ಸಮಾಜವಾದಿ ಕ್ರಾಂತಿಯೊಂದಿಗೆ ಅದರ ಸಂಬಂಧ ಇವು ಅಸ್ಪಷ್ಟವಾಗಿಯೇ ಉಳಿದಿದ್ದವು. ಲೆನಿನ್‌ರವರ ಸಾಮ್ರಾಜ್ಯಶಾಹಿ ಕುರಿತ ವ್ಯಾಖ್ಯಾನವು ಈ ಎರಡೂ ಕ್ರಾಂತಿಗಳ ನಡುವೆ ಸಂಬಂಧ ಕಲ್ಪಿಸಿತು ಮಾತ್ರವಲ್ಲ, ಅಂಚಿನ ದೇಶಗಳ ಕ್ರಾಂತಿಯು, ಸಮಾಜವಾದದ ಕಡೆಗೆ ಮಾನವ ಸಮಾಜವು ಚಲಿಸುವ ಪ್ರಕ್ರಿಯೆಯ ಒಂದು ಭಾಗವಾಗಿದೆ ಎಂದು ಸ್ಪಷ್ಟಪಡಿಸಿತು.

ಆದ್ದರಿಂದ, ಲೆನಿನ್ ಅವರ ವ್ಯಾಖ್ಯಾನವು ಕ್ರಾಂತಿಕಾರಿ ಪ್ರಕ್ರಿಯೆಯನ್ನು ಸಮಗ್ರವಾಗಿ ನೋಡಿತು, ವಿಶ್ವ ಕ್ರಾಂತಿಕಾರಿ ಪ್ರಕ್ರಿಯೆಯನ್ನು ಅಖಂಡವಾಗಿ ಕಂಡರಿಸಿತು. ಸರಪಳಿಯು ಅತ್ಯಂತ ದುರ್ಬಲವಾಗಿರುವಲ್ಲಿ ಅದರ ಕೊಂಡಿ, ಆ ಕೊಂಡಿಯ ನೆಲೆ ಎಲ್ಲೇ ಇರಲಿ, ಕಳಚಿಕೊಳ್ಳುತ್ತದೆ ಮತ್ತು ಅದು ಇಡೀ ವ್ಯವಸ್ಥೆಯನ್ನು ಕಿತ್ತೆಸೆಯುತ್ತದೆ. ಬಂಡವಾಳಶಾಹಿಯು ಬಿಕ್ಕಟ್ಟಿಗೆ ಸಿಲುಕಿದ ಹಂತವನ್ನು ತಲುಪಿದ ನಂತರದಲ್ಲಿ ಮಾನವ ಸಮಾಜವನ್ನು ದುರಂತಮಯ ಯುದ್ಧಗಳಲ್ಲಿ ಸಿಕ್ಕಿಸುತ್ತದೆ. ಅಂತಹ ವಿಶ್ವ ಕ್ರಾಂತಿಯ ಸಮಯ ಆಗ ಕೂಡಿ ಬಂದಿತ್ತು ಎಂದು ಅದು ದೃಢಪಡಿಸಿತು: ಎಲ್ಲಿಯೂ "ಖಾಲಿ ಜಾಗಗಳನ್ನು" ಬಿಡದೆ ಅದು ಇಡೀ ಜಗತ್ತನ್ನು "ಆವರಿಸಿದೆ" ಮತ್ತು ಅದನ್ನು ವಿವಿಧ ಮೆಟ್ರೋಪಾಲಿಟನ್ ಶಕ್ತಿಗಳ ಪ್ರಭಾವ ವಲಯಗಳನ್ನಾಗಿ ವಿಭಜಿಸಿದೆ. ಆದ್ದರಿಂದ ಮುಂದೆ ನಡೆಯಬಹುದಾದ್ದು ವಿಶ್ವದ ಪುನರ್ವಿಭಜನೆ ಮಾತ್ರವೇ, ಅದು ಅಂತರ್–ಸಾಮ್ರಾಜ್ಯಶಾಹಿ ಯುದ್ಧಗಳ ಮೂಲಕ ಮಾತ್ರ ಸಂಭವಿಸಬಲ್ಲದು ಎಂದು ಅದು ಹೇಳಿತು. ಇದಕ್ಕೆ ಮೊದಲನೆಯ ವಿಶ್ವ ಯುದ್ಧವು ಒಂದು ಶ್ರೇಷ್ಠ ಉದಾಹರಣೆಯಾಗಿದೆ.

ಸಾಮ್ರಾಜ್ಯಶಾಹಿಯನ್ನು ವಿವರಿಸುವ ಮಾರ್ಕ್ಸ್‌ವಾದಿ ಸೈದ್ಧಾಂತಿಕ ನಿಲುವನ್ನು ಅದು ಕನಿಷ್ಠ ಐದು ಪ್ರಮುಖ ರೀತಿಗಳಲ್ಲಿ ವಿಸ್ತರಿಸಿತು. ಮೊದಲನೆಯದಾಗಿ, ಇತಿಹಾಸವಿಲ್ಲದ ದೇಶಗಳು ಎಂದು ಹೆಗೆಲ್ ತಳ್ಳಿಹಾಕಿದ ಪ್ರಪಂಚದ "ಹೊರವಲಯದ ಪ್ರದೇಶ"ಗಳನ್ನು ಅದು ವಿಶ್ವಕ್ರಾಂತಿಯ ವ್ಯಾಪ್ತಿಯೊಳಗೆ ತಂದಿತು. ಕಾಲ ಕ್ರಮದಲ್ಲಿ ಮತ್ತು ಬೋಲ್ಶೆವಿಕ್ ಕ್ರಾಂತಿಯ ನಂತರ ಯುರೋಪಿನಲ್ಲಿ ಕ್ರಾಂತಿ ಸಂಭವಿಸುವ ನಿರೀಕ್ಷೆಗಳು ಮಸುಕಾಗಲು ಆರಂಭವಾದಾಗ, ಈ ದೇಶಗಳು ವಿಶ್ವಕ್ರಾಂತಿ–ರಂಗಭೂಮಿಯ ಮಧ್ಯಕ್ಕೆ ಸ್ಥಳಾಂತರಗೊಂಡವು. ತನ್ನ ಕೊನೆಯ ಬರಹ ಒಂದರಲ್ಲಿ ಲೆನಿನ್, ರಷ್ಯಾದ ಕ್ರಾಂತಿಯನ್ನು ಅನುಸರಿಸಿ ಚೀನಾದಲ್ಲಿ ಮತ್ತು ಭಾರತದಲ್ಲಿ ಕ್ರಾಂತಿ ಸಂಭವಿಸುವ ನಿರೀಕ್ಷೆಯನ್ನು ಹೊಂದಿದ್ದರು; ಮಾತ್ರವಲ್ಲದೆ, ರಷ್ಯಾ, ಚೀನಾ ಮತ್ತು ಭಾರತ ಒಟ್ಟುಗೂಡಿದರೆ ಮಾನವ ಸಮಾಜದ ಅರ್ಧದಷ್ಟಾಗುತ್ತದೆ ಮತ್ತು ಈ ಮೂರೂ ದೇಶಗಳು ಒಟ್ಟಾದರೆ ವಿಶ್ವ ಶಕ್ತಿಗಳ ಬಲಾಬಲ ನಿರ್ಣಾಯಕವಾಗಿ ಸಮಾಜವಾದದ ಪರವಾಗಿ ವಾಲುತ್ತದೆ ಎಂದು ತೃಪ್ತಿ ಪಡೆದಿದ್ದರು ಕೂಡ. ಅವರು ಸ್ಥಾಪಿಸಲು ನೆರವಾದ ಮತ್ತು ಜಗತ್ತು ಅಲ್ಲಿಯವರೆಗೂ ಕಂಡಿರದ ರೀತಿಯಲ್ಲಿದ್ದ 'ಕಮ್ಯುನಿಸ್ಟ್ ಅಂತಾರಾಷ್ಟ್ರೀಯ'ದ ಕಲಾಪಗಳಲ್ಲಿ ಭಾರತ, ಚೀನಾ, ಮೆಕ್ಸಿಕೋ ಮತ್ತು ಇಂಡೋ–ಚೀನಾ ಪ್ರತಿನಿಧಿಗಳು ಫ್ರಾನ್ಸ್, ಜರ್ಮನಿ ಮತ್ತು ಅಮೆರಿಕಾದ ಪ್ರತಿನಿಧಿಗಳೊಂದಿಗೆ ಬೆರೆಯುತ್ತಿದ್ದರು ಎಂಬ ಸಂಗತಿಯಲ್ಲಿ ಆಶ್ಚರ್ಯವೇನಿಲ್ಲ.


'ಕಮ್ಯುನಿಸ್ಟ್ ಅಂತರಾಷ್ಟ್ರೀಯ'ದ ಒಂದು ಮಹಾಧಿವೇಶನದಲ್ಲಿ ವಿಶ್ವ ಕಮ್ಯುನಿಸ್ಟ್ ಮುಖಂಡರೊಂದಿಗೆ

ವಿಶ್ವಕ್ರಾಂತಿಯ ಸಿದ್ಧಾಂತ

ಎರಡನೆಯದಾಗಿ, ಮತ್ತು ಸಮಾನಾಂತರವಾಗಿ, ಅದು ಮಾರ್ಕ್ಸ್‌ವಾದದ ವ್ಯಾಪ್ತಿಯನ್ನು ಮುಂದುವರಿದ ಬಂಡವಾಳಶಾಹಿ ದೇಶಗಳಲ್ಲಿನ ಕಾರ್ಮಿಕ ವರ್ಗದ ಕ್ರಾಂತಿಯ ಸಿದ್ಧಾಂತದಿಂದ ವಿಶ್ವ ಕ್ರಾಂತಿಯ ಸಿದ್ಧಾಂತವಾಗಿ ವಿಸ್ತರಿಸಿತು. ನಿಜ, ಮಾರ್ಕ್ಸ್‌ವಾದದ ವ್ಯಾಪ್ತಿ ಇನ್ನೂ ವಿಸ್ತಾರವಾಗಿದೆ ಎಂಬ ಗ್ರಹಿಕೆ ಸಾಮ್ರಾಜ್ಯಶಾಹಿಯ ಕುರಿತಾದ ಈ ವ್ಯಾಖ್ಯಾನದಲ್ಲಿ ಬಂಡವಾಳದ ವಿಶ್ವ ಪ್ರಾಬಲ್ಯದ ಮೇಲೆ ಒತ್ತು ನೀಡಿದ್ದರ ಪ್ರತಿಫಲನವೇ ಆಗಿತ್ತು; ಮಾರ್ಕ್ಸ್‌ವಾದಿ ಸಿದ್ಧಾಂತದ ಆಧಾರದ ಮೇಲೆ ಯುರೋಪೇತರ ಸಮಾಜಗಳ ಇತಿಹಾಸವನ್ನು ವಿಶ್ಲೇಷಿಸುವ ನಿರ್ದಿಷ್ಟ ಕಾರ್ಯವು ಆಗಿನ್ನೂ ಸಂಪನ್ನಗೊಳ್ಳಬೇಕಿತ್ತು. 'ಕಮ್ಯೂನಿಸ್ಟ್ ಅಂತಾರಾಷ್ಟ್ರೀಯ'ದ ನಿರ್ದಿಷ್ಟ ರಾಜಕೀಯ ವಿಶ್ಲೇಷಣೆಗಳಲ್ಲಿ ತಪ್ಪುಗಳಿದ್ದರೂ ಸಹ, ಮೂರನೇ ಜಗತ್ತಿನಲ್ಲಿ ಅದರ ಉತ್ತೇಜನೆಯಿಂದ ಮಾರ್ಕ್ಸ್‌ವಾದದ ವಿಸ್ತರಣೆ ಮತ್ತು ಸಮೃದ್ಧಿ ಅಂತಹ ವಿಶ್ಲೇಷಣೆಗಳಿಗೆ ಆಧಾರವನ್ನು ಒದಗಿಸಿತು. ಈ ರೀತಿಯಲ್ಲಿ ಸಾಮ್ರಾಜ್ಯಶಾಹಿಯ ಕುರಿತು ಲೆನಿನ್ ಪ್ರತಿಪಾದಿಸಿದ ಸಿದ್ಧಾಂತವು ಮಾರ್ಕ್ಸ್‌ವಾದಕ್ಕೆ ಒಂದು ಅಭೂತಪೂರ್ವ ತುಡಿತವನ್ನು ನೀಡಿತು.

ಖಚಿತವಾಗಿ ಹೇಳುವುದಾದರೆ, ಸಾಮ್ರಾಜ್ಯಶಾಹಿಯ ಬಗ್ಗೆ ಮಾತನಾಡಿದವರಲ್ಲಿ ಲೆನಿನ್ ಮೊದಲಿಗರೇನಲ್ಲ, ಅವರಿಗಿಂತ ಮೊದಲು ರೋಸಾ ಲಕ್ಸೆಂಬರ್ಗ್ ಬಂಡವಾಳಶಾಹಿಯು ಏಕೆ ಬಂಡವಾಳಶಾಹಿ–ಪೂರ್ವ ಮಾರುಕಟ್ಟೆಗಳನ್ನು ಅತಿಕ್ರಮಿಸುವುದು ಅಗತ್ಯವಿತ್ತು ಎಂಬುದರ ಬಗ್ಗೆ ಒಂದು ಗಮನಾರ್ಹವೂ ಮತ್ತು ತೀಕ್ಷ್ಣವೂ ಆದ ಒಳನೋಟವುಳ್ಳ ವಿಶ್ಲೇಷಣೆಯನ್ನು ಒದಗಿಸಿದ್ದರು. ಆದರೆ, ಅಂತಹ ಅತಿಕ್ರಮಣದಲ್ಲಿ ಬಂಡವಾಳಶಾಹಿಯು ಬಂಡವಾಳಶಾಹಿ–ಪೂರ್ವದ ಭಾಗವನ್ನು ಅರಗಿಸಿಕೊಂಡಿತು ಎಂದು ಕಂಡರಿಸಿದ್ದು ಲಕ್ಸೆಂಬರ್ಗ್ ಅವರ ವಿಶ್ಲೇಷಣೆಯಲ್ಲಿನ ಕೊರತೆಯಾಗಿತ್ತು. ಬಂಡವಾಳಶಾಹಿ–ಪೂರ್ವದ ಈ ಭಾಗವು ಧ್ವಂಸಗೊಂಡ ಘಟಕವಾಗಿ ಉಳಿಯಲಿಲ್ಲ. ಅದು ಬಂಡವಾಳಶಾಹಿ ವಿಭಾಗದ ಭಾಗವೇ ಆಗಿ ಹೋಯಿತು ಎಂದು ಲಕ್ಸೆಂಬರ್ಗ್ ಭಾವಿಸಿದ್ದರಿಂದ, ಯುರೋಪಿಯನ್ ಕಾರ್ಮಿಕ ವರ್ಗದ ಕ್ರಾಂತಿಯೇ ಅವರ ವಿಶ್ಲೇಷಣೆಯ ಕೇಂದ್ರ ಬಿಂದುವಾಗಿ ಮುಂದುವರೆದಿತ್ತು. ಇದಕ್ಕೆ ವ್ಯತಿರಿಕ್ತವಾದ ಕೆಲವು ಟಿಪ್ಪಣಿಗಳು ಅಲ್ಲಿ–ಇಲ್ಲಿ ಇದ್ದರೂ, ಅವರ ಪ್ರತಿಪಾದನೆಯು ಮೆಟ್ರೊಪಾಲಿಟನ್ ಬಂಡವಾಳಶಾಹಿ ಒಂದು ವಿಭಾಗಿಸಲ್ಪಟ್ಟ ಜಗತ್ತನ್ನು ಸೃಷ್ಟಿಸಿದೆ ಎಂದು ಕಾಣಲಿಲ್ಲ. ಆದರೆ, ಲೆನಿನ್ ರವರ ಪ್ರತಿಪಾದನೆ ಇಂತಹ ಒಂದು ಶಾಶ್ವತವಾಗಿ ವಿಭಾಗಿಸಲ್ಪಟ್ಟ ಜಗತ್ತು ಸೃಷ್ಟಿಯಾಗುತ್ತಿದೆ ಎಂಬುದನ್ನು ಕಂಡರಿಸಿತು. ಇದುವೇ ಅದರ ಶಕ್ತಿ.

ಮೂರನೆಯದಾಗಿ, ಲೆನಿನ್ ಅವರ ಸಿದ್ಧಾಂತವು ಬಂಡವಾಳಶಾಹಿಯು "ಚಾರಿತ್ರಿಕವಾಗಿ ಹಳಸಲು" ಆಗುತ್ತಿದೆ ಎಂಬ ಪರಿಕಲ್ಪನೆಗೆ ಒಂದು ಆಮೂಲಾಗ್ರ ಹೊಸ ವ್ಯಾಖ್ಯಾನವನ್ನೇ ಒದಗಿಸಿತು. ಅಲ್ಲಿಯವರೆಗೂ, 'ರಾಜಕೀಯ ಅರ್ಥಶಾಸ್ತ್ರದ ವಿಮರ್ಶೆಗೆ ಒಂದು ಕೊಡುಗೆ' ಎಂಬ ಕೃತಿಯ ಮುನ್ನುಡಿಯಲ್ಲಿ ಮಾರ್ಕ್ಸ್ ಅವರ ಸಂಕ್ಷಿಪ್ತ ಹೇಳಿಕೆಗಳ ಆಧಾರದ ಮೇಲೆ, ಒಂದು ಉತ್ಪಾದನಾ ವಿಧಾನದ ಒಳಗೆ ಉತ್ಪಾದನಾ ಶಕ್ತಿಗಳು ಇನ್ನಷ್ಟು ಅಭಿವೃದ್ಧಿ ಕಾಣಲು ಅವಕಾಶಗಳು ಮುಗಿದು ಹೋದಾಗ ಮಾತ್ರ ಅದು ಐತಿಹಾಸಿಕವಾಗಿ ಹಳಸಲಾಗುತ್ತದೆ ಮತ್ತು ಅದನ್ನು ಕಿತ್ತೆಸೆಯಲು ಪಕ್ವವಾಗುತ್ತದೆ ಎಂದು ಅರ್ಥೈಸಿಕೊಳ್ಳಲಾಗಿತ್ತು. ಅಂಥಹ ಪರಿಸ್ಥಿತಿಯು ಬಿಕ್ಕಟ್ಟಿನ ರೂಪದಲ್ಲಿ ಪ್ರಕಟವಾಗಬೇಕಿತ್ತು. ವಾಸ್ತವವಾಗಿ ಅಂತಹ ಯಾವುದೇ ಬಿಕ್ಕಟ್ಟು ಕಾಣದಿದ್ದ ಸನ್ನಿವೇಶವೇ ಶ್ರಮಜೀವಿಗಳಿಗೆ ಬೇಕೆನಿಸಿರುವಂತೆ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೆಸೆಯುವ ಬದಲು ಅದನ್ನು ಸುಧಾರಿಸಬೇಕು ಎನ್ನುವಂತೆ ಮಾರ್ಕ್ಸ್‌ವಾದವನ್ನು "ಪರಿಷ್ಕರಣೆ"ಗೆ ಒಳಪಡಿಸಬೇಕು ಎಂಬ ಬರ್ನ್‌ಸ್ಟೈನ್ ಆಗ್ರಹಕ್ಕೆ ಪ್ರೇರಕವಾಗಿತ್ತು. ಕ್ರಾಂತಿಕಾರಿ ಸಂಪ್ರದಾಯಕ್ಕೆ ಬದ್ಧರಾದ ಕೆಲವರು, ಬರ್ನ್‌ಸ್ಟೈನ್ ನಿಲುವನ್ನು ವಿರೋಧಿಸುತ್ತ, ಅಂತಹ ಒಂದು ಅಂತಿಮ ಬಿಕ್ಕಟ್ಟು ಇನ್ನೂ ಉದ್ಭವಿಸಿರಲಿಕ್ಕಿಲ್ಲವಾದರೂ, ಅದು ಸಂಭವಿಸುವುದಂತೂ ಅನಿವಾರ್ಯವೇ ಎಂದು ಸಾಧಿಸಲು ಪ್ರಯತ್ನಿಸಿದರು.

ಇಲ್ಲಿ ಸಾಮ್ರಾಜ್ಯಶಾಹಿಯ ಕುರಿತ ಲೆನಿನ್ ಸಿದ್ಧಾಂತವು ಪೂರ್ಣವಾಗಿ ಪುಟ 15 ಕ್ಕೆ

ಜರ್ಮನಿ: ವಲಸೆಗಾರರ ಸಾಮೂಹಿಕ ಗಡಿಪಾರಿಗೆ ಫ್ಯಾಸಿಸ್ಟ್ ಪಿತೂರಿಯ ವಿರುದ್ಧ 14 ಲಕ್ಷ ಜನರ ಪ್ರತಿರೋಧ

ಈ ಭಾರೀ ಪ್ರತಿಭಟನೆಗೆ ಪ್ರಚೋದಕವಾಗಿದ್ದು AfD ಯ ಸದಸ್ಯರು ಇತರ ಉಗ್ರ ಬಲಪಂಥೀಯ ಫ್ಯಾಸಿಸ್ಟ್ ಗುಂಪುಗಳೊಂದಿಗೆ ವಲಸೆಗಾರರ ಸಾಮೂಹಿಕ ಗಡೀಪಾರು ಮಾಡುವ ವಿವರವಾದ ಯೋಜನೆಗಳನ್ನು ಚರ್ಚಿಸಿದ್ದಾರೆ ಎಂಬ ತನಿಖಾ ವರದಿಗಳು. ಪೋಟ್ಸ್ ಡ್ಯಾಮ್ ನಲ್ಲಿ ನಡೆದ ಸಭೆಯೊಂದರಲ್ಲಿ, ಈ ವರದಿಗಳ ಪ್ರಕಾರ ಮುಂದೆ ಒಜಿಆ ಸರಕಾರ ರಚಿಸಿದಾಗ "ವಲಸೆಗಾರ"ರನ್ನು ವ್ಯವಸ್ಥಿತವಾಗಿ ಗಡೀಪಾರು ಮಾಡುವ ಕುರಿತು ಚರ್ಚಿಸಲಾಯಿತು.



"ಆಸ್ಟ್ರಿಯನ್ ಐಡೆಂಟಿಟೇರಿಯನ್ ಮೂವ್ ಮೆಂಟ್" ನ ನಾಯಕ ಮಾರ್ಟಿನ್ ಸೆಲ್ನರ್ "ಮಾಸ್ಟರ್ ಪ್ಲಾನ್" ಒಂದನ್ನು ಮಂಡಿಸಿದರು. ಈ ಯೋಜನೆಯ ಪ್ರಕಾರ ಗಡಿಪಾರಾಗುವ 'ವಲಸೆಗಾರ"ರ ಪಟ್ಟಿಯಲ್ಲಿ ರಾಜಕೀಯ ಅಥವಾ ಇತರ ಕಾರಣಗಳಿಗಾಗಿ ಆಶ್ರಯ ಕೇಳಿ ಬರುವವರು, ಶಾಶ್ವತ ನೆಲೆಸುವ ಹಕ್ಕು ಪಡೆದಿರುವ ವಿದೇಶೀಯರು ಮತ್ತು "ಮುಖ್ಯಧಾರೆಯಲ್ಲಿ ಮಿಳಿತವಾಗದಿರುವ" ಜರ್ಮನ್ ನಾಗರಿಕರು ಸೇರಿದ್ದಾರೆ, ಎಂದು ಈ ವರದಿ ತಯಾರಿಸಿದ 'ಕರೆಕ್ಟಿವ್' ಸಂಶೋಧನಾ ಸಂಸ್ಥೆ ತಿಳಿಸಿದೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಜರ್ಮನಿಯಿಂದ ಗಡಿಪಾರು ಮಾಡಿ ಉತ್ತರ ಆಫ್ರಿಕಾದಲ್ಲಿರುವ ಒಂದು 'ಮಾದರಿ ದೇಶ"ಕ್ಕೆ ಕಳಿಸುವ ಯೋಚನೆಯನ್ನು ಸಹ ಚರ್ಚಿಸಲಾಯಿತಂತೆ. ಇದು ಜೂನ್ 1940ರಲ್ಲಿ ಮಿಲಿಯಾಂತರ ಜ್ಯೂಗಳನ್ನು ಆಗ ಫ್ರೆಂಚ್ ವಸಾಹತುವಾಗಿದ್ದ ಮಡಗಾಸ್ಕರ್ ಗೆ ಕಳಿಸುವ ನಾಜೀ "ಮಡಗಾಸ್ಕರ್ ಯೋಜನೆ"ಯ ಮಾದರಿಯಲ್ಲಿದೆ.

ಈ ವರದಿ ಪ್ರಕಟವಾಗುತ್ತಿದ್ದಂತೆ ಇದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗಿ ಈ ಪ್ರದರ್ಶನಗಳನ್ನು ಸಂಘಟಿಸಲಾಯಿತು. ಈ ಕರೆಗೆ ಅಭೂತಪೂರ್ವ ಪ್ರತಿಸ್ಪಂದನೆ ಸಿಕ್ಕಿತು. ಬರ್ಲಿನ್ ನ ರೈಸ್ಟಾಗ್ (ಜರ್ಮನಿಯ ಸಂಸತ್ ಭವನ)ದ ಎದುರು ಲಕ್ಷ ಜನ ಸೇರಿದ್ದರು. ಹ್ಯಾಂಬರ್ಗ ಮತ್ತು ಮುನಿಚ್ ಮುಂತಾದ ದೊಡ್ಡ ನಗರಗಳಲ್ಲಿ ಸೇರಲಾರಂಭಿಸಿದ್ದ ಜನಸಂದಣಿ ಗೆ ಕೇಂದ್ರೀಯ ಸ್ಥಳಗಳಲ್ಲಿ ಜಾಗ ಸಾಲದೆ ನೂಕುನುಗ್ಗಲಾಗಬಹುದೆಂದು ಸಭೆಗೆ ಬರುತ್ತಿದ್ದ ಜನರನ್ನು ಚದುರಲು ಮನವಿ ಮಾಡಲಾಯಿತಂತೆ. ಅಂತಹ ಭಾರೀ ಪ್ರತಿಸ್ಪಂದನೆ ವ್ಯಕ್ತವಾಗಿದೆ. "ಮತ್ತೆ ನಾಜೀವಾದ ಬೇಡ", "ಮತ್ತೆಂದೂ ನರಮೇಧ ನಡೆಯಲು ಬಿಡುವುದಿಲ್ಲ" "ಜರ್ಮನಿಯಲ್ಲಿ ಪ್ರಜಾಪ್ರಭುತ್ವವಿದೆ" ಎಂಬ ಆಕ್ರೋಶಭರಿತ ಘೋಷಣೆಗಳು ಪ್ರದರ್ಶನಗಳಲ್ಲಿ ಕೇಳಿ ಬಂದವು.

ಜರ್ಮನಿಯನ್ನು ಫ್ಯಾಸಿಸ್ಟ್ ನರಕ ಮಾಡಿದ್ದ ಜ್ಯೂ ನರಮೇಧ ಮತ್ತು ಹಿಟ್ಲರನ ಸರ್ವಾಧಿಕಾರದ ವಿರುದ್ಧ ರಾಜಕೀಯ ಪ್ರಜ್ಞೆ ಜರ್ಮನಿಯಲ್ಲಿ ಜಾಗೃತವಾಗಿದ್ದು AfD ಪಕ್ಷವನ್ನು ನಿಷೇಧಿಸಲು ತೀವ್ರ ಒತ್ತಾಯ ಕೇಳಿ ಬಂದಿದೆ. ಈ ಒತ್ತಾಯ ಈ ವರ್ಷ ನಡೆಯಲಿರುವ ಚುನಾವಣೆಗಳ ದೃಷ್ಟಿಯಿಂದ ತುರ್ತು ಪಡೆದಿದೆ. ಯುರೋಪಿಯನ್ ಪಾರ್ಲಿಮೆಂಟರಿ ಚುನಾವಣೆಗೆ ಆರು ತಿಂಗಳಿಗಿಂತಲೂ ಕಡಿಮೆ ಸಮಯವಿದೆ. ಈ ಚುನಾವಣೆಗಳ ಕುರಿತು ನಡೆದ ಅಭಿಪ್ರಾಯ ಸಂಗ್ರಹಗಳಲ್ಲಿ ಹಲವು ತಿಂಗಳುಗಳಿಂದ ಎರಡನೇ ಸ್ಥಾನದಲ್ಲಿದೆ. AfD ಪಕ್ಷ ಸಮೀಕ್ಷೆಗಳಲ್ಲಿ ಸುಮಾರು ಶೇ. 22 ಬೆಂಬಲ ಪಡೆದಿದ್ದು ಸಿಡಿಯು/ಸಿಎಸ್ ಯು (ಕ್ರಿಶ್ಚಿಯನ್ ಡೆಮಾಕ್ರಟಿಕ್ ಯೂನಿಯನ್ ಮತ್ತು ಕ್ರಿಶ್ಚಿಯನ್ ಸೋಷಿಯಲ್ ಯೂನಿಯನ್) ಎಂದು ಕರೆಯಲ್ಪಡುವ ಪಕ್ಷಗಳ ಬಲ–ನಡುಪಂಥೀಯ ಕೂಟದಿಂದ ಕೆಲವೇ ಶೇಕಡಾ ಅಂಶಗಳಲ್ಲಿ ಮಾತ್ರ ಹಿಂದಿದೆ. ಆಡಳಿತ ನಡೆಸುತ್ತಿರುವ ನಡು–ಎಡಪಂಥೀಯ ಕೂಟದ ಬೆಂಬಲದ ರೇಟಿಂಗ್ ಗಳು ಈ ನಡುವೆ ಹೆಚ್ಚಿನ ಜೀವನ ವೆಚ್ಚಗಳು, ಬಜೆಟ್ ಬಿಕ್ಕಟ್ಟು ಮತ್ತು ವಲಸೆಯ ಕುರಿತ ಚರ್ಚೆಯ ಮಧ್ಯೆ ದಾಖಲೆಯ ಕನಿಷ್ಠ ಮಟ್ಟಕ್ಕೆ ಇಳಿದಿವೆ. ಈ ವರ್ಷದ ಸೆಪ್ಟೆಂಬರ್–ನವೆಂಬರ್ ತಿಂಗಳುಗಳಲ್ಲಿ ನಡೆಯಲಿರುವ ಪ್ರಾದೇಶಿಕ ಚುನಾವಣೆಗಳ ಮೊದಲು AfD ಪಕ್ಷವನ್ನು ನಿಷೇಧಿಸಬೇಕೆಂಬ ಒತ್ತಾಯಕ್ಕೆ ತುರ್ತು ಬಂದಿದೆ. ಜರ್ಮನಿಯ ಮೂರು ಪೂರ್ವ ರಾಜ್ಯಗಳಾದ ಬ್ರಾಂಡೆನ್ ಬರ್ಗ್, ಸ್ಯಾಕ್ಸೋನಿ ಮತ್ತು ಥುರಿಂಗಿಯಾ ನಲ್ಲಿ AfD ಪ್ರಬಲ ಪಕ್ಷವಾಗಿ ಹೊಮ್ಮುತ್ತಿದೆ.

ಕರೆಕ್ಟಿವ್ ವರದಿಯಿಂದ ಆಂತರಿಕ ಸಚಿವಾಲಯವು ಆಶ್ಚರ್ಯಗೊಂಡಿದೆಯೇ ಎಂದು ಕೇಳಿದಾಗ, ದೇಶದ ದೇಶೀಯ ಗುಪ್ತಚರ ಈ ವಿಷಯಗಳ ಮೇಲೆ ಕಣ್ಣಿಟ್ಟಿದೆಯೆಂದಷ್ಟೇ ಗೃಹ ಸಚಿವರಾದ ಬ್ರಿಟ್ಟಾ ಬೇಲೇಜ್–ಹರ್ಮನ್ ಹೇಳಿದರು.

ವರದಿಯ ಹಿನ್ನೆಲೆಯಲ್ಲಿ, ಪಾಟ್ಸ್ ಡ್ಯಾಮ್ ನಲ್ಲೇ 1942 ರ ವಾನ್ಸೀ ಸಮ್ಮೇಳನಕ್ಕೆ ಹೋಲಿಕೆಗಳನ್ನು ಮಾಡಲಾಗಿದೆ. ಈ ಸಂದರ್ಭದಲ್ಲಿ ಹಿರಿಯ ನಾಜಿ ಅಧಿಕಾರಿಗಳು ಯಹೂದಿ ಪ್ರಶ್ನೆಗೆ "ಅಂತಿಮ ಪರಿಹಾರವನ್ನು" ರೂಪಿಸಿದ್ದೇ ಆ ಮೇಲಿನ ನರಮೇಧಕ್ಕೆ ಹಾದಿ ಮಾಡಿಕೊಟ್ಟಿದ್ದನ್ನು ಹಲವರು ನೆನಪಿಸಿಕೊಂಡಿದ್ದಾರೆ.

ಜರ್ಮನಿಯ ಪ್ರಮುಖ ಕಾನೂನು ಸಂಸ್ಥೆಗಳು ವರದಿಯಲ್ಲಿ ವಿವರಿಸಿರುವ ಯೋಜನೆಗಳನ್ನು ಬಲವಾಗಿ ಖಂಡಿಸಿವೆ. ನವೆಂಬರ್ ಸಭೆ ಎರಡನೇ ವಾನ್ಸೀ ಸಮ್ಮೇಳನವಾಗಿ ಹೊರಹೊಮ್ಮಬಾರದು ಎಂದು ಎಚ್ಚರಿಸಿದೆ.

"ಇದು ಸಂವಿಧಾನ ಮತ್ತು ಉದಾರವಾದಿ ಸಾಂವಿಧಾನಿಕ ಪ್ರಭುತ್ವದ ಮೇಲಿನ ಆಕ್ರಮಣವಾಗಿದೆ. ;;;; ಸಾಮೂಹಿಕ ಗಡೀಪಾರಿನಂತಹ ದುರುಳ ಕನಸು" ಕಾನೂನುಬದ್ಧ ನ್ಯಾಯಸಮ್ಮತ ಆಗುವುದನ್ನು ಎಲ್ಲಾ

"ಜರ್ಮನಿಗೆ ಪರ್ಯಾಯ" (AfD- Alternative for Germany) ಎಂಬ ಉಗ್ರ ಬಲಪಂಥೀಯ ಅರೆ–ಫ್ಯಾಸಿಸ್ಟ್ ಪಕ್ಷದ ವಿರುದ್ಧದ ಜನವರಿಯ ಮೂರನೇ ವಾರದಲ್ಲಿ ಮತ್ತು 20/21 ವಾರಾಂತ್ಯದಲ್ಲಿ ಜರ್ಮನಿಯ ಹೆಚ್ಚಿನ ಪ್ರಮುಖ ನಗರ/ಪಟ್ಟಣಗಳಲ್ಲಿ ಭಾರೀ ಪ್ರದರ್ಶನಗಳು ನಡೆದವು. AfD ಪಕ್ಷವನ್ನು ನಿಷೇಧಿಸಲು ಈ ಪ್ರದರ್ಶನಗಳಲ್ಲಿ ಒತ್ತಾಯಪಡಿಸಲಾಯಿತು. ಈ ಪ್ರದರ್ಶನಗಳಲ್ಲಿ ಸುಮಾರು 14 ಲಕ್ಷ ಜನ ಭಾಗವಹಿಸಿದ್ದಾರೆಂದು ವರದಿಯಾಗಿದೆ. ಇದು ಜರ್ಮನಿ ಮಾತ್ರವಲ್ಲ ಯುರೋಪಿನಲ್ಲಿ ಎಲ್ಲೆಡೆ ಬಲಗೊಳ್ಳುತ್ತಿರುವ ಅರೆ–ಫ್ಯಾಸಿಸ್ಟ್ ಪಕ್ಷಗಳ ವಿರುದ್ಧದ ಅತ್ಯಂತ ದೊಡ್ಡ ಪ್ರತಿಭಟನೆ, ಪ್ರತಿರೋಧ ಕಾರ್ಯಾಚರಣೆಯಾಗಿತ್ತೆಂದು ಹೇಳಲಾಗಿದೆ.

ಕಾನೂನು ಮತ್ತು ರಾಜಕೀಯ ವಿಧಾನಗಳಿಂದ ತಡೆಯಬೇಕು. """" ಎಂದು ಜರ್ಮನ್ ಅಸೋಸಿಯೇಷನ್ ಆಫ್ ಜಡ್ಜ್ ಮತ್ತು ಜರ್ಮನ್ ಬಾರ್ ಅಸೋಸಿಯೇಷನ್ ಸೇರಿದಂತೆ ಆರು ಸಂಸ್ಥೆಗಳ ಗುಂಪು ಹೇಳಿದೆ.

ಆದಾಗ್ಯೂ, ಜರ್ಮನಿಯ ಸೆಂಟ್ರಲ್ ಕೌನ್ಸಿಲ್ ಆಫ್ ಯಹೂದಿಗಳ ಅಧ್ಯಕ್ಷ ಜೋಸೆಫ್ ಶುಸ್ಟರ್, ವಾನ್ಸೀ ಸಮ್ಮೇಳನದೊಂದಿಗೆ ಹೋಲಿಕೆ ಮಾಡುವಾಗ ಎಚ್ಚರಿಕೆ ವಹಿಸಬೇಕೆಂದರು. "ಒಂದು ಉದ್ಯಮದಂತೆ ನಡೆದ ಯುರೋಪಿಯನ್ ಯಹೂದಿಗಳ ಸಾಮೂಹಿಕ ಹತ್ಯೆ ಇತಿಹಾಸದಲ್ಲಿ ಅದರ ಕಟುಕತನ ಮತ್ತು ಹುಚ್ಚುತನದಲ್ಲಿ ವಿಶಿಷ್ಟವಾಗಿತ್ತು." ಎಂದು ಶುಸ್ಟರ್ ಜರ್ಮನ್ ಸುದ್ದಿ ಸಂಸ್ಥೆ ಡಿ.ಪಿ.ಎ. ಗೆ ತಿಳಿಸಿದರು. "ಆದಾಗ್ಯೂ, ಪಾಟ್ಸ್ ಡ್ಯಾಮ್ ನಲ್ಲಿ ನಡೆದ ಸಭೆಯು ನಮ್ಮ ಪ್ರಜಾಪ್ರಭುತ್ವ ಸಮಾಜದ ಅಡಿಪಾಯಕ್ಕೆ ಮಾರಕವಾದ ಭೀಕರ ಯೋಚನೆ ಎಂಬುದಕ್ಕೆ ಎರಡು ಮಾತಿಲ್ಲ." ಎಂದು ಅವರು ಹೇಳಿದ್ದಾರೆ.

ತಮ್ಮ ಪಾಟ್ಸ್ ಡ್ಯಾಮ್ ಕ್ಷೇತ್ರದಲ್ಲಿ ನಡೆದ ಆರಂಭಿಕ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಸೇರಿದಂತೆ ರಾಜಕಾರಣಿಗಳು ಈ ಉಗ್ರ ಬಲಪಂಥೀಯ ಸಭೆಯ ಯೋಜನೆಯನ್ನು ಖಂಡಿಸಿದರು. "ವಲಸಿಗರನ್ನು ಅಥವಾ ನಾಗರಿಕರನ್ನು ಹೊರಹಾಕುವ ಯಾವುದೇ ಯೋಜನೆಯು, ನಮ್ಮ ಪ್ರಜಾಪ್ರಭುತ್ವದ ಮತ್ತು ನಮ್ಮೆಲ್ಲರ ವಿರುದ್ಧದ ಆಕ್ರಮಣವಾಗಿದೆ." ಅವರು ಹೇಳಿದರು.

ಜರ್ಮನಿಯ ಮೂರು ರಾಜ್ಯಗಳಲ್ಲಿ ಒಜಿಆ ಯನ್ನು "ಬಲ ಉಗ್ರಗಾಮಿ" ಎಂದು ನಿಗದಿಸಲಾಗಿದೆ. ಆದರೆ ಪಕ್ಷವನ್ನು ನಿಷೇಧಿಸಲು ಕಾನೂನು ಅಡಚಣೆ ಅತ್ಯಂತ ಹೆಚ್ಚಾಗಿದೆ. "ಮುಕ್ತ ಪ್ರಜಾಪ್ರಭುತ್ವದ ಮೂಲಭೂತ ವ್ಯವಸ್ಥೆಯನ್ನು ದುರ್ಬಲಗೊಳಿಸಲು ಪ್ರಯತ್ನಿಸುವ" ಪಕ್ಷಗಳನ್ನು ನಿಷೇಧಿಸಲು ಜರ್ಮನಿಯ ಸಂವಿಧಾನವು ಅನುಮತಿಸುತ್ತದೆ. ಮತ್ತು ದೇಶದ ಸಾಂವಿಧಾನಿಕ ನ್ಯಾಯಾಲಯವು ಇದನ್ನು ಎರಡು ಬಾರಿ ಮಾಡಿದೆ.

ನಾಜಿ ಪಕ್ಷದ ಉತ್ತರಾಧಿಕಾರಿಯಾದ ಸೋಷಿಯಲಿಸ್ಟ್ ರೀಚ್ ಪಕ್ಷವನ್ನು 1952 ರಲ್ಲಿ ನಿಷೇಧಿಸಲಾಯಿತು, ಮತ್ತು ಕಮ್ಯುನಿಸ್ಟ್ ಪಾರ್ಟಿ ಆಫ್ ಜರ್ಮನಿಯನ್ನು 1956 ರಲ್ಲಿ ನಿಷೇಧಿಸಲಾಯಿತು. ನಿಷೇಧದ ಸೈದ್ಧಾಂತಿಕ ಮಾನದಂಡಗಳನ್ನು ಪೂರೈಸಿದರೂ, ನವ–ನಾಜಿ ನ್ಯಾಷನಲ್ ಡೆಮಾಕ್ರಟಿಕ್ ಪಾರ್ಟಿ (ಎನ್‌ಪಿಡಿ) ತೀರಾ ದುರ್ಬಲವಾಗಿರುವುದರಿಂದ ನಿಷೇಧಿಸುವ ಅಗತ್ಯವಿಲ್ಲ ಎಂದು 2017 ರಲ್ಲಿ ಸಾಂವಿಧಾನಿಕ ನ್ಯಾಯಾಲಯ ತೀರ್ಪು ನೀಡಿತು.

ಆಂತರಿಕ ಸಚಿವ ನ್ಯಾನ್ಸಿ ಫೇಸರ್ ಕಳೆದ ವಾರ, ಆದಾಗ್ಯೂ, ಈ "ಸಾಂವಿಧಾನಿಕ ಕೊನೆಯ ಉಪಾಯ" ಗೆ ಅಡೆತಡೆಗಳು ಹೆಚ್ಚಾಗಿದ್ದರೂ ಸಹ, "AfD ಯನ್ನು ನಿಷೇಧಿಸುವ ಕ್ರಮವನ್ನು ತಳ್ಳಿಹಾಕುವುದಿಲ್ಲ" ಎಂದು ಹೇಳಿದರು. ಆದಾಗ್ಯೂ, ನ್ಯಾಯ ಮಂತ್ರಿ ಮಾರ್ಕೊ ಬುಶ್ಮನ್ ಅಂತಹ ನಿಷೇಧ ವಿಚಾರಣೆಯ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ.

ಶೇಕಡಾ 100 ಖಚಿತವಿದ್ದರೆ ಮಾತ್ರ ಈ ಕ್ರಮವನ್ನು ಕೈಗೊಳ್ಳಬೇಕು. ಏಕೆಂದರೆ, ಈ ಕಾರ್ಯಾಚರಣೆ ಸಾಂವಿಧಾನಿಕ ನ್ಯಾಯಾಲಯದ ಮುಂದೆ ವಿಫಲವಾದರೆ, ಅದು AfD ಭಾರಿ ಸಾರ್ವಜನಿಕ ಪ್ರಚಾರದ ಜಯವಾಗುತ್ತದೆ" ಎಂದು ಬುಶ್ಮನ್ ಹೇಳಿದರು.

ಇಂತಹ ವಿಷಯಗಳಲ್ಲಿ ಸಾಮಾನ್ಯವಾಗಿ ಮೌನವಹಿಸುವ ಜರ್ಮನಿಯ ಪ್ರಮುಖ ಸಿಇಒಗಳೂ ಪರಿಸ್ಥಿತಿಯ ಗಂಭೀರತೆ ತಿಳಿದು ಮಾತಾಡ ಹತ್ತಿದ್ದಾರೆ. ಡಸೆಲ್ಡಾರ್ಫ್ ವಿಮಾನ ನಿಲ್ದಾಣದ ಸಿಇಒ ಲಾರ್ಸ್ ರೆಡೆಲಿಗ್ಸ್ "ಸಂವಿಧಾನಕ್ಕೆ ಅಪಾಯಕಾರಿಯಾದ ಈ ಆಲೋಚನೆಗಳು ಜರ್ಮನಿಗೆ ಆರ್ಥಿಕ ಸ್ಥಳವಾಗಿ ವಿಷವಾಗಿದೆ. ಇದು ನಮ್ಮ ಶಾಂತಿಯುತ ಸಹಬಾಳ್ವೆಗೆ ಬೆದರಿಕೆ ಹಾಕುತ್ತದೆ, ಅದು ನಮ್ಮ ಸಮೃದ್ಧಿಗೆ ಧಕ್ಕೆ ತರುತ್ತದೆ ಮತ್ತು ಜಗತ್ತಿಗೆ ಮಾರಕ ಸಂದೇಶವನ್ನು ಕಳುಹಿಸುತ್ತದೆ." ಎಂದು ಹೇಳಿದ್ದಾರೆ.

ವಯಸ್ಸಾದ ಜನಸಂಖ್ಯೆ ಮತ್ತು ದೇಶೀಯ ನುರಿತ ಕಾರ್ಮಿಕರ ಕೊರತೆಯಿರುವ ಸಮಯದಲ್ಲಿ ವಿದೇಶಿ ಹೂಡಿಕೆ ಮತ್ತು ನುರಿತ ಕೆಲಸಗಾರರಿಗೆ ಆಕರ್ಷಕ ತಾಣವಾಗಿ ಜರ್ಮನಿಯ ಚಿತ್ರಣವನ್ನು ಇದು ಅಪಾಯಕ್ಕೆ ಸಿಲುಕಿಸುತ್ತದೆ ಮತ್ತು ಜರ್ಮನಿಯ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂಬ ಕಳವಳವನ್ನು ಇದು ಆಳುವವರಲ್ಲೂ ಹೆಚ್ಚಿಸಿದೆ

ಪಕ್ಷವನ್ನು ನಿಷೇಧಿಸುವುದು "ಪ್ರಜಾಪ್ರಭುತ್ವ ವಿರೋಧಿ" ಎಂದು AfD ಹೇಳಿದೆ. "ಕರೆಕ್ಟಿವ್ ವರದಿಯ ನಂತರ, ಪಕ್ಷದ ಸಹ–ನಾಯಕ ಆಲಿಸ್ ವೀಡೆಲ್ "ಕರೆಕ್ಟಿವ್ ಸಿಬ್ಬಂದಿ ಖಾಸಗಿತನದ ಹಕ್ಕುಗಳನ್ನು ಕಡೆಗಣಿಸಿ, ರಹಸ್ಯ ಸೇವಾ ವಿಧಾನಗಳನ್ನು ಬಳಸಿ ಖಾಸಗಿ ಸಭೆಯಲ್ಲಿ ಒಳನುಸುಳಿ ಬೇಹುಗಾರಿಕೆ ನಡೆಸಿದ್ದಾರೆ." ಎಂದು ಆರೋಪಿಸಿದರು. ಆದರೆ ಅವರು ಕರೆಕ್ಟಿವ್ ವರದಿಯನ್ನು ನಿರಾಕರಿಸಿಲ್ಲ!



ಸುಮಾರು ಆರು ದಶಕಗಳಲ್ಲಿ ಮೊದಲ ಬಾರಿಗೆ ಉಗ್ರ ಬಲಪಂಥೀಯ ಪಕ್ಷವು ಸಂಸತ್ತನ್ನು ಪ್ರವೇಶಿಸಿದಾಗ 2017 ಮತ್ತು 2018 ರಲ್ಲಿ AfD ವಿರುದ್ಧದ ದೊಡ್ಡ ಪ್ರದರ್ಶನಗಳು ಕಂಡು ಬಂದವು, ಫೆ.20/21ರ ಪ್ರತಿರೋಧದ ಮುಂದೆ ಆ ಪ್ರತಿಭಟನೆಗಳು ಚಿಕ್ಕದಾಗಿದ್ದವು.

ಸಾಮ್ರಾಜ್ಯಶಾಹಿಯ ಬಗ್ಗೆ.......

ಪುಟ 13 ರಿಂದ

ಒಂದು ಹೊಸ ದಾರಿಯನ್ನೇ ಒದಗಿಸಿತು. ಬಂಡವಾಳಶಾಹಿಯ ಚಾರಿತ್ರಿಕ ಅಳಿವು, ಕಿತ್ತೆಸೆಯಲ್ಪಡಲು ಪಕ್ವವಾಗುವುದು ಯಾವುದೇ ಆರ್ಥಿಕ ಬಿಕ್ಕಟ್ಟಿನಲ್ಲಿ ಪ್ರಕಟವಾಗುವದಿಲ್ಲ. ಬದಲಿಗೆ, ಬಂಡವಾಳಶಾಹಿಯು ಮಾನವ ಸಮಾಜವನ್ನು ವಿನಾಶಕಾರಿ ಯುದ್ಧಗಳಲ್ಲಿ ಮುಳುಗಿಸುವ, ಈ ಯುದ್ಧಗಳಲ್ಲಿ ಒಂದು ದೇಶದ ಕಾರ್ಮಿಕರು ಮತ್ತೊಂದು ದೇಶದ ಕಾರ್ಮಿಕರಿಗೆ ಎದುರಾಳಿಯಾಗಿ ಯುದ್ಧಕಂದಕಗಳೊಳಗೆ ಕೂರುವಂತೆ ಮಾಡುವ ಹಂತವನ್ನು ಪ್ರವೇಶಿಸಿದೆ ಎಂಬುದರಲ್ಲಿ ಪ್ರಕಟವಾಗುತ್ತದೆ. ಇದು ಸಂಭವಿಸಿದಾಗ, ಸಾಮ್ರಾಜ್ಯಶಾಹಿ ಯುದ್ಧವನ್ನು ಅಂತರ್ಯುದ್ಧಗಳಾಗಿ ಪರಿವರ್ತಿಸುವ, ತಮ್ಮ ಬಂದೂಕುಗಳನ್ನು ಎದುರಾಳಿ ಕಂದಕಗಳಲ್ಲಿರುವ ಸಹ ಕಾರ್ಮಿಕರ ಮೇಲಿಂದ, ಪ್ರತಿ ದೇಶದ ಬಂಡವಾಳಶಾಹಿಗಳ ವಿರುದ್ಧ ತಿರುಗಿಸಬೇಕಾದ ಸಮಯ ಬಂದಿತ್ತು ಎಂದರ್ಥ.

ಕ್ರಾಂತಿಯ ಗುರಿ ಸಮಾಜವಾದವೇ

ನಾಲ್ಕನೆಯದಾಗಿ, ಕ್ರಾಂತಿಗಳು ಎಲ್ಲಿ ಸಂಭವಿಸಿದರೂ ಅವುಗಳ ಗುರಿಯೀಗ ಸಮಾಜವಾದವೇ ಆಗಿರುತ್ತದೆ. ಬಂಡವಾಳಶಾಹಿಗೆ ತಡವಾಗಿ ಹೊರಳಿದ ದೇಶಗಳಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುಂದೊಯ್ಯುವ ಕಾರ್ಯವನ್ನು ಐತಿಹಾಸಿಕವಾಗಿ ಕ್ರಾಂತಿದೂತನ ಪಾತ್ರ ವಹಿಸಿದ ಬೂರ್ಜ್ವಾಗಳು ನಿರ್ವಹಿಸುವುದಿಲ್ಲ ಎಂಬ ವಿಚಾರವು ಅದಾಗಲೇ ಲೆನಿನ್ ಅವರ 'ಸಾಮಾಜಿಕ ಪ್ರಜಾಪ್ರಭುತ್ವದ ಎರಡು ಕಾರ್ಯತಂತ್ರಗಳು' ಎಂಬ ಕೃತಿಯಲ್ಲಿ ಕಾಣಿಸಿಕೊಂಡಿದ್ದವು: ಅಂತಹ ಸಮಾಜಗಳಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುಂದೊಯ್ಯುವ ಕಾರ್ಯಭಾರವನ್ನು ಕಾರ್ಮಿಕ ವರ್ಗವು ಹೊರಬೇಕಾಗುತ್ತದೆ. ಈ ಕಾರ್ಯ ಸಾಧನೆಗಾಗಿ ಕಾರ್ಮಿಕ ವರ್ಗವು ರೈತಾಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾಗುತ್ತದೆ. ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಮುನ್ನಡೆಸುವ ಈ ಮೈತ್ರಿಯು ಅಲ್ಲಿಗೇ ನಿಲ್ಲುವುದಿಲ್ಲ. ಅದು ಸಮಾಜವಾದವನ್ನು ನಿರ್ಮಿಸುವತ್ತ ಸಾಗುತ್ತದೆ. ಕ್ರಾಂತಿಯ ಈ ದೃಷ್ಟಿಕೋನವು, ಅಂಚಿನಲ್ಲಿರುವ ಸಮಾಜಗಳಲ್ಲಿ ಆರಂಭದಲ್ಲಿ ಸಾಮ್ರಾಜ್ಯಶಾಹಿಯ ವಿರುದ್ಧವಾಗಿ ನಿಂತ ಕಾರ್ಮಿಕರ ಮತ್ತು ರೈತರ ವಿಶಾಲ ವರ್ಗ ಮೈತ್ರಿಯು ನಂತರದಲ್ಲಿ ಸಮಾಜವಾದಿ ಹಂತದತ್ತ ಸಾಗುವುದು ಒಂದು ಸಾಮಾನ್ಯ ವಿದ್ಯಮಾನವಾಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಮಾಜವಾದವನ್ನು ನಿರ್ಮಿಸುವ ಕಾರ್ಯವು ಮುಂದುವರಿದ ದೇಶದ ಕಾರ್ಮಿಕರ ಕಾಳಜಿಯಾಗಿ ಮಾತ್ರ ಉಳಿದಿಲ್ಲ. ಹಂತ ಹಂತವಾಗಿ ಸಾಧಿಸಬೇಕಾದ ಈ ಕಾರ್ಯವು ಎಲ್ಲಾ ಸಮಾಜಗಳ ಕಾರ್ಯಸೂಚಿಗೆ ಬಂದಿರುತ್ತದೆ.

ಅಂತಿಮವಾಗಿ, ಒಂದು ಮೂಲಭೂತ ಪ್ರಶ್ನೆ ಹುಟ್ಟಿಕೊಂಡಿತು: ಮಹಾಯುದ್ಧದ ಸಮಯದಲ್ಲಿ 'ಎರಡನೇ ಅಂತಾರಾಷ್ಟ್ರೀಯ'ದ ಅನೇಕ ನಾಯಕರು ಸಮಯಸಾಧಕ ಅಥವಾ ಮುಲಾಜಿಲ್ಲದೆ ಸಾಮಾಜಿಕ ಸಂಕುಚಿತವಾದಿ ನಿಲುವುಗಳನ್ನು ಅಳವಡಿಸಿಕೊಳ್ಳುವ ಮಟ್ಟಿಗೆ ಯುರೋಪಿನ ಕಾರ್ಮಿಕ ವರ್ಗದ ಚಳುವಳಿಯಲ್ಲಿ "ಸುಧಾರಣಾವಾದ"ದ ಅಂತಹ ಬೆಳವಣಿಗೆ ಏಕೆ ಕಂಡುಬಂದಿತು? ಲೆನಿನ್ ಈ ಪ್ರಶ್ನೆಗೆ ಉತ್ತರವನ್ನು, ಎಂಗೆಲ್ಸ್ ಅವರು ಹಿಂದೊಮ್ಮೆ ವ್ಯಕ್ತಪಡಿಸಿದ ಅಭಿಪ್ರಾಯದ ಆಧಾರದ ಮೇಲೆ, ಅಂದರೆ ಸಾಮ್ರಾಜ್ಯದ ಸೂಪರ್–ಲಾಭಗಳಿಂದ "ಲಂಚ" ಪಡೆದ "ಕಾರ್ಮಿಕರಲ್ಲಿನ ಶ್ರೀಮಂತ ವರ್ಗ"ದ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸುವ ಮೂಲಕ ನೀಡಿದರು.

ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನ್ ಅವರ ಪ್ರತಿಪಾದನೆಯು ಒಂದು ಅದ್ಭುತವಾದ ಸೈದ್ಧಾಂತಿಕ ಸಾಧನೆಯಾಗಿತ್ತು. ಮಾರ್ಕ್ಸ್‌ವಾದದ ಬಲ ಅಡಗಿರುವುದು ಅದು ಸತ್ಯ ಎಂಬುದರಲ್ಲಿ ಎಂದು ಲೆನಿನ್ ಒಂದೊಮ್ಮೆ ಟಿಪ್ಪಣಿಮಾಡಿದ್ದರು. ಸಾಮ್ರಾಜ್ಯಶಾಹಿಯ ಕುರಿತು ಲೆನಿನ್ ಪ್ರತಿಪಾದಿಸಿದ ಸಿದ್ಧಾಂತದ ಬಗ್ಗೆಯೂ ಹೀಗೆಯೇ ಹೇಳಬಹುದು. ಲೆನಿನ್ ಅವರ ಗಮನಾರ್ಹವಾದ ಮತ್ತು ಅದ್ಭುತವಾದ ಸೈದ್ಧಾಂತಿಕ ಸಾಧನೆಯು ಹೊಸ ಸಂಧಿಕಾಲದಲ್ಲಿ ಉದ್ಭವಿಸಿದ ಮತ್ತು ಉತ್ತರಗಳಿಗಾಗಿ ತಳಮಳಿಸುತ್ತಿದ್ದ ಎಲ್ಲ ಪ್ರಶ್ನೆಗಳಿಗೆ ಕಣ್ಣು ಕೋರೈಸುವ ಮಟ್ಟದ ಉತ್ತರಗಳನ್ನು ಒದಗಿಸಿತು. ಲೆನಿನ್ ಅವರ ವಾದದ ಕೆಲವೊಂದು ವಿವರಗಳ ಬಗ್ಗೆ ಜಗಳ ಇರಬಹುದು. ಆದರೆ, ಒಟ್ಟಾರೆಯಾಗಿ ಅದು ದೊಡ್ಡ ಪ್ರಮಾಣದಲ್ಲಿ ಸರಿಯಾಗಿಯೇ ಇದೆ. 1914 ಮತ್ತು 1939ರ ನಡುವಿನ ಅವಧಿಯ ವಿಶ್ವ ವಿದ್ಯಮಾನಗಳು ಅದು ಸುಮಾರಾಗಿ ಅದು ನಿರೀಕ್ಷಿಸಿದ ರೀತಿಯಲ್ಲೇ ಜರುಗಿವೆ ಎಂಬ ವಿಲಕ್ಷಣ ಸಂಗತಿಯೇ ಅದು ಸರಿಯಾಗಿದೆ ಎಂಬುದನ್ನು ಸೂಚಿಸಿದೆ.

ಈಗಲೂ ಮಾನ್ಯ

ಸಾಮ್ರಾಜ್ಯಶಾಹಿಯ ಬಗ್ಗೆ ಲೆನಿನ್ ಏನನ್ನು ಬರೆದರೊ ಅದರಿಂದ ಜಗತ್ತು ಇಂದು ಬಹುದೂರ ಸಾಗಿ ಬಂದಿದೆ. ಈ ವ್ಯತ್ಯಾಸದ ಒಂದು ಪ್ರಮುಖ ಲಕ್ಷಣವೆಂದರೆ, ಬಂಡವಾಳದ ಕೇಂದ್ರೀಕರಣವು ಲೆನಿನ್ ಅವರ ಕಾಲದಲ್ಲಿದ್ದುದಕ್ಕಿಂತ ಬಹಳಷ್ಟು ಮುಂದೆ ಹೋಗಿದೆ. ಆಗ ಪ್ರಬಲವಾಗಿದ್ದ ರಾಷ್ಟ್ರೀಯ ಹಣಕಾಸು ಬಂಡವಾಳ ಗಳ ಸ್ಥಾನದಲ್ಲಿ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳ ವನ್ನು ಹುಟ್ಟುಹಾಕಿದೆ. ಪರಿಣಾಮವಾಗಿ ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಗಳ ಸದ್ದಿಲ್ಲದಂತಾಗಿವೆ. ಏಕೆಂದರೆ, ವಿಶ್ವವು ಪ್ರಭಾವ ವಲಯಗಳಾಗಿ ವಿಭಜನೆಗೊಳ್ಳಬಾರದು, ಬದಲಾಗಿ, ತನ್ನ ಅನಿಯಂತ್ರಿತ ಚಲನೆಗಾಗಿ ಒಂದು ಅವಿಭಜಿತ ವಿಶ್ವ ಇರಬೇಕು ಎಂಬುದು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಬಯಕೆ. ಹಾಗಾಗಿ, ಅಂತರ್–ಸಾಮ್ರಾಜ್ಯಶಾಹಿ ಪೈಪೋಟಿಯಿಂದ ಉಂಟಾಗುವ ಯುದ್ಧಗಳ ಪ್ರಶ್ನೆ ಇನ್ನು ಮುಂದೆ ಉದ್ಭವಿಸುವುದಿಲ್ಲ.

ಆದರೆ, ಯುದ್ಧಗಳ ಪ್ರಶ್ನೆ ಇನ್ನು ಮುಂದೆ ಉದ್ಭವಿಸುವುದಿಲ್ಲ ಎಂದ ಮಾತ್ರಕ್ಕೆ ಈಗ ಶಾಂತಿಯ ಯುಗ ಉದಯವಾಗಿದೆ ಎಂದಲ್ಲ. ಆರ್ಥಿಕ ಸ್ವಾತಂತ್ರ್ಯ ಮತ್ತು ಆರ್ಥಿಕ (ಆಹಾರ ಸೇರಿದಂತೆ) ಸ್ವಾವಲಂಬನೆಗಾಗಿ ಮೂರನೆಯ ಜಗತ್ತಿನ ಎಲ್ಲಾ ರಾಷ್ಟ್ರೀಯ ಪ್ರಯತ್ನಗಳ ವಿರುದ್ಧ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ನಿರಂತರ ಆಕ್ರಮಣವು ಸ್ಥಳೀಯ ತಿಕ್ಕಾಟಗಳ ಒಂದು ಅಲೆಯನ್ನೇ ತಂದಿದೆ. ಅದು ಸಂಯುಕ್ತ ಸಾಮ್ರಾಜ್ಯಶಾಹಿಯನ್ನು ನಿರ್ದಿಷ್ಟ ದೇಶಗಳಿಗೆ ಎದುರಾಗಿ ನಿಲ್ಲಿಸಿದೆ. ಅದೇ ಸಮಯದಲ್ಲಿ, ಮೂರನೇ ಜಗತ್ತಿನ ದುಡಿಮೆಗಾರರ ಶೋಷಣೆಯು ತೀವ್ರಗೊಂಡಿದೆ. ಇಲ್ಲಿನ ಕಾರ್ಪೊರೇಟ್–ಹಣಕಾಸು ಕೂಟವು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದೊಂದಿಗೆ ಕೈಜೋಡಿಸಿದೆ. ಪರಿಣಾಮವಾಗಿ, ಮೂರನೇ ಜಗತ್ತಿನ ದೇಶಗಳೊಳಗೆ ಅಸಮಾನತೆಯು ಬೃಹತ್ತಾಗಿ ಬೆಳದಿದೆ. ಪೌಷ್ಟಿಕತೆಯ ದೃಷ್ಟಿಯಲ್ಲಿ, ಬಹು ದೊಡ್ಡ ಸಂಖ್ಯೆಯ ಜನರು ಕಡು ಬಡತನದಲ್ಲಿದ್ದಾರೆ. ಅದೇ ಸಮಯದಲ್ಲಿ, ಜಾಗತಿಕ ದಕ್ಷಿಣದ ದೇಶಗಳಿಗೆ ತನ್ನ ಚಟುವಟಿಕೆಗಳನ್ನು ಸ್ಥಳಾಂತರಿಸಲು ಮೆಟ್ರೋಪಾಲಿಟನ್ ಬಂಡವಾಳವು ಇಚ್ಛಿಸುತ್ತದೆ. ಈ ವಿದ್ಯಮಾನವು ಮೆಟ್ರೋಪಾಲಿಟನ್ ದೇಶಗಳ ಟ್ರೇಡ್ ಯೂನಿಯನ್‌ಗಳನ್ನು ದುರ್ಬಲಗೊಳಿಸಿದೆ ಮತ್ತು ಮೆಟ್ರೋಪಾಲಿಟನ್ ದೇಶಗಳೊಳಗೆ ಅಸಮಾನತೆಯ ಹೆಚ್ಚಳಕ್ಕೆ ಕಾರಣವಾಗಿದೆ. ನವ–ಉದಾರವಾದಿ ವ್ಯವಸ್ಥೆಯ ಮೂಲಕ ವ್ಯಕ್ತಗೊಳ್ಳುವ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಪ್ರಾಬಲ್ಯವು ವಿಶ್ವದ ದುಡಿಯುವ ಜನರ ಸ್ಥಿತಿ–ಗತಿಗಳನ್ನು ಹೋಲಿಕೆಯಲ್ಲಿ ಮತ್ತು ನಿಚ್ಚಳವಾಗಿಯೂ ಹದಗೆಡಿಸಿದೆ.

ಈ ವಿದ್ಯಮಾನವು ನವ–ಉದಾರವಾದಿ ಜಾಗತಿಕ ವ್ಯವಸ್ಥೆಯಲ್ಲಿ ಅತಿ–ಉತ್ಪಾದನೆಯ ಬಿಕ್ಕಟ್ಟನ್ನು ಹುಟ್ಟುಹಾಕಿದೆ. ಅದಕ್ಕೆ ನವ–ಉದಾರವಾದಿ ವ್ಯವಸ್ಥೆಯೊಳಗೆ ಪರಿಹಾರವೇನೂ ಇಲ್ಲ. ಈ ಬಿಕ್ಕಟ್ಟು ವಿಶ್ವಾದ್ಯಂತ ಫ್ಯಾಸಿಸಂ ಮತ್ತು ನವ–ಫ್ಯಾಸಿಸಂ ವೇಗವಾಗಿ ಬೆಳೆಯಲು ಕಾರಣವಾಗಿದೆ. ವಿವಿಧ ದೇಶಗಳಲ್ಲಿನ ಕಾರ್ಪೊರೇಟ್–ಹಣಕಾಸು ಕೂಟಗಳು ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಫ್ಯಾಸಿಸ್ಟ್–ಮಾದರಿ ಗುಂಪುಗಳೊಂದಿಗೆ ಮೈತ್ರಿ ಮಾಡಿಕೊಳ್ಳುತ್ತಿದ್ದಾರೆ. ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಹೋರಾಟ, ನಿರುದ್ಯೋಗದ ವಿರುದ್ಧದ ಹೋರಾಟ ಮತ್ತು ನಾಗರಿಕ ಸ್ವಾತಂತ್ರ್ಯಗಳಿಗಾಗಿ ನಡೆಯುವ ಹೋರಾಟಗಳು ಮುಂಚೂಣಿಗೆ ಬಂದಿವೆ. ಈ ಹೋರಾಟವು ಸಮಾಜವಾದಕ್ಕಾಗಿ ನಡೆಯುವ ಹೋರಾಟದೊಂದಿಗೆ ಸಂಬಂಧ ಹೊಂದಿದೆ. ಲೆನಿನ್ ಕ್ರಾಂತಿಕಾರಕಗೊಳಿಸಿದ ವಿಶ್ವ ಕ್ರಾಂತಿಯ ಕಣ್ಣೋಟವು ಈಗಲೂ ಮಾನ್ಯವಾಗಿಯೇ ಉಳಿದಿದೆ. ಆದರೆ ಕ್ರಾಂತಿಯ ತಕ್ಷಣದ ಗಮನ ಸಮಯದೊಂದಿಗೆ ಬದಲಾಗಿದೆ.

'ಅಗ್ನಿಪಥ್' ಯೋಜನೆ........

ಪುಟ 11 ರಿಂದ

ಪಡೆಯುವುದಿಲ್ಲ ಹಾಗೂ ಯೋಜನೆಯ ಮೂಲಕ ದಾಖಲಾತಿ ಮಾಡಿಕೊಳ್ಳುವುದು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವಂತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಅತೃಪ್ತ ಸಶಸ್ತ್ರ ಪಡೆಗಳ ಆಕಾಂಕ್ಷಿಗಳು ಅಗ್ನಿಪಥ್ ರಕ್ಷಣಾ ನೇಮಕಾತಿ ಯೋಜನೆಯ ವಿರುದ್ಧ ಬೀದಿಗಿಳಿದ ಕಾರಣ ಭಾರತದ ಬಹು ಭಾಗಗಳಲ್ಲಿ ಗಲಭೆಗಳು ಕೆರಳಿದವು. ರೈಲುಗಳಿಗೆ ಬೆಂಕಿ ಇಟ್ಟರು. ಕೋಪಗೊಂಡ ಜನಸಮೂಹವು ಇಟ್ಟಿಗೆ, ಬ್ಯಾಟ್‌ಗಳು ಮತ್ತು ಕಲ್ಲುಗಳಿಂದ ಶಸ್ತ್ರಸಜ್ಜಿತವಾದ ರೈಲ್ವೇ ಮಾರ್ಗಗಳು ಮತ್ತು ಹೆದ್ದಾರಿಗಳಾದ್ಯಂತ ನುಗ್ಗಿತು. ಅಗ್ನಿಸ್ಪರ್ಶದ ವರದಿಗಳನ್ನು ಒಳಗೊಂಡಿರುವ ಪರಿಣಾಮವಾಗಿ ಹಿಂಸಾಚಾರವು ಹಲವಾರು ರಾಜ್ಯಗಳಾದ್ಯಂತ 600 ಕ್ಕೂ ಹೆಚ್ಚು ರೈಲುಗಳ ಮೇಲೆ ಪರಿಣಾಮ ಬೀರಿತು. ಅಗ್ನಿಪಥ್ ಯೋಜನೆಗೆ ಈ ಪ್ರತಿರೋಧದ ಹೊರತಾಗಿಯೂ, ನೇಮಕಾತಿ ಪ್ರಕ್ರಿಯೆ ನಡೆಯಿತು. ನಂತರ, ಸರ್ಕಾರವು ನೇಮಕಾತಿಗಾಗಿ 21 ಇದ್ದ ಗರಿಷ್ಠ ವಯಸ್ಸಿನ ಮಿತಿಯನ್ನು 23 ವರ್ಷಗಳಿಗೆ ಏರಿಸಿತು. ಆದರೂ, ಸೇನೆಗೆ ಸೇರಲು ಬಯಸುವ ಯುವಜನರ ಆಕ್ರೋಶಗಳು ಇಂದಿಗೂ ಇವೆ.

ಈ ಯೋಜನೆಯನ್ನು ಪ್ರಶ್ನಿಸಿ ಕೆಲವರು ನ್ಯಾಯಾಲಯದ ಮೊರೆ ಹೋದರು. ಅಗ್ನಿಪಥ್ ಯೋಜನೆಯನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟ್ ನಲ್ಲಿ ಸಲ್ಲಿಸಲಾದ ಅರ್ಜಿಗೆ 2022ರ ಡಿಸೆಂಬರ್ ನಲ್ಲಿ ಸರ್ಕಾರ ಹೇಳಿದ್ದು ಹೀಗೆ: "ರಾಷ್ಟ್ರೀಯ ಭದ್ರತೆ ಮತ್ತು ರಕ್ಷಣೆಯನ್ನು ಹೆಚ್ಚು "ಬಲವಾದ, "ತೂರಲಾಗದ" ಮತ್ತು "ಬದಲಾಗುತ್ತಿರುವ ಮಿಲಿಟರಿ ಅಗತ್ಯತೆಗಳೊಂದಿಗೆ" ತನ್ನ ಸಾರ್ವಭೌಮ ಕಾರ್ಯದ ವ್ಯಾಯಾಮದಲ್ಲಿ ಅಗ್ನಿಪಥ್ ಯೋಜನೆಯನ್ನು ಪರಿಚಯಿಸಲಾಗಿದೆ."

ನಿರುದ್ಯೋಗಿಗಳಾಗುವ 'ಅಗ್ನಿವೀರ'ರು

ಅಗ್ನಿಪಥ್ ಮೂಲಕ ಆಯ್ಕೆಯಾಗಿ, ನಾಲ್ಕು ವರ್ಷಗಳ ತರಬೇತಿ ಮತ್ತು ಸೇವೆಯ ನಂತರ, ಶೇ.75 ರಷ್ಟು ಯುವಜನರು 'ಅಗ್ನಿವೀರ್' ಎಂಬ ಪ್ರಮಾಣಪತ್ರದೊಂದಿಗೆ ಕಡ್ಡಾಯವಾಗಿ ನಿವೃತ್ತರಾಗುತ್ತಾರೆ. ನಂತರ ತಮ್ಮ 22 ಅಥವಾ 25 ನೇ ವಯಸ್ಸಿಗೆ ನಿರುದ್ಯೋಗಿಗಳಾಗಿ, ಸರ್ಕಾರ ಕೊಡುವ 'ಅಗ್ನಿವೀರ್' ಎಂಬ ಪ್ರಮಾಣಪತ್ರ ಹಿಡಿದು ಮತ್ತೆ ಉದ್ಯೋಗ ಹುಡುಕುತ್ತಾ ಅಲೆಯಬೇಕಾಗುತ್ತದೆ. ಇವರು ಮತ್ತೆ ಬೃಹತ್ ಸಂಖ್ಯೆಯ ನಿರುದ್ಯೋಗಿಗಳ ಗುಂಪಿಗೆ ತಳ್ಳಲ್ಪಡುತ್ತಾರೆ. ಅಗ್ನಿವೀರರಿಗೆ ಕೆಲವು ಸಾರ್ವಜನಿಕ ವಲಯ ಮತ್ತು ಕೇಂದ್ರ ಪೊಲೀಸ್ ಹುದ್ದೆಗಳನ್ನು ಮೀಸಲಿಡುವುದಾಗಿ ಸರ್ಕಾರ ಭರವಸೆ ನೀಡಿದೆ. ಆದಾಗ್ಯೂ, ಪ್ರಸ್ತುತ ಈ ಕ್ಷೇತ್ರಗಳಲ್ಲಿ ಉದ್ಯೋಗ ನೇಮಕಾತಿ ಸಂಖ್ಯೆಗಳು ಸಾಕಷ್ಟಿಲ್ಲ. ಸರ್ಕಾರ ಎಲ್ಲವನ್ನೂ ಖಾಸಗೀಕರಣ ಮಾಡುವ ಗುರಿಯೊಂದಿಗೆ ಮುನ್ನುಗ್ಗುತ್ತಿರುವಾಗ ಭವಿಷ್ಯದಲ್ಲಿ ನಿರೀಕ್ಷಿತ ಹೆಚ್ಚಿನ ಸರ್ಕಾರಿ ಉದ್ಯೋಗ ಸೃಷ್ಟಿಯ ಭರವಸೆಯೂ ಇಲ್ಲ. ಉದ್ಯೋಗಗಳ ಸಂಖ್ಯೆಗಳನ್ನು ಬಿಡಿ, ಮತ್ತು ಬಜೆಟ್ ನಿರ್ಬಂಧಗಳು ನೇಮಕಾತಿ ಸ್ಥಗಿತಗೊಳಿಸುವಿಕೆಯನ್ನು ಒತ್ತಾಯಿಸಿದರೆ ಉದ್ಯೋಗಗಳು ಕಡಿಮೆಯಾಗುವ ಸಾಧ್ಯತೆಗಳಿವೆ. ಕಾರ್ಪೊರೇಟ್ ವಲಯ ಮತ್ತು ಶಿಕ್ಷಣ ಸಂಸ್ಥೆಗಳು ಕೆಲವು ನೇಮಕಾತಿಗಳನ್ನು ಮಾಡಿಕೊಳ್ಳುತ್ತವೆಯಾದರೂ, ಅಂತಹ ಉದ್ಯೋಗಗಳು ಖಾತರಿಯಿಂದ ದೂರವಿರುತ್ತವೆ.

ಮತ್ತೆ ಕೆಲವರ ಪ್ರಕಾರ ಈ ಯೋಜನೆಯು ದೇಶದಲ್ಲಿ ಹೊಸದಾಗಿ ಹುಟ್ಟಿದ ಖಾಸಗಿ ರಕ್ಷಣಾ ಉದ್ಯಮದ ಬೊಕ್ಕಸವನ್ನು ಕೊಬ್ಬಿಸುವ ತಂತ್ರವಾಗಿದೆ. ಅಗ್ನಿವೀರ್ ಗಳಿಗೆ ನಮ್ಮ ಮಿಲಿಟರಿ ಸಶಸ್ತ್ರ ತರಬೇತಿ ಕೊಟ್ಟು, ಈ ಖಾಸಗಿ ರಕ್ಷಣಾ ಉದ್ಯಮಗಳ ರಕ್ಷಣಾ ಸಿಬ್ಬಂದಿಗಳನ್ನಾಗಿ ಮಾಡುವ ತಂತ್ರ ಇದರಲ್ಲಿ ಅಡಗಿದೆ ಎನ್ನುತ್ತಾರೆ ಅವರು.

NEW No. MAG(3)/NPP/205/2021-2022
JANASHAKTHI KANNADA VARA PATRIKE January 29-February 4, 2024 Price: Rs. 10/- Date of Publication: 26 January 2024 RNI No. KARKAN /2006/17926 Posted on 31-01-2024
Posted at BG PSO, BG - 560026 **Posted at Periodical Rate -** Rs. 2



‘ಸೌಹಾರ್ದ ಕರ್ನಾಟಕ’ ವಿಶೇಷ ಸ್ಪರ್ಧೆಯಲ್ಲಿ ಸೌಹಾರ್ದ ಸಾರಿದ ಗೀತ ಗಾಯನ:

ಕೆ.ಎಸ್.ವಿಮಲಾ

“ಇಂದಿಲ್ಲಿ ಬಂದು ನಾನು ಹಾಡಿದೆ, ನನಗಿರುವ ಆಸೆ ನಾನು ಸಂಗೀತದ ಟೀಚರ್ ಆಗಬೇಕು. ಆ ಕಾರಣದಿಂದಲೇ ನಾನು ಹಾಡು ಕಲಿಯಲು ಆಸೆ ಪಡುತ್ತೇನೆ. ಇಲ್ಲಿಂದು ಸ್ಪರ್ಧೆ ಇದೆ ಎಂದು ತಿಳಿದಾಗ ಇಲ್ಲಿ ಪಾಲ್ಗೊಳ್ಳಲೇ ಬೇಕು ಎಂದು ಬಂದೆ. ನನಗೆ ಹಾಡಲು ಅವಕಾಶ ಕೊಟ್ಟಿರಿ. ಧನ್ಯವಾದಗಳು.” ಹೀಗೆ ಮಾತನಾಡಿದ್ದು ಕುತೇಜಾ. ಆಕೆಯ ಅದಮ್ಯ ಆಶಯ, ಸಂಗೀತದ ಕುರಿತಾದ ಆಸಕ್ತಿ ಮತ್ತು ಅವಳಲ್ಲಿ ಇರುವ ದೃಢ ವಿಶ್ವಾಸಗಳು ಅಲ್ಲಿ ಸೇರಿದವರೊಳಗೆ ವಿದ್ಯುತ್ ಸಂಚಾರ ಉಂಟುಮಾಡಿತ್ತು. ಆಕೆಗೆ ದೃಷ್ಟಿಯ ಸಮಸ್ಯೆ ಇದೆ. ಅದೊಂದು ಕೇವಲ ದೈಹಿಕ ಕೊರತೆ ಎಂಬುದು ಬಿಟ್ಟರೆ ಆಕೆಯ ಅದಮ್ಯ ವಿಶ್ವಾಸವನ್ನು ಸರಿಗಟ್ಟುವವರಿಲ್ಲ ಎನಿಸಿದರೆ ಅದು ಅತಿಶಯೋಕ್ತಿಯಲ್ಲ.

ಇನ್ನೊಬ್ಬ ಯುವಕ, ಸಂಚಿತ್ ಶರ್ಮ ವಿಶೇಷ ಚೇತನ. ಆತ ‘ದೀಪದಿಂದ ದೀಪವ ಹಚ್ಚಬೇಕು ಮಾನವಾ...’ ಹಾಡುತ್ತಿರುವಾಗ ಆತನ ವೈಕಲ್ಯತೆಯ ಕುರುಹೂ ಕಾಣುತ್ತಿರಲಿಲ್ಲ. ಇನ್ನು ನಮ್ಮ ಕಟ್ಟಡ ಕಾರ್ಮಿಕರ ಕರುಳ ಕುಡಿ ಅದಮ್ಯ ಚೇತನ ಮನೋಜ್ ‘ಕುಲದಲ್ಲಿ ಕೀಳ್ಯಾವುದೋ ಹುಚ್ಚಪ್ಪ...’ ಹಾಡು ಶುರು ಮಾಡಿದಾಗ ಸಭಿಕರೆಲ್ಲರೂ ಬೆರಗಾಗುವಂತೆ.

ಇವೆಲ್ಲ ಅನುಭವಗಳು ನಮಗೆ ದಕ್ಕಿದ್ದು ಜನವರಿ 18 ರಂದು ‘ಸೌಹಾರ್ದ ಕರ್ನಾಟಕ’ ಬೆಂಗಳೂರು ದಕ್ಷಿಣ ಜಿಲ್ಲೆ ಆಯೋಜಿಸಿದ ಸೌಹಾರ್ದ ಗೀತ ಗಾಯನ ಸ್ಪರ್ಧೆಯಲ್ಲಿ.

ಜನವರಿ 30 ರಂದು ರಾಜ್ಯದಾದ್ಯಂತ ನಡೆದ ಸೌಹಾರ್ದ ಮಾನವ ಸರಪಳಿಯ ಭಾಗವಾಗಿ ಈ ವಿಶೇಷ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಜಿಲ್ಲೆಯ 4 ವಲಯ ಸಮಿತಿಗಳು ಮತ್ತು ಒಂದು ತಾಲೂಕಿನ ಸಂಘಟಿತ ಮತ್ತು ಅಸಂಘಟಿತ ವಲಯದ ಶ್ರಮಿಕ ಬಂಧುಗಳು ಮತ್ತವರ ಕುಟುಂಬವನ್ನು ಒಳಗೊಳ್ಳುವುದೇ ನಮ್ಮ ಉದ್ದೇಶವಾಗಿತ್ತು. ಈ ನೆಲೆಯಲ್ಲಿ ವಿಶೇಷ ಪ್ರಯತ್ನಗಳನ್ನು ನಡೆಸಿ, ಸ್ಪರ್ಧೆಗೆ ಸ್ಪರ್ಧಿಗಳಿಗೆ ನೊಂದಾಯಿಸಿಕೊಳ್ಳಲು ಕರೆ ನೀಡಲಾಗಿತ್ತು. ಮೂರು ವಿಭಾಗಗಳನ್ನು ಮಾಡಿ, ಎರಡು ವಿಭಾಗಗಳಲ್ಲಿ ವಿದ್ಯಾರ್ಥಿಗಳು ಮತ್ತು ಒಂದು ವಯಸ್ಕರು ಹಾಗೂ ಪದವಿ ವಿದ್ಯಾರ್ಥಿಗಳ ವಿಭಾಗವಿತ್ತು.

ಸೌಹಾರ್ದ ಗೀತೆ ಎಂದರೆ ಯಾವುದು?...

ಕರೆ ನೀಡಿದಾಗ ಮಕ್ಕಳು ಸ್ವಲ್ಪ ಗೊಂದಲಕ್ಕೆ ಬಿದ್ದ ಹಾಗೆ ಭಾಸವಾಯಿತು. ಅವರು ಕೇಳುತ್ತಿದ್ದರು, ಸೌಹಾರ್ದ ಗೀತೆ ಎಂದರೆ ಯಾವುದು? ಇದು ನಮ್ಮೆಲ್ಲರನ್ನೂ ಕಾಡಲೇಬೇಕಾದ ಪ್ರಶ್ನೆ. ಯಾಕೆಂದರೆ ಇಂದಿನ ವಾತಾವರಣ ಅಥವಾ ಶೈಕ್ಷಣಿಕ ಸಂದರ್ಭವನ್ನು ಗಮನಿಸಿದರೆ ಕೇವಲ ಪೈಪೋಟಿಯ ಪ್ರಪಂಚದಲ್ಲಿ ಏ.ಟಿ.ಎಂ ಗಳನ್ನು ಸಿದ್ಧಗೊಳಿಸುವ ಸ್ಥಿತಿ ಇದೆ. ಹಾಗೆಂದೇ ಮಕ್ಕಳ ಮನಸ್ಸಿನಲ್ಲಿ ಇಂತಹ ಪ್ರಶ್ನೆಗಳು ಏಳುವುದು ಸಹಜವೇ. ಆದರೆ ಒಂದು ಸಣ್ಣ ಸುಳಿವು ಕೊಟ್ಟಿದ್ದೇ ಸಾಕೆಂಬಂತೆ ಮಕ್ಕಳ ಆಯ್ಕೆ ಅತ್ಯಂತ ಸೂಕ್ತವಾಗಿತ್ತು. ಇದಕ್ಕೆ ಉದಾಹರಣೆ ನಾಲ್ಕು ಜನ ಮಕ್ಕಳು ‘ಕುಲದಲ್ಲಿ ಕೀಳ್ಯಾವುದೋ’ ಹಾಡು ಆಯ್ಕೆ ಮಾಡಿಕೊಂಡಿದ್ದರು. ಇಬ್ಬರು ಮಕ್ಕಳು ‘ದೀಪದಿಂದ ದೀಪವಾ ಹಚ್ಚಬೇಕು ಮಾನವಾ’ ಹಾಡು ಆಯ್ಕೆ ಮಾಡಿಕೊಂಡಿದ್ದರು. 76ರ ವಯೋಮಾನದ ಆನೇಕಲ್ ತಾಲೂಕಿನ ಸಮಂದೂರಿನ ಜಯಮ್ಮ ಕೂಡಾ ಅದೇ ಹಾಡನ್ನು ತಮ್ಮ ಆಯ್ಕೆಯನ್ನು ಮಾಡಿಕೊಂಡಿದ್ದು ಉಲ್ಲೇಖಾರ್ಹ. ಕಾರ್ಯಕ್ರಮದ ಉದ್ಘಾಟನೆಯನ್ನು ಆನೇಕಲ್ ನ ಪುಟ್ಟ ಕೃಷಿಕಾಳ ನೃತ್ಯದ ಮೂಲಕ ಮಾಡಲಾಯಿತು.

ಮನಸ್ಸುಗಳನ್ನು ಬೆಸೆಯುವ ಕೊಂಡಿಗಳ ಅಗತ್ಯವಿದೆ

ಸಮಾರೋಪದಲ್ಲಿ ಪಾಲ್ಗೊಂಡ ಸೌಹಾರ್ದ ಕರ್ನಾಟಕ ರಾಜ್ಯ ಸಂಚಾಲಕ ಎಸ್.ವೈ ಗುರುಶಾಂತ್ ರವರು ಇಂದಿನ ಸಂದರ್ಭದ ಗಂಭೀರತೆಯನ್ನು ವಿವರಿಸಿದರು. ಮನಸ್ಸುಗಳನ್ನು ಬೆಸೆಯುವ ಜರೂರಿನ ಕುರಿತು ಮಾತನಾಡುತ್ತ ಬಹುತ್ವ ಭಾರತದಲ್ಲಿ ಧರ್ಮ, ಭಾಷೆ, ಜಾತಿ, ಲಿಂಗಗಳ ಬೇಧವೆಣಿಸುವ, ಜನರನ್ನು ಒಡೆಯುವ ಕೆಲಸ ನಡೆಯುತ್ತಿರುವುದನ್ನು ಸಾದ್ಯಂತವಾಗಿ ವಿವರಿಸಿದರು. ಇಂತಹ ಹಲವು ಅಪಾಯಗಳನ್ನು ಸಮಾಜ ಎದುರಿಸುತ್ತಿರುವಾಗ ಅದಕ್ಕೆದುರಾಗಿ ಜನ ನಿಲ್ಲಬೇಕಿದೆ. ಜನರನ್ನು ಒಡೆಯುವ ಕೆಲಸ ಒಂದೆಡೆ ನಡೆಯುತ್ತಿರುವಾಗ ಮನಸ್ಸುಗಳನ್ನು ಬೆಸೆಯುವ ಕೊಂಡಿಗಳ ಅಗತ್ಯವಿದೆ ಎಂದರು.

ಗಾಂಧೀಜಿಯನ್ನು ಕೊಂದ ಸಿದ್ಧಾಂತದ ವೈಭವೀಕಣ

ಬೆಂಗಳೂರು ದಕ್ಷಿಣ ಜಿಲ್ಲೆಯ ಸೌಹಾರ್ದ ಕರ್ನಾಟಕ ವೇದಿಕೆಯ ಕೆ.ಎಸ್.ವಿಮಲಾ ಮಾತನಾಡಿ, ಜನರ ಸಮಸ್ಯೆಗಳಿಗೆ ಕಿವಿಗೊಡದ ಸರಕಾರಗಳು ಜನರ ಬವಣೆಗೆ ಧ್ವನಿಯಾಗುವ ಬದಲು, ಜನರ ಮಧ್ಯೆ ಗೋಡೆಗಳನ್ನು ಕಟ್ಟುತ್ತಿರುವ ಬಗ್ಗೆ ವಿವರಿಸಿದರು. ದೇಶದ ಸ್ವಾತಂತ್ರ್ಯ ಹೋರಾಟದ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ್ದ ಗಾಂಧಿ, ಸ್ವಾತಂತ್ರ ಗಳಿಸಿದ ದಿನದಂದು ಪಶ್ಚಿಮ ಬಂಗಾಲದ ಹೊತ್ತಿ ಉರಿಯುತ್ತಿದ್ದ ಕೋಮು ದಂಗೆಯ ಬೆಂಕಿಯನ್ನು ಆರಿಸಲು ನೌಕಾಲಿಯ ಬೀದಿಗಳಲ್ಲಿ ಓಡಾಡುತ್ತಿದ್ದರು. ತಮ್ಮ ಒಡೆದಾಳುವ ನೀತಿಯ ಬೀಜವನ್ನು ಬಿತ್ತಿದ ಬ್ರಿಟಿಷರ ನಯವಂಚಕ ನೀಚ ಕೃತ್ಯಕ್ಕೆ ಸಾಕ್ಷಿಯೆಂಬಂತೆ ದೇಶ ಸ್ವಾತಂತ್ರ್ಯ ಸಂಭ್ರಮದಲ್ಲಿ ತೇಲುತ್ತಿರುವಾಗ, ಪಶ್ಚಿಮ ಬಂಗಾಲದ ಬೀದಿಗಳು ಕೋಮುವಾದದ ಅಗ್ನಿಯಲ್ಲಿ ಬೇಯುತ್ತಿದ್ದವು. ಆಗ ಗಾಂಧಿ ಆಯ್ಕೆ ಮಾಡಿಕೊಂಡಿದ್ದು ಯೂನಿಯನ್ ಜಾಕ್ ಬಾವುಟದ ಬದಲು ದೇಶದ ಸ್ವಾತಂತ್ರದ ಸಂಕೇತವಾದ ತ್ರಿವರ್ಣ ಧ್ವಜಾರೋಹಣದ ಸಂಭ್ರಮದಲ್ಲಿ ಪಾಲ್ಗೊಳ್ಳುವುದಲ್ಲ, ಬದಲಿಗೆ ರಕ್ತ ಸಿಕ್ತ ನೌಕಾಲಿಯ ಬಡ ಜನರ ಮಧ್ಯೆ ಕೋಮು ವಿದ್ವೇಷದ ಬದಲು ಶಾಂತಿಯ ಸಿಂಚನ ಎರಚಲು ಅಲ್ಲಿಗೆ ತೆರಳುವುದು.

ಸತ್ಯ ಶಾಂತಿಯನ್ನು ಬೋಧನೆ ಮಾಡಿದ ಗಾಂಧಿ ಪರಮ ಭಕ್ತರಾಗಿದ್ದವರು. ಧರ್ಮಪಾಲಕರಾಗಿದ್ದರಾದರೂ, ಅನ್ಯ ಧರ್ಮಗಳ ಬಗ್ಗೆ ದ್ವೇಷ ಹೊಂದಿದವರಾಗಿರಲಿಲ್ಲ. ಪ್ರತಿನಿತ್ಯ ವ್ಯತ್ಯಯವಿಲ್ಲದಂತೆ ಪ್ರಾರ್ಥನೆ ಮಾಡುತ್ತಿದ್ದ ಗಾಂಧಿ, 1948 ರ ಜನವರಿ 30ರಂದು ಸಂಜೆಯ ಪ್ರಾರ್ಥನೆಯ ವೇಳೆಗೆ ನಾಥೂರಾಮ್ ಗೋಡ್ಸೆ ಎಂಬ ಹಂತಕನ ಗುಂಡಿಗೆ ಬಲಿಯಾಗಿ ಕೆಳಗೆ ಬೀಳುವಾಗ, ಅವರ ಬಾಯಿಂದ ಹೊರಟ ಉದ್ಗಾರ ಹೇ ರಾಂ ಎಂಬುದಾಗಿತ್ತು.

ಇಂದು ಗಾಂಧಿಯನ್ನು ಕೊಂದ ಸಿದ್ಧಾಂತವನ್ನು ವೈಭವೀಕರಿಸಲಾಗುತ್ತಿದೆ. ಗಾಂಧಿಯ ಜಾಗದಲ್ಲಿ ಗೋಡ್ಸೆಯನ್ನು ಕೂರಿಸಲಾಗುತ್ತಿದೆ. ಸತ್ಯ ನಿಷ್ಠುರಿ ರಾಮನ ಜಾಗದಲ್ಲಿ ಓಟಿನ ಬೇಟೆಯ ರಾಮನನ್ನು ಕೂರಿಸಲಾಗುತ್ತಿದೆ. ಹಸಿದವರಿಗೆ ಅನ್ನ ನೀಡಲು ನಿರಾಕರಿಸುವವರು ರಾಮನ ಹೆಸರಿನಲ್ಲಿ ಮನೆಗಳಿಗೆ ಅಕ್ಷತೆ ಹಂಚುತ್ತಾರೆ. ಜನರನ್ನು ಭ್ರಾಮಕ ಸ್ಥಿತಿಗೆ ತಳ್ಳುತ್ತ ಅವರ ದೈನಂದಿನ ಬದುಕಿನ ಪ್ರಶ್ನೆಗಳನ್ನು ಮರೆಸುವ ಪ್ರಯತ್ನ ಹೆಚ್ಚಿರುವ ಬಗ್ಗೆ ಕೆ.ಎಸ್.ವಿಮಲಾ ವಿವರಿಸಿದರು. ಪರಸ್ಪರ ಕೂಡಿ ಬದುಕುತ್ತಿದ್ದ ಜನರನ್ನು ಧರ್ಮ ದೇವರ ಹೆಸರಿನಲ್ಲಿ ಒಡೆಯುತ್ತಿರುವಾಗ ದೇಶದ ಸಂಪತ್ತು ಸೃಷ್ಟಿ ಮಾಡುವ ಶ್ರಮಿಕ ವರ್ಗ ಅದಕ್ಕೆ ಎದುರಾಗಿ ಸಹಬಾಳ್ವೆಯ ಸಂದೇಶವನ್ನು ಗಟ್ಟಿಯಾಗಿ ಕೂಗಿ ಹೇಳಬೇಕಿದೆ. ಅದರ ಒಂದು ಭಾಗ ಜನವರಿ 30ರಂದು ನಡೆಯುವ ಸೌಹಾರ್ದ ಮಾನವ ಸರಪಳಿ ಕಾರ್ಯಕ್ರಮ. ಅಲ್ಲಿ ನಮ್ಮ ದೇಶದ ವೈವಿಧ್ಯತೆಯಲಿ ಏಕತೆಯ ಮಂತ್ರವನ್ನು ಪುನರುಚ್ಚರಿಸೋಣ. ಎಲ್ಲರೂ ಕೂಡಿ ಬಾಳೋಣ ಎಂದು ಕರೆ ನೀಡಿದರು.

ಸೌಹಾರ್ದ ಕರ್ನಾಟಕ ವೇದಿಕೆಯ ಪ್ರಮುಖರಾದ ಕೆ.ಎಸ್.ಲಕ್ಷ್ಮಿ, ಬಸಮ್ಮ, ಸಿ.ಜಿ.ಶ್ರೀಪತಿ, ಕಾರ್ಮಿಕ ಮುಖಂಡರುಗಳಾದ ಬಿ.ಎನ್.ಮಂಜುನಾಥ್, ಮಹಂತೇಶ್, ಸುನೀಲ್, ಸುರೇಶ, ಚಳವಳಿಯ ಹಿರಿಯ ಸಂಗಾತಿ ಟಿ.ಸುರೇಂದ್ರ ರಾವ್, ಐ.ಟಿ ಉದ್ಯೋಗಿಗಳ ಸಂಘಟನೆಯ ಮುಖಂಡರುಗಳಾದ ಸೂರಜ್, ಶಮ್ಮಿ, ಚಿತ್ರಾ ಮತ್ತಿತರರು, ಮಹಿಳಾ ಸಂಘಟನೆಯ ಪಾರ್ವತಮ್ಮ ಎಸ್. ಎಂ, ಮನೆಗೆಲಸ ಸಂಘಟನೆಯ ಮಾದೇವಿ, ಶ್ರಮಿಕರ ಕ್ಲಿನಿಕ್ ನ ಸವಿತಾ ಮತ್ತಿತರರು ಪಾಲ್ಗೊಂಡಿದ್ದರು. ವಿಮಾ ನೌಕರ ಸಂಘಟನೆಯ ಸಂಗಾತಿಗಳಾದ ಲತಾ, ಶ್ರೀನಾಥ್, ವಿಜಯ್ ಕುಮಾರ್ ರವರುಗಳು ತೀರ್ಪುಗಾರರಾಗಿ ಪಾಲ್ಗೊಂಡಿದ್ದರು. ತೀರ್ಪುಗಾರರ ಪರವಾಗಿ ಮಾತನಾಡಿದ ಲತಾ, ಇಂತಹ ಅತ್ಯತ್ತಮ ಕಾರ್ಯಕ್ರಮ ಸಂಘಟಿಸಿದ ಸೌಹಾರ್ದ ಕರ್ನಾಟಕ ವೇದಿಕೆಯನ್ನು ಮತ್ತು ಅತ್ಯುತ್ಸಾಹದಿಂದ ಪಾಲ್ಗೊಂಡ ಎಲ್ಲ ಸ್ಪರ್ಧಿಗಳನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ಯೋಗ ಪಟು ಐಶ್ವರ್ಯಾ ಮತ್ತು ಅಮೂಲ್ಯಾರವರ ಯೋಗ ಪ್ರದರ್ಶನಗಳು ವಿಶೇಷ ಆಕರ್ಷಣೆಗಳಾಗಿದ್ದವು.



JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**